ತುಂಗಮ್ಮನ ತವರುಮನೆ



— ಎಸ್. ವೆಂಕಟರಾಜ —

ತುಂಗಭದ್ರೆಯ ತವರುಮನೆ

(ಸಾಮಾಜಿಕ ಕಾದಂಬರಿ)

ಎಸ್. ವೆಂಕಟರಾಜ

೧೯೫೬

ಶ್ರೀಕೃಷ್ಣಪ್ರಕಾಶನ, ಉಡುಪಿ

ಬೆಲೆ: ಹದಿನಾಲ್ಕಾಣೆ

ಮುದ್ರಕರು:
ಮೆಜಿಸ್ಟಿಕ್ ಪ್ರೆಸ್,
ಉಡುಪಿ

ಬರೆದ ಕಾಲ 29—3—1954—29—11—1954

ಪ್ರಕಾಶಕರು:
ಶ್ರೀ ಕೃಷ್ಣ ಪ್ರಕಾಶನ,
ಉಡುಪಿ.

ಮುನ್ನುಡಿ

ತುಂಗಮ್ಮನ ತವರುಮನೆಯು ಒಂದು ಹಳ್ಳಿಯ ರೂಪರೇಖೆಯ ಚಿತ್ರಣವಾಗಿದೆ. ಕವಿಯು ತನ್ನ ಕುತೂಹಲ ದೃಷ್ಟಿಯನ್ನು ಹಳ್ಳಿಯ ಕಡೆ ಹರಿಸಿದಾಗ ಇಂತಹ ಸಂದರ್ಭ—ಸನ್ನಿವೇಶಗಳನ್ನು ಪ್ರತಿ ಹಳ್ಳಿಯಲ್ಲೂ ಕಂಡೇ ಕಾಣುವನು. ತುಂಗಮ್ಮ ಒಂದು ಹಳ್ಳಿಯ ಒಂದು ವ್ಯಕ್ತಿಯಲ್ಲ-ಎಲ್ಲ ಹಳ್ಳಿಗಳ ಸರ್ವಸಾಮಾನ್ಯ ವ್ಯಕ್ತಿ. ಅವಳ ಸುಖದುಃಖದ ಮಿಡಿತ ಎಲ್ಲಾ ಹಳ್ಳಿಗಳ ಅಂತಹ ಹೆಣ್ಣುಗಳ ಹೃದಯದ ಮಿಡಿತವಾಗಿದೆ. ಹಳ್ಳಿಗರು ತಮ್ಮ ನಿತ್ಯ ಜೀವನದಲ್ಲಿ ಇದಿರಿಸುವ ವಿಚಾರಗಳೇ ಇಲ್ಲಿ ಸಮೃದ್ಧವಾಗಿ ಬಂದಿರುವುದರಿಂದ ನಾಗರಿಕತೆಯ ಸೂಕ್ಷ್ಮ ರೇಖೆಯು ಇಲ್ಲಿ ಕಂಡು ಬರಲಾರದಾದರೂ ಹಳ್ಳಿಗರ ಸಹೃದಯತೆಯ ಸ್ವಚ್ಛಂದ ವೃತ್ತಿಗೆ ಇಲ್ಲಿ ನ್ಯೂನತೆ ಇರಲಾರದು. ಇಲ್ಲಿಯ ವ್ಯಕ್ತಿಗಳನ್ನು ಅಂತಹ ದೃಷ್ಟಿಯಿಂದಲೇ ಕಂಡು ತಿಳಿಯಲೆತ್ನಿಸಿದರೆ ತುಂಗಮ್ಮನಂತಹ ನಿರಾಡಂಬರದ ಹೆಣ್ಣು—ಸುಬ್ಬಣ್ಣನಂತಹ ಸರಳ ಜೀವಿ—ಕಾವೇರಿಯಂತಹ ಕಾಲು ಜಾರಿದರೂ ವ್ಯಕ್ತಿತ್ವವನ್ನು ಕಳೆದುಕೊಳ್ಳದ ಹೆಂಗುಸು—ರಾಮಿಯಂತಹ ಸಿಡುಕು ಗಾರ್ತಿ—ಗೌರಿಯಂತಹ ಹಳ್ಳಿಯ ಉಪಯುಕ್ತ ಜನರನ್ನು ಒಮ್ಮೆ ಮೆಚ್ಚ ಲೂಬಹುದು. ಇಂತಹ ಸಾಮಾನ್ಯ ವ್ಯಕ್ತಿಗಳ ಹೊರತು ಹೆಬ್ಬಾರರು—ಸೇರೆಗಾರರು—ಹೆಗ್ಗಡೆಯರು-ಇವರಂತಹ ಸಾತ್ವಿಕರನ್ನು ಯಥಾವತ್ತಾಗಿ ಈ ಕತೆಯಲ್ಲಿ ಬಳಸಿಕೊಂಡಿರುವೆನಾದರೆ ಅದಕ್ಕಾಗಿ ಅವರೊಡನೆ ಕ್ಷಮಾ ಯಾಚನೆ ಮಾಡಲಿರುವೆನು.

ಸಮಾಜ ದೋಷಗಳನ್ನು ಬಹಳ ಸಂಕುಚಿತ ದೃಷ್ಟಿಯಿಂದ ನೋಡು ವುದೊಂದು ವಿವೇಕದ ಮಾರ್ಗವಲ್ಲ. ಅಂತಹ ದೋಷಗಳಿಂದ ವ್ಯಕ್ತಿಯ ಹೊರತು ಸಮಾಜಕ್ಕೇನೂ ಬಾಧಕವಿಲ್ಲದಾಗ ನಮ್ಮ ಗ್ರಹಿಕೆಯೂ ಕೊಂಚ ವಿಶಾಲವಾಗಿಯೇ ಇರಬೇಕಾಗಿದೆ. ಆಗ ವ್ಯಕ್ತಿಯ ದೋಷಕ್ಕಿಂತಲೂ ವ್ಯಕ್ತಿತ್ವದ ಕಡೆಗೇ ಗಮನ ಹರಿಸಿ ಸಹನೆಯ ತೂಗು ತಕ್ಕಡಿಯನ್ನು ಹಿಡಿದು ಗುಣಗಳ ಪರಿಗಣನೆಗೆ ತೊಡಗಬೇಕಾಗಿರುವುದು ಮಾನವ್ಯದ ಧರ್ಮವಾಗಿದೆ.

ತುಂಗಮ್ಮನೂ ತನ್ನ ತವರಿನಲ್ಲಿ ಅಂತಹ ಗುಣಗಳನ್ನು ಕಂಡು ಕೊಂಡಳು. ಇತರರೂ ಅದನ್ನೇ ಕಂಡುಕೊಂಡರು. ಆಗಲಾಗ ಅವರ ಬಾಂಧವ್ಯದ ಬೆಸುಗೆಯು ಕೂಡಿ ಸಂಪರ್ಕವು ಸಮಾಚೀನವಾಯಿತು. ಪುಟ ವಿಕ್ಕಿದ ಚಿನ್ನದಂತೆ ಬೇಡವಾದ ಬೇಸರದ ಬೆರಕೆಯು ಕಳೆದು ಬದುಕು ಬಂಗಾರವಾಯಿತು.

ಇದೇ ತುಂಗಮ್ಮನ ತವರು ಮನೆಯ ವಿಚಾರ.

೧೦—೮—೧೯೫೬ ಎಸ್. ವೆಂಕಟರಾಜ.

ಪರಿವಿಡಿ



ಶ್ರೀ. ಎಸ್. ವೆಂಕಟರಾಜರ ಅನ್ಯ ಕೃತಿಗಳು

★

ಕಿರಿಯರ ಪ್ರಪಂಚ, ಉಡುಪಿ. ಇವರಿಂದ—

೧ ರಂಗಭೂಮಿ
೨ ಆಕಾಶಗಂಗೆ
೩ ಎರಡು ಏಕಾಂಕ ನಾಟಕಗಳು
೪ ಕವಿತಾ ಕಾಮಿನಿ ಭಾಗ ೧
೫ ಸಪ್ತಸಾಗರ

ಶ್ರೀಕೃಷ್ಣಪ್ರಕಾಶನ, ಉಡುಪಿ. ಇವರಿಂದ-

೬ ಅಂಬುಜಾಕ್ಷಿ
೭ ಧರ್ಮಶಾಲೆ
೮ ತುಂಗಮ್ಮನ ತವರುಮನೆ

ಅಚ್ಚಿನಲ್ಲಿ

೯ ಕೈಲಾಸದಲ್ಲಿ ಕಮ್ಯುನಿಷ್ಟರು
೧೦ ಕಾವ್ಯಮನೋರಮಾ (ಕನ್ನಡ—ಸಂಸ್ಕೃತ)

ತುಂಗಮ್ಮನ ತವರುಮನೆ

ಹೆಜ್ಜೆ ೧ — ತವರುಮನೆಯಿಂದ

ಹೆಣ್ಣಿಗೆ ತವರುಮನೆ ಸಮೃದ್ಧವಿರಬೇಕು. ಗಂಡನ ಮನೆಯು ಮಂದಿಮಾರ್ಬಲಗಳಿಂದ ಎಷ್ಟೇ ತುಂಬಿ ತುಳುಕಾಡುತಿರಲಿ— ಸದಾ ಸುಖಶಯ್ಯೆಯಲ್ಲಿ ಮಲಗಿ ಮೆಲುಕು ಹಾಕುತಿರಲಿ— ಒಂದು ಕೆಡುಗಳಿಗೆಯಲ್ಲಿ ಸಿಡಿಲಿನಂತೆ ಬಂದೆರಗುವ ಆಕಸ್ಮಿಕ ಆಘಾತದ ಅಪಸ್ಮಾರಕ್ಕೆ ಕರೆವಾಗ ಓ ಕೊಳಲಿರುವ ಬಡತನದ ಹುಲ್ಲು ಮಾಡಿನ ಮರೆಯಾದರೂ ಚಿಂತಿಲ್ಲ—ತಬ್ಬಿತೆರವುಗೊಡಲಿರುವ ತಾಯಮನೆಯೊಂದು ಇದ್ದಿರಲಿಕ್ಕೆ ಬೇಕು. ಹೆತ್ತು ಹಗರಣವಾದಾಗ ಬಾಳಿನ ಬೇನೆಯ ಶುಶ್ರೂಷೆಗಾಗಿ— ಮೊದಲ ಮಗುವಿನ ಕೂಗು ಕೇಳಲಿರುವಾಗ ಸಂತೋಷದ ಅತಿರೇಕದ ಸ್ಫುರಣೆಗಾಗಿ ತನ್ನ ಹುಟ್ಟು ಹವಣಿಸಿಕೊಂಡ ತನ್ನ ಬೆಳವಣಿಗೆಯ ಹೆಜ್ಜೆ ಹೆಜ್ಜೆಗಳನ್ನು ಬಳಸಿಕೊಂಡ ತನ್ನದೆಂಬ ಆತ್ಮೀಯತೆಯ ಏಕಮೇವ ಆಶ್ರಯವಾಗಿ ಬೇಕಾದಾಗಲೆಲ್ಲ ಬಾಗಿಲು ತೆರೆದು ಬಿಗಿದಪ್ಪಲಿರುವ ತವರು ಮನೆಯು ಹೆಣ್ಣಿಗೊಂದು ಗೌರವದ ಸ್ಥಾನ. ತವರು ಮನೆಯು ಹಿತವಾಗಿದ್ದರೆ ಗಂಡನ ವಾಸವು ನಯವಾಗಿ ನುಣುಪಾಗಿ ಸಾಗಲಿರುವುದು. ಪದೇಪದೇ ತವರು ಮನೆಯ ಸದ್ದು ಕೇಳಿಬರುತಿದ್ದರೆ ಗಂಡನ ಮನೆಯ

ಅತ್ತೆ ನಾದಿನಿಯರ ಇಲಿಗಳ ಕಾಟ ಕಡಿಮೆಯಾಗಿ ಅಡಗಿ ಹೋಗುವುದು. ಹೆಂಡತಿಗೊಂದು ಹೊಡೆಯಬೇಕೆಂಬ ಅನಿವಾರ್ಯ ಸ್ಫೂರ್ತಿ ಬಂದಾಗ ತವರು ಮನೆಯ ಸಪ್ಪಳವಾಯಿತೆಂದರೆ ಆ ಸ್ಫೂರ್ತಿಯ ಗರ್ಭಸ್ರಾವ ವಾಗುವುದು! ಅತ್ತೆಯ ಕಡೆಗೋಲು ಸೌಟು ಸಟ್ಟುಗಗಳೆಲ್ಲಾ ಮೃದುವಾಗಿ ಮೂಲೆ ಸೇರುವುವು ! ಅಂತೂ ಪ್ರಪಂಚವೆಂಬ ಅಡುಗೆ ಮನೆಯಲ್ಲಿ ಸೊಸೆ ಯೆಂಬ ಬೆಕ್ಕಿನ ಪಿಳ್ಳೆಗೆ ತವರುಮನೆಯೇ ಒಂದು ಒಲೆಯ ಬೆಚ್ಚನೆ ಬಿಡಾರ !

ತುಂಗಮ್ಮ ಗಂಡನಮನೆ ಸೇರುವಾಗ ಅವಳ ಡೌಲಿಗೇನೂ ಕಡಿಮೆ ಯಿದ್ದಿಲ್ಲ. ಮೈನೆರೆಯದ ಹುಡುಗಿಯನ್ನು ಆ ಸಮಾಜದ ರೀತಿನೀತಿ ಗಳಿಗನುಗುಣವಾಗಿ ಅವಳ ತಾಯಿ ಕಾವೇರಿ ಹಳ್ಳಿಯ ಕೊಂಪೆಯಾದರೂ ಒಂದು ದೊಡ್ಡ ಕುಟುಂಬಕ್ಕೆ ಹೊಂದಿಸಿ ಕೊಟ್ಟಿದ್ದಾಳೆ. ಆ ಒಂದೇಮನೆ ಯಲ್ಲಿ ದಿನವೊಂದಕ್ಕೆ ಒಂದು ಸೇರು ಉಪ್ಪು ಖರ್ಚಾಗುವ ಅಳಿಯಗಟ್ಟಿನ ಬೇಸಾಯಗಾರರ ಮನೆ. ಹತ್ತುತಲೆಮಾರಿನಿಂದಲೂ ಅದೇ ಹಿಡುವಳಿಯ ಬೇಸಾಯದಲ್ಲಿ ಗೇಣಿತೆತ್ತು ಸುಖವಾಗಿ ಸಾಲವಿಲ್ಲದೆ ಬಾಳಿಬಂದ ಮನೆ. ಯಾರಿಗಾದರೂ ಬೆಲ್ಲನೀರು ಕೊಟ್ಟು ಮೂರು ಹೊತ್ತು ಗಂಜಿ ಹಾಕಿ ಕಳುಹಿಸಲಿರುವ ಎರಡು ಸೀಳಿನ ಹುಲ್ಲು ಚಾವಣಿಯ ಮನೆ. ಅಕ್ಕಪಕ್ಕದ ಎರಡು ದೊಡ್ಡ ಕೊಟ್ಟಿಗೆಗಳು. ಇದಿರುಗಡೆಯ ಮೂರು ಜೋಡು ಕೋಣ ಕಟ್ಟುವ ಹಟ್ಟಿ. ಅಲ್ಲೀ ಆ ಕಡೆ ಬತ್ತ ಬೇಯಿಸಲಿರುವ ಮತ್ತೊಂದು ಜೋಪಡಿ. ಇವುಗಳೆಲ್ಲಾ ಅಲ್ಲಿ ಇತರರಿಗೆ ಸಾಮಾನ್ಯವಾಗಿ ಇರಲಾರದ ಸೌಕರ್ಯಗಳ ದೊಡ್ಡ ಮನೆ! ಇಂತಹ ಮನೆಗೆ ಕಾವೇರಿಯು ತನ್ನ ಚಿಕ್ಕ ಅಚ್ಚುಕಟ್ಟಿನ ಮನೆಯಿಂದ ಮೆಲ್ಲಮೆಲ್ಲನೆ ಮಗಳನ್ನು ತಳ್ಳಿ ಹೊಂದಿಸಿ ಕೊಟ್ಟಿದ್ದಾಳೆ. ಅವಳ ಇನ್ನೆರಡು ಹಿರಿಯ ಹುಡುಗಿಯರಿಗೆ ಈ ಮೊದಲೇ ಮದುವೆಯಾಗಿದ್ದಿತು. ಇವಳು ಹುಟ್ಟಿ ಕೆಲವು ವರ್ಷಗಳಲ್ಲಿ ಗಂಡ ತೀರಿಹೋದುದರಿಂದ ಕುಟುಂಬದವರೊಡನೆ ಸೇರಲಿಷ್ಟವಿಲ್ಲದೆ, ಒಂದು ಒಳಬೇಸಾಯವನ್ನು ಮಾಡಿಕೊಂಡು ಕಾಲಕ್ಷೇಪ ಮಾಡುತಿದ್ದಳು. ಈ ಚಿಕ್ಕ ಮಗಳ ಮದುವೆಯಾದಂದಿನಿಂದ ಮೇಲಿನೆರಡು ಚಿಕ್ಕಚಿಕ್ಕ ಮಕ್ಕಳ ರಕ್ಷಣೆಯ ಭಾರವನ್ನು ತಾನೇ ಹೊತ್ತುಕೊಂಡು ಆ ಅರೆಬೇಸಾಯ

ದಿಂದ ಕೆಲವು ತಿಂಗಳುಗಳ ಪಥವನ್ನೂ ಮತ್ತೆ ಬೇರೆ ದುಡಿತಗಳಿಂದ ಉಳಿದ ತಿಂಗಳುಗಳ ಜೀವನವನ್ನೂ ಸಾಗಿಸುತಿದ್ದಳು. ಆದರೂ ತನ್ನ ಮಗಳಂದಿರ ಆಗು ಹೋಗುಗಳಲ್ಲಿ ಅವಳು ಆಸ್ಥೆವಹಿಸದೆ ಹಿಂದುಳಿಯುತ್ತಿರಲಿಲ್ಲ. ತುಂಗಮ್ಮ ಮೈನೆರೆದಾಗ ತೊಡವು—ತೊಡಮನೆಗಳನ್ನೆಲ್ಲಾ ಬೇಕಾದಂತೆ ಅಥವಾ ತುಸು ಕೈ ಬಿಟ್ಟೇ ನಡೆಸಿದ್ದಳು. ದೊಡ್ಡ ಬೇಸಾಯದವರ ಕುಟುಂಬಕ್ಕೆ ಕೊಟ್ಟ ಹೆಣ್ಣಿಗೆ ಕಡಿಮೆಯಾದರೆ ಆ ಕುಟುಂಬದ ಬೇರೆ ಹಲವು ಹೆಣ್ಣುಗಳಿಂದ ಅವಜ್ಞೆಯು ಬಂದು ತನ್ನ ಮಗಳ ಸುಖಕ್ಕೆ ಹಾನಿ ಬರಬಹುದೆಂಬ ಭೀತಿಯಿಂದ ಕಡಕಟ್ಟುಗಳಿಂದಲಾದರೂ ಹಣವನ್ನು ಒದಗಿಸಿಕೊಂಡು ಸಮ್ಮಾನ ಊಟವನ್ನು ನಡೆಸಿದ್ದಳು. ಆದುದರಿಂದ ಮರ್ಯಾದಸ್ಥರ ಮನೆ ಹೆಣ್ಣೆಂಬ ಖ್ಯಾತಿಗೊಂಡು ತುಂಗಮ್ಮ ಅತ್ತೆಮನೆಯವರ ಆದರಕ್ಕೊಳಗಾಗಿದ್ದಳು.

ಬಂಡವಾಳವಿಲ್ಲದ ಬರೇ ಗೌರವವು ಯಾವಾಗಲೂ ಕಷ್ಟಕ್ಕೆ ಕಾರಣವಾಗುವುದು. ಕಾವೇರಿಗೆ ಕಡಕಟ್ಟುಗಳನ್ನು ಹಿಂದೆರುವುವರಲ್ಲಿ ಕೈಗಿಡ್ಡವಾಯಿತು. ನೆರೆಮನೆಯ ಐತು ಪೂಜಾರಿಯು ಒಳಒಕ್ಕಲಾಗಿ ಗೇಣಿಗೆ ವಹಿಸಿಕೊಂಡ ಆಸ್ತಿಯ ಪಾಲಿನ ಗೇಣಿಯನ್ನು ಸಂದಾಯಮಾಡಲು ಆ ವರ್ಷ ಸಾಧ್ಯವಾಗದೆ ಹೋಯಿತು. ಆದುದರಿಂದ ಅವಳು---ಐತಣ್ಣ—ನೀನೇ ಈ ವರ್ಷ ಧನಿಯವರಿಗೆ ಗೇಣಿ ಕೊಡಬೇಕು. ನಾನು ಹೊಲಿ ಕೂಡಿಸಿ ಮರುವರುಷ ಪಾವತಿ ಮಾಡಿಯೇನು. ಈ ಉಪಕಾರ ನಿನ್ನಿಂದ ಆಗಬೇಕು—ಎಂದು ಅಂಗಲಾಚದೆ ಉಪಾಯವಿಲ್ಲದಾಯಿತು.

ಸಹಜವಾಗಿಯಾದರೆ ಕಾವೇರಿಯು ಅಂಗಲಾಚಲು ಎಂದೆಂದಿಗೂ ಹಿಂದೆ ಸರಿಯುತಿದ್ದಳು. ಒಬ್ಬಂಟಿಗಳಾಗಿರುವ ಹೆಣ್ಣುಹೆಂಗುಸು ಹೀಗೆ ಉಪಕಾರಬೇಡಲು ಹೊರಟರೆ ಅದರ ಪರಿಣಾಮವು ನೆಟ್ಟಗಾಗುವುದಿಲ್ಲವೆಂದು ಅವಳೇ ಮೊದಲು ಹೇಳುತಿದ್ದಳು. ಅದರಲ್ಲೂ ಐತಣ್ಣ ತನ್ನ ಒಂದು ಉಪಕಾರಕ್ಕೆ ಎರಡು ಪ್ರತ್ಯುಪಕಾರಗಳನ್ನು ಪಡೆಯದ ನಿಸ್ವಾರ್ಥಿಯಲ್ಲ. ಇಂತಹ ಪ್ರತ್ಯುಪಕಾರಗಳನ್ನು ಧಾರಾಳವಾಗಿ ಪಡೆದು ಅವನು ಆಸುಪಾಸಿನ ಹೆಂಗುಸರಿಗೆ ಕೊಂಚ ಕೊಂಚ ಉಪಕಾರ ಮಾಡಿದ ದಾಖಲೆ ಆ ಹಳ್ಳಿಯಲ್ಲಿ ಧಾರಾಳವಾಗಿ ತಿಳಿದಿದೆ. ಅಂತಹನೊಡನೆ ಬೇಡುವುದು

ನ್ಯಾಯವಲ್ಲವೆಂದು ಕಾವೇರಿ ಒಮ್ಮೆ ಅಳುಕಿದರೂ ಬೇರೆ ಸಾಲಗಳ ತಗಾದೆಯಿರುತ್ತಾ ಅವರನ್ನೇ ಪುನಃ ಪುನಃ ಕಾಡುವುದಕ್ಕಿಂತ ತನ್ನ ಜಾಗಿನವನೊಡನೆಯೇ ದುಃಖವನ್ನು ಸುಲಭವಾಗಿ ತೋಡಿಕೊಳ್ಳಬಹುದೆಂದು ಭಾವಿಸಿದ್ದಳು. ಅಲ್ಲದೆ ಆ ಹಿಡುವಳಿಯಿಂದಲೇ ಅವನ ಸಾಲ ತೀರಿಸುವಲ್ಲಿ ಐತಣ್ಣನಿಂದ ಮುಂದಿನ ಬೇಸಾಯಕ್ಕೆ ಕೊಂಚ ಸಹಾಯ ಪಡೆಯಬಹುದೆಂಬ ಕಲ್ಪನೆಯೂ ಅವಳದಾಗಿದ್ದಿತು. ಎಣಿಸಿದ ವಿಚಾರಗಳೆಲ್ಲಾ ಚೆಲೋದೆ! ಆದರೆ ಫಲಿತಾಂಶವು ವ್ಯತಿರಿಕ್ತವಾಗಿ ಹೋಯಿತು. ಕಾವೇರಿಯ ಮಾತಿನಲ್ಲೇ ಹೇಳುವುದಾದರೆ—ಅದೊಂದು ಕೆಟ್ಟಗಳಿಗೆ! ತುಂಗಮ್ಮನನ್ನು ಮದುವೆಮಾಡಿಕೊಟ್ಟಂದಿನಿಂದ ಅವಳ ಮನೆ ಖಾಲಿಯಾಗುತ್ತ ಬಂದಿದೆ. ಅವಳ ಬೆನ್ನ ಕಡೆ ಸುಳಿ, ಹೋದ ಮನೆಗೆ ಬೆಳೆಯನ್ನೂ ಹೊರಟ ಮನೆಗೆ ಕಳೆಯನ್ನೂ ತುಂಬಿಸುವುದು.' ಆದುದರಿಂದಲೇ ಆ ವರ್ಷ ಅವಳ ಅಗೆ ಹಾಳಾಗಿ ಕಳೆತುಂಬಿ ಬೆಳೆಕೆಟ್ಟು ಹೋಗಿದೆ. ಬತ್ತ ತುಂಬಬೇಕಿದ್ದ ಶಿರಿಯಲ್ಲಿ ದೇವಕ್ಕೈಯ ಜಡ್ಡು ತುಂಬಿದೆ. ಅದು ಸಾಲದೆ ಉಳುವ ಜೋಡಿನಲ್ಲಿ ಒಂದು ಕೋಣ ನಡುಮಧ್ಯಾಹ್ನ ಬಿದ್ದು ಎರಡು ತಡವೆ ಹೊರಳಾಡಿ ಸತ್ತೇಹೋಗಿದೆ. ಈ ಎಲ್ಲಾ ನಷ್ಟಕಷ್ಟಗಳನ್ನು ತುಂಬುವರಾರು? ಐತಣ್ಣನ ತಗಾದೆ ಹೆಚ್ಚಾಯಿತು. ಅದರಲ್ಲೂ ಐತಣ್ಣನಿಗೆ ಕೊಟ್ಟ ಸಾಲ ಕೇಳುವುದರಲ್ಲಿ ಸಮಯ ಸಂದರ್ಭವಿರಲಿಲ್ಲ. ಮುಂಜಾನೆ ಹಾಡಿಯ ಬಳಿ ತರಗೆಲೆ ಕೂಡಿಸುತಿದ್ದಾಗ—ಮುಸ್ಸಂಜೆ ಬಾಳೆಯ ತೋಟಕ್ಕೆ ನೀರೆರೆಯುತಿದ್ದಾಗ ಅವನಿಗೆ ಸಾಲಕೇಳುವ ವಿಚಿತ್ರ ಚಟವಿದ್ದಿತು. ಇವುಗಳಿಂದೆಲ್ಲಾ ಪಾರಾಗಿ ಅವನನ್ನು ಸಮಜಾಯಿಸುತ್ತ ಬಂದಂತೆ ಒಂದು ದಿನ ರಾತ್ರಿ ಬಚ್ಚಲುಮನೆಯಲ್ಲಿ ಬಿಸಿನೀರು ಮಾಯುತಿದ್ದಾಗ ಒಮ್ಮಿಂದೊಮ್ಮೆಗೆ ಗುಡಾಣದ ಹಿಂದೆ ಅವನ ಉದಯವಾಗಲು ಕಾವೇರಿ ನಾಚಿ ಕಕ್ಕಾಬಿಕ್ಕಿಯಾದಳು. ಅರೆಸೆರಗನ್ನು ಮೇಲೆಳೆದುಕೊಳ್ಳುತ್ತಾ ಅವಳು ತುಸು ಗಡುಸಾಗಿ—ಏನಿದು ಐತಣ್ಣ? ನಾನು ಸಾಲ ಮಾಡಿರಬಹುದು. ಆದರೆ ಅದರಿಂದೇನೂ ಹೆಚ್ಚು ಕೇಳಲು ನಿನಗೆ ಅಧಿಕಾರವಿಲ್ಲ. ಅದಕ್ಕೂ ಒಂದು ಸಮಯವಿಲ್ಲವೆ? ಈಗ—ಈ ನಡುರಾತ್ರಿ ಹೊತ್ತು ಇದರ ಅರ್ಥವೇನು?-ಎಂದಳು.

ಐತಣ್ಣ ಈ ಹಿತೋಕ್ತಿಗಳಿಂದೆಲ್ಲಾ ಪರಾಸ್ತನಾಗುವ ಭಾವಜೀವಿಯಲ್ಲ. ತನ್ನ ಹಣದ ಪ್ರತಿಫಲವನ್ನು ಯಾವ ರೂಪದಿಂದೆಲ್ಲ ಯಾವ ಯಾವ ಹೊತ್ತಿನಲ್ಲಿ ಹಿಂದೆ ಪಡೆಯಬೇಕೆಂಬುದು ಅವನಿಗೆ ಪೂರಾ ಗೊತ್ತು! ಆದುದರಿಂದಲೇ ಆ ಊರಿನ ಹಲವು ಹೆಣ್ಣುಗಳ ಕರಿಮಣಿ ತಾಳಿಯ ಮಧ್ಯದಲ್ಲಿ ಅವನ ಹಣ ಕಿಣಿ ಕಿಣಿ ಸದ್ದುಮಾಡಿ ಹಣಕುತಿದ್ದಿತು. ಅವನ ಎಸೆವ ಕಲ್ಲು ಕೆಲವೊಮ್ಮೆ ಗುರಿ ತಪ್ಪಬಹುದು. ಹೋದರೆ ಕಲ್ಲು—ಬಿದ್ದರೆ ಹಣ್ಣು ಎಂಬ ತತ್ವದಲ್ಲಿ ಅವನಿಗೆ ತುಂಬಾ ಗೌರವವಿದ್ದಿತು. ಅಂತೆಯೇ ತನ್ನ ವ್ಯಭಿಚಾರದ ದೋಷಗಳನ್ನೆಲ್ಲಾ ಆಯಾ ಹೆಣ್ಣುಗಳ ತಲೆಯ ತುರುಬಿನ ಮೇಲೆಯೇ ಮುಡಿಸುವ ಒಂದು ವಿಶೇಷ ಚಾತುರ್ಯವಿದ್ದುದರಿಂದ ಅವನ ಸ್ಥಾನಮಾನಕ್ಕೆ ಊರಲ್ಲೇನೂ ಹೆಚ್ಚಿನ ಧಕ್ಕೆಯಿದ್ದಿರಲಿಲ್ಲ.—ಅವಳು ಕೆಟ್ಟವಳಾದರೆ ಇವನೇನು ಮಾಡಬೇಕು ?—ಎಂಬಂತಹ ಹಳ್ಳಿಯ ಪ್ರತಿಪಾದನೆಯೂ ಅವನ ಗಂಡಸುತನಕ್ಕೊಂದು ಬಹುಮಾನದ ಗೊಂಡೆಯನ್ನುಕಟ್ಟಿ ಅವನನ್ನು ಒಳ್ಳೆ ಕಾರ್ಬಾರಿ ಎಂಬ ಕೀರ್ತಿಗೆ ಒಳಪಡಿಸಿದ್ದಿತು.

ಕಾವೇರಿಯ ಸಿಡುಕಿನ ಮಾತಿಗೆ ಅವನು ಬಹಳ ಆಶ್ಚರ್ಯಗೊಂಡವನಂತೆ ಹಾಂ! ನನಗೆ ಗೊತ್ತೇಯಿಲ್ಲ. ನೀನು ಮೀಯುತಾಯಿದ್ದಿಯ? ಹೇಗೂ ಬಂದಾಯಿತು. ಇನ್ನು ಹೋದರೂ ಒಂದೇ! ಹೋಗದಿದ್ದರೂ ಒಂದೇ!

ಐತಣ್ಣ ಇಂತಹ ವಿತರ್ಕಗಳಿಗೆ ಹೆಸರುವಾಸಿಯಾಗಿದ್ದನು. ಕಾವೇರಿ ಅದಕ್ಕೆ ಏನುತ್ತರ ಕೊಡಬೇಕೆಂದು ತಿಳಿಯದೆ—ಅಲ್ಲ—ಐತಣ್ಣ ! ಇದು ನೋಡು ಹೆಣ್ಣು ಹೆಂಗಸು ಇರುವ ಮನೆ. ಹಾಗೆಲ್ಲಾ ಹೇಳದೆ ಕೇಳದೆ ಬಂದು——

ಇಸ್ಸಿ—ಅದರಲ್ಲೇನು ? ನಾನೇನು ಹೆಂಗಸರನ್ನು ಕಣ್ಣಲ್ಲಿ ನೋಡದವನೇ? ಅಥವಾ ನೀನೇನು ಗಂಡಸರನ್ನು ಕಾಣದವಳೆ? ಇನ್ನು ಜನರ ಮಾತು—ಜನರಿಗೇನು ಈಜೆಯುವರ ಸುಖ ದುಃಖ? ಕಷ್ಟ ಬರುವಾಗ ಎಲ್ಲರಿಗೂ ಐತಣ್ಣನೇ ಯಾವ ಸಮಯಕ್ಕೂ ಬರಬೇಕು. ಹಾಂ! ಆಗ ದುಡ್ಡಿಗೆ ಜಾತಿಯಿಲ್ಲ! ಇಲ್ಲ? ಹಾಂ ?

ಇಂತಹ ವಿತರ್ಕದ ಮುಂದೆ ಕಾವೇರಿ ಸೋತೇ ಹೋದಳು. ಅಲ್ಲದೆ ಆರಾತ್ರಿ ಬೊಬ್ಬಿಡಲು ಹೋದರೆ ಆತ್ಮ ಗೌರವದ ಪ್ರಶ್ನೆಯೊಂದು ಬೇರೆ!

ಹೀಗಾಗಿ--ಆ ಬಚ್ಚಲ ಕೊಟ್ಟಿಗೆಯಲ್ಲಿ ಅವಳಿಗೆ ಮೊದಲ ಬಾರಿಗೆ ಪಾಪದ ಪೂರ್ಣಾಭ್ಯಂಜನವಾಯಿತು !

ಬೆಂಕಿಗೆ ತುಪ್ಪ ಹೊಯ್ದ ಮೇಲೆ ಅದು ಬುಗಿಲೇಳುವುದನ್ನು ಕಾಣಲೇ ಬೇಕು. ಐದು ಹೆತ್ತ ಅನುಭವದ ಹೆಂಗುಸು ಕಾವೇರಿ. ಮೊದಮೊದಲಿಗೆ ಇದರಿಂದೇನೂ ಪರಿಣಾಮವಾಗಲಾರದೆಂದೇ ಊಹಿಸಿದಳು. ತಿಂಗಳು ಕಳೆದ ಮೇಲೆ ಸ್ವಲ್ಪ ಅಂಜಿ ಅದರ ಪರಿಹಾರಕ್ಕೆ ಉಪಾಯ ಯೋಚಿಸ ತೊಡಗಿದಳು—ಇದಕ್ಕೆಲ್ಲಾ ಏಕೆ ಚಿಂತೆ ಮಾಡುತ್ತಿ. ನಮ್ಮ ನಲಿಕೆಯ ರಾಮಣ್ಣನಿದ್ದಾನಲ್ಲಾ? ನಿನಗೆ ಯೋಚನೆಯೇ ಬೇಡ. ಇಂತಹ ಸಾವಿರ ಪಿಂಡಗಳನ್ನೂ ಆತ ಹೊರದಬ್ಬುತ್ತಾನೆ—ಎಂದನು ಐತಣ್ಣ.

ಅಯ್ಯೋ! ಆ ಸುಟ್ಟ ಮುಖದವನೊಡನೆ ನನ್ನ ಸ್ವರೂಪ ಮೂರು ಕಾಸಿಗೆ ಮಾರಿಕೊಳ್ಳಬೇಕೆ? ಎಂದು ಗಾಬರಿಗೊಂಡಳು ಕಾವೇರಿ.

ಹಾಗೆಲ್ಲಾ ಯೋಚಿಸಿದರೆ ಕೆಲಸ ನಡೆದೀತೇ? ಇಂತಹ ಸಾವಿರ ಕೇಸುಗಳು ನಮ್ಮ ರಾಮಣ್ಣನ ಕಿಸೆಯೊಳಗಿವೆ! ಅವನನ್ನು ಹೇಗಾದರೂ ಒಪ್ಪಿಸಿ ಬಾಯಿ ಮುಚ್ಚಿಸಬಹುದು.

ಅದೂ ನಡೆಯಿತು. ಹಾ ಇದು ರಾಕ್ಷಸ ಪಿಂಡ! ಹಾಗೆಲ್ಲಾ ಹೊರಹೊರಡಲು ಕೇಳುವುದಿಲ್ಲ—ಎಂದು ವೀಳ್ಯದೆಲೆ ಜಗಿಯುತ್ತ ನಲಿಕೆಯ ರಾಮಣ್ಣ ಪೀಠಿಕೆ ಹಾಕಿದನು.

ಕಾವೇರಿಯ ಕಳವಳಕ್ಕೆ ಪಾರವೇಯಿಲ್ಲ. ಮೂರು ದಿನಗಳಿಂದಲೂ ನಾನು ನೋಡುತ್ತಾಯಿದ್ದೇನೆ. ಇನ್ನು ಅದರ ಶಕ್ತಿಯನ್ನು ಕಡಿಮೆಮಾಡಿ ಹೊರಕ್ಕೆ ತರಬೇಕು—ಎಂದನು ರಾಮಣ್ಣ.

ಹೇಗೆ?

ಅದೆಲ್ಲಾ ನನಗೆ ಗೊತ್ತು, ಹೇಗಾದರೂ ನಿನಗೆ ಮರ್ಯಾದೆ ಮುಖ್ಯ ನೋಡು!

ಅಯ್ಯೋ! ಇದೇನು? ಈ ಮಾತನ್ನು ಇನ್ನೂ ಕೇಳುತ್ತಾಯಿದ್ದಿ! ಎಂದು ಮುಖಮುಚ್ಚಿಕೊಂಡು ಅತ್ತಳು ಕಾವೇರಿ.

ಹಾಗಾದರೆ ನೋಡು—ನೀನು ಸುಮ್ಮನಿರಬೇಕು. ಮತ್ತೆ ತಕರಾರು ಬೊಬ್ಬೆವಗೈರೆ—ಅದರ ಕ್ರಮವೇ ಹಾಗೆ!—

ಕಾವೇರಿಯ ಮಾನದ ಎರಡನೇ ಅಂತಸ್ತು ಅಲ್ಲಿಗೆ ಮಣ್ಣು ಮುಕ್ಕಿ ಹೋಯಿತು. ಅದರೊಂದಿಗೆ ಹೊಟ್ಟೆಯೂ ಬೆಳೆಯುತ್ತಲೇ ಹೋಯಿತು!

ಈ ತನಕ ಊರಲ್ಲಿ ತಲೆಯೆತ್ತಿ ನಡೆಯುತಿದ್ದ ಅವಳು ಈಗ ಕಳ್ಳರಂತೆ ಅಂಜಿ ಅಡ್ಡದಾರಿಯಿಂದಲೇ ತಿರುಗತೊಡಗಿದಳು. ಯಾರಾದರೂ ಮನೆಬಾಗಿಲಿಗೆ ಬಂದರೆ ಅವರ ಕಣ್ಣೇನಾದರೂ ತನ್ನ ಹೊಟ್ಟೆಯ ಕಡೆಗಿದೆಯೋ ಎಂದು ಹೆದರಿ ಅದನ್ನು ಸರ್ವದಾ ದುಪ್ಪಟದಿಂದ ಮುಚ್ಚಿಗೊಳ್ಳುತಿದ್ದಳು. ಮುಚ್ಚಬಹುದು. ಆದರೆ ಕಾಲದೊಡನೆ ಎಷ್ಟು ದಿನ ಕಣ್ಣ ಮುಚ್ಚಲಾಡಬಹುದು?

ಹಲವೊಮ್ಮೆ ಆಕೆ ತನಗೇನು ಕೆರೆ ಬಾವಿಗಳೇ ಗತಿಯೇ ಎಂದು ಗೋಳಾಡುವಳು. ಆದರೆ ಐತಣ್ಣ—ಎಂದಿಗೂ ಧೈರ್ಯಗೆಡದ ಐತಣ್ಣನು—ಇದೇನೀಗ ಮಹಾ! ಓಹೋ-—ಊರಿನವರ ಕತೆಯೆಲ್ಲಾ ನನಗೆ ಗೊತ್ತೇ ಇದೆ. ಯಾರು ತಾನೇ ಸಂಭಾವಿತರು? ಮೊನ್ನೆಮೊನ್ನೆ ಆ ಬೀಡಿನವರ ಮನೆಯಲ್ಲಿ——! ಆದರೆ ಅವರ ನಸೀಬು ಒಳ್ಳೇದಿದ್ದಿತು. ಕೇಳು ನಮ್ಮ ರಾಮಣ್ಣನ ಕೂಡೆ. ಎಲ್ಲಬಿಟ್ಟು ಈವೊತ್ತು ನಾನು ಪೇಪರಿನಲ್ಲಿ ನೋಡಿದ್ದೇನೆ— ಯಾವುದೋ ಒಂದು ಊರಿನ ರಾಜ-- ಅವನ ಹೆಂಡತಿ ಸಹ——

ಅವನ ಹೆಂಡತಿ ಹಾಳಾಗಲಿ! ಈಗ ಹೇಳು ನಾನೇನು ಮಾಡಬೇಕು? ಎಂದು ಸೈರಣೆಗೆಟ್ಟು ಕಾವೇರಿ ಕೂಗಿದಳು.

ಅದಕ್ಕೇನಂತೆ? ನಾನೇನು ನಿನ್ನನ್ನು ಕೈಬಿಟ್ಟು ಬೇಡಲಿಕ್ಕೆ ಮನೆ ಮನೆ ಕಳುಹಿಸುತ್ತೇನಂತ ತಿಳಿದಿದ್ದೀಯ? ನೋಡು—ಮೊನ್ನೆ ಬಸ್ಸಿನಲ್ಲಿ ಕಾರ್ಕಳಕ್ಕೆ ಹೋಗುವಾಗ ಅಲ್ಲಿ ದಾರಿಯ ಪಕ್ಕದಲ್ಲಿ ಒಂದು ಬೀಡದ ಅಂಗಡಿ ನೋಡಿದೆ. ಒಂದು ಹೆಂಗಸು ! ಹಾँ—?

ಹಾಗಾದರೆ ನಾನೂ ಒಂದು ಅಂಗಡಿ ತೆರೆದು ದಾರಿ ಮೇಲೆ—

ಹಾ ! ಅದಕ್ಕೇನು ? ಇಲ್ಲಿಯೇ ಆ ಬೈಲೂರು ರಸ್ತೆಯ ಬದಿಯಲ್ಲಿ ಒಂದು ಚಲೋ ಅಂಗಡಿ ಕಟ್ಟಿಸಿ ಕೊಡುತ್ತೇನೆ. ಅಲ್ಲಿ ನೀನೂ ನಿನ್ನ ಮಕ್ಕಳೂ ಬಜಾರ ಇಟ್ಟು ಈ ಹಾಳು ಊರೇ ಬಿಟ್ಟುಬಿಡಬಹುದು. ಹಾ ಹೋಗಲಿ ಆಚೆ! ಇತಣ್ಣ ಹಾಗೆಲ್ಲಾ ನಂಬಿದವರ ಕೈಬಿಡುತ್ತಾ ನೆಂತ ನೀನು ಎಣಿಸುವುದೇ ಬೇಡ. ಹಾ !

ಅಂತೂ ಇಂತೂ ಆ ಮಾತಾಯಿ ತಿಂಗಳು ತುಂಬಿ ಹೆತ್ತಳು! ಆ ವರ್ತಮಾನವನ್ನು ಬೆಳಗು ಮುಂಚಿತವಾಗಿ ಹಾರಿ ಬಂದ ಕಾಗೆ ತುಂಗಮ್ಮನ ಮನೆಯ ಮುಂದೆ ಕಾ –ಕಾ–ಎಂದು ಕೂಗಿ ಹೇಳಿತು !

ಮನೆಯ ಯಜಮಾನಿತಿ ಅಕ್ಕಮ್ಮ ಸ್ವಲ್ಪ ದರ್ಪಪೂರ್ಣ ಸ್ವರದಿಂದ ತನ್ನ ಮೂರನೇ ಮಗ ಸುಬ್ಬಣ್ಣನನ್ನು ಕರೆದು ಕೇಳಿದಳು ಸುಬ್ಬ—ಆ ವರ್ತಮಾನ - ಅದೇನು ಸತ್ಯವ?—

ಸುಬ್ಬ ತನ್ನ ಹೆಂಡತಿ ತುಂಗಮ್ಮನೊಡನೆ ಮೆಲ್ಲನೆ ಕೇಳಿದ–ಆ ವರ್ತಮಾನ - ಅದೇನು ಸತ್ಯವ?

ಯಾವ ವರ್ತಮಾನ ? ಎಂದಳು ತುಂಗಮ್ಮ

ಅದೇನೋ ನಿನ್ನ ತಾಯಿ ಹೆತ್ತಳಂತಲ್ಲ ?

ಯಾವಾಗ ? ನನಗೆ ತಿಳಿಸಲೇಯಿಲ್ಲವಲ್ಲ ! ಎಂದು ಆ ಮೊದ್ದು ಹುಡುಗಿ ಚಡಪಡಿಸಿದಳು. ಪಾಪ ! ಅಂತಹ ಹೆರುಗೆಯ ಹಿಂದೆ ಎಂತಹ ಅಪಮಾನದ ಜಳಕವಿದೆಯೆಂಬ ಜ್ಞಾನ ಅದಕ್ಕೆಲ್ಲಿ ಬರಬೇಕು ?

ಓಹೋ ! ಬಾಣಂತಿ ಸಾಕಲಿಕ್ಕೆ ನಿನಗೆ ಹೇಳಿ ಕಳುಹಿಸಲಿಲ್ಲವೇ ? ಎಂದಳು ಒಬ್ಬಳು ಅತ್ತಿಗೆ.

ಏಕೆ ? ಇನ್ನಾದರೂ ಹೋಗಬಹುದಲ್ಲ ? ಪಾಪ ! ಎಂದಳು ಮತ್ತೊಬ್ಬಳು.

ಛೆ ! ಇದೆಲ್ಲಾ ಬಹಳ ಹೊಲಸು ! ಎಂದನು ಹಿರಿಯ ಭಾವ.

ಅಂತೂ ಈ ಎಲ್ಲಾ ರಾಗಮಾಲಿಕೆ ಮುಗಿದಾಗ ಆ ಹೆಣ್ಣು ಮಗಳು ತುಂಗಮ್ಮನ ದೇಹವೆಲ್ಲ ಬೆವರಿ ಗಡಗುಟ್ಟಿ ನಡುಗುತಿದ್ದಿತು. ಸುಬ್ಬಣ್ಣನು ಜೋಲು ಮುಖ ಮಾಡಿಕೊಂಡು ಅಲ್ಲಿಂದ ಹೊರಟು ಹೋದನು.

ಈ ತನಕ ತುಂಗಮ್ಮನ ಜೀವನದಲ್ಲಿ ಒಂದು ತರದ ಗಾಂಭೀರ್ಯವಿದ್ದಿತು. ಮಾನವಂತರ ಅನುಕೂಲದ ಹೆಣ್ಣು—ಎಂಬ ದಾಕ್ಷಿಣ್ಯದಿಂದಾಗಿ ಯಜಮಾನ ಲಕ್ಕಣ್ಣನ ಕೃಪಾಛತ್ರದಡಿಯಲ್ಲಿ ಅವಳು ಎಲ್ಲರ ಗೌರವಕ್ಕೆ ಪಾತ್ರಳಾಗಿದ್ದಳು. ಮನೆಗೆಲಸಗಳಲ್ಲಿ ಸೊಪ್ಪು ಸೌದೆಗಳನ್ನು ತರುವ ಕಷ್ಟದ ಪ್ರಕರಣ ಇತರ ಹೆಣ್ಣುಗಳ ಪಾಲಿಗೆ ಹಂಚಿಹೋಗಿ ಅತ್ತೆಯ ಅಡುಗೆ ಮನೆಯ ಪಾರುಪತ್ಯದ ಪರಿಚಾರಿಕೆಯ ಊಳಿಗ. ಇವಳಿಗೆ ಕೊಡಲ್ಪಟ್ಟದ್ದಿತು. ನೀರುತರುವ, ಹಾಲು ಕಾಯಿಸುವ ಚಿಕ್ಕ ಚಿಕ್ಕ ಕೆಲಸಗಳನ್ನು ಪೂರೈಸಿ ಮನೆಯೊಳಗೆ ಕುಳಿತು ಬಿಸಿಲಿಗೆ ಬೀಳದಕಾರಣ ಅವಳ ನಸುಗೆಂಪು ಬಣ್ಣವು ಬಾಡದೆ ಆ ಹಳ್ಳಿಯ ಸೌಂದರ್ಯದಲ್ಲಿ ಒಂದು ಸ್ಥಾನವನ್ನು ಗಳಿಸಿದ್ದಿತು. ಇಂತಹ ಹೆಂಡತಿ ಸಿಗಬೇಕಾದರೆ ಸುಬ್ಬಣ್ಣ ತಪಸ್ಸು ಮಾಡಿರಬೇಕು—ಎಂದು ಊರ ತರುಣರು ಜಾತ್ರೆಯ ದಿನ ಸುಬ್ಬಣ್ಣನ ಬೆನ್ನು ತಟ್ಟಿ ಹಾಸ್ಯಮಾಡಿದರೆ ನಿಜವಾಗಿಯೂ ಅವನು ಅದಕ್ಕಾಗಿ ಅಭಿಮಾನ ಪಡಲೇಬೇಕು. ಇದರಿಂದಾಗಿ ಮನಸ್ಸಿನಲ್ಲೇ ಕುದಿಕುದಿದ ರಾಮಿ—ಸೀತು—ಪದ್ದು—ಲಚ್ಚಿ ಮೊದಲಾದ ಅತ್ತಿಗೆ—ನಾದಿನಿಯರು ಅಥವಾ ಮನೆಯ ಮಗಳಂದಿರು ಈ ದಿನ ಅದರ ಮರುಪಾವತಿಗಾಗಿ ಗುಂಪುಗೂಡಿ ಕಿಲಕಿಲನೆ ನಕ್ಕಾಗ ಸುಬ್ಬಣ್ಣ ತಾನೇನು ಊರುಬಿಟ್ಟು ಗಟ್ಟ ಸೇರಬೇಕೋ ಎಂದೊಮ್ಮೆ ಯೋಚಿಸತೊಡಗಿದನು. ಆದರೆ ತುಂಗಮ್ಮನ ಭರವಸೆಯು ಮಾತ್ರ ತನ್ನ ತಾಯ ಕುರಿತು ನಿರ್ಭರವಾಗಿ—ಇವೆಲ್ಲಾ ಹೊಟ್ಟೆಕಿಚ್ಚಿನ ಹೊಲಸು ಮಾತುಗಳು. ನನ್ನ ಮೇಲಣ ಹಗೆಯಿಂದ ತಾಯನ್ನು ಗೇಲಿ ಮಾಡುತ್ತಿರುವರಲ್ಲ—ಎಂದು ಕನಿಕರದುಂಬಿ ಕಣ್ಣೀರು ಸುರಿಸುತಿದ್ದಳು.

ಆದರ ಮರುದಿನ ತುಂಗೂ—ನೀನು ಸೊಪ್ಪಿಗೆ ಹೋಗು. ರಾಮಿ ಅಡಿಗೆ ಮಾಡುತ್ತಾಳೆ—ಎಂದು ಅತ್ತೆಯ ಅಪ್ಪಣೆಯಾಯಿತು.

ಈ ಪರಿವರ್ತನೆಗಾಗಿ ತುಂಗಮ್ಮ ತಳಮಳಗೊಳ್ಳಲಿಲ್ಲ. ಆದರೆ ಬರೇ ಒಂದು ಗುಲ್ಲಿನ ವರ್ತಮಾನಕ್ಕೆ ಬೆಲೆಕೊಟ್ಟು ತನ್ನ ತಾಯಮೇಲೆ

ಸುಳ್ಳಿನ ಆಪಾದನೆ ಹೊರಿಸಿ ತನ್ನನ್ನು ತೂಗತೊಡಗಿರುವರಲ್ಲ! ಎಂದಾಕೆ ಬಿಕ್ಕಿಬಿಕ್ಕಿ ಅತ್ತಳು.

ಆ ದಿನ ರಾತ್ರಿ ಸುಬ್ಬಣ್ಣ ಮೆಲ್ಲನೆ ಹೇಳಿದ—ತುಂಗೂ ನೀನು ಕರಿಕರಿ ಮಾಡಿಕೊಳ್ಳುವುದು ಬೇಡ. ನಾನು ನಾಳೆ ಸೋಮವಾರ ಸಂತೆಗೆ ಹೋದವ ಅಲ್ಲಿಯ ತನಕ ಹೋಗಿ ಎಲ್ಲಾ ನೋಡಿಕೊಂಡು ಬರುತ್ತೇನೆ. ಮತ್ತೆ ಈ ಜನರಿಗೆಲ್ಲಾ ಮುಖಕ್ಕೆ ಮಂಗಳಾರತಿ ಮಾಡೋಣ. ನೀನು ಸ್ವಸ್ಥವಾಗಿರು—ಎಂದು ತಬ್ಬಿ ಸಮಾಧಾನಗೊಳಿಸಿದನು.

ಬೆಳಿಗ್ಗೆಮುಂಜೆ ಸುಬ್ಬಣ್ಣನು ಕೆಲವು ಬೀಳಿನ ಹೆಡಿಗೆಗಳು ನಾಲ್ಕು ಕೊನೆ ಬಾಳೆಹಣ್ಣು ಇವುಗಳನ್ನು ತೆಗೆದುಕೊಂಡು ಸಂತೆಗೆ ಹೋದನು. ಅದು ತುಂಗಮ್ಮನ ಆತ್ಮವಿಶ್ವಾಸದ ಪರೀಕ್ಷಾಕಾಲ. ಸಂಜೆಯನಕವೂ ಅವಳು ಏರಿಳಿತದ ಮನಸ್ಸಿನಿಂದ ಕಾದುಕುಳಿತಳು. ಇನ್ನು ಎಲ್ಲಿಯಾದರೂ ಆ ಮಾತುಗಳೆಲ್ಲಾ ಸತ್ಯವಾದರೆ—ಎಂದೊಮ್ಮೆ ತರ್ಕಿಸುವಳು. ಮತ್ತೆ ಛೀ–ಅನ್ಯಾಯ! ನನ್ನ ತಾಯ ವಿಚಾರ ನನಗೆ ಹೆಚ್ಚುಗೊತ್ತೋ ಅಥವಾ ಈ ಜನರಿಗೋ?–ಎಂದು ಸಮಾಧಾನಪಡಿಸಿಕೊಂಡು ಮತ್ತು ಕಾದುಕುಳಿತಳು.

ಕತ್ತಲಾಯಿತು. ಸಂತೆಗೆ ಸರಕುಕೊಂಡುಹೋದವರೆಲ್ಲಾ ಹಿಮ್ಮರಳಿದರು. ಆದರೆ ಸುಬ್ಬಣ್ಣನು ಬರಲಿಲ್ಲ. ತುಂಗಮ್ಮನು ಒಮ್ಮೆ ಗಾಬರಿಗೊಂಡು ಮತ್ತೆ—ಎಲ್ಲೋ ಅತ್ತೆ ಮನೆಯಲ್ಲೇ ಉಳಿದಿರಬೇಕು. ಅಪರೂಪದಿಂದ ಹೋದ ಅಳಿಯನನ್ನು ನನ್ನ ತಾಯಿ ಹಾಗೇನು ಬಿಡಬಲ್ಲಳೆ? ಎರಡುದಿನವಾದರೂ ಅಲ್ಲಿ ನಿಂತು———ಎಂದೆಲ್ಲ ಕಲ್ಪಿಸಿಕೊಂಡು ಸುಖ ಸ್ವಪ್ನವನ್ನು ಕಂಡಳು.

ಮರುದಿನ ಬೆಳಿಗ್ಗೆ ಲಕ್ಕಣ್ಣನು ಏನು? ಸುಬ್ಬನಿಗೆ ಸೋಮವಾರ ಮಾತ್ರವಲ್ಲದೆ ಮಂಗಳವಾರವೂ ಸಂತೆಯಿದೆಯೆ?—ಎಂದು ಗುಣುಗುಟ್ಟಿದನು ಎಲ್ಲರೂ ಒಬ್ಬರೊಬ್ಬರ ಮುಖನೋಡಿಕೊಂಡರು. ಮತ್ತೆ ಎಲ್ಲರೂ ಒಂದಾಗಿ ತುಂಗಮ್ಮನ ಮುಖವನ್ನೇ ನೋಡತೊಡಗಿದರು. ಆಕೆ ನಾಚಿ ನಾಚಿ ಮೆಲ್ಲನೆ—ಎಲ್ಲಿಯಾದರೂ ಅತ್ತೆಯ ಮನೆಗೆ ಹೋದರೋ ಏನೋ—ಎಂದಳು.

ಮಗು ನೋಡಲಿಕ್ಕೆ ಎಂದಳು ಒಬ್ಬಳು ಗಡಸುಗಾರ್ತಿ.

ಅಲ್ಲ ಉಡುಗರೆ ಇಡಲಿಕ್ಕೆ! ಎಂದಳು ಮತ್ತೊಬ್ಬಳು. ಎಲ್ಲರೂ ಗುಸುಗುಸು ನಕ್ಕು ಅವರವರ ಕೆಲಸಕ್ಕೆ ಹೊರಟು ಹೋದರು.

ಮೂರು ದಿನಗಳು ಕಳೆದುವು. ಆ ದಿನಗಳಲ್ಲಿ ತುಂಗಮ್ಮ ಒಂದಿಷ್ಟು ಊಟಮಾಡಲಿಲ್ಲ. ಬಟ್ಟಲ ಮೇಲಣ ಅನ್ನದ ಕಾಳು ಅವಳಿಗೆ ಹೆಗ್ಗಣ ದಷ್ಟು ಗಾತ್ರವಾಗಿ ಕಾಣುತಿದ್ದಿತು. ಕ್ರಮೇಣ ಮನೆಯವರೂ ಕೊಂಚ ಕೊಂಚ ಗಾಬರಿಗೊಂಡು–ಇದೇನು? ಇನ್ನೂ ಬರಲಿಲ್ಲ!–ಎನ್ನತೊಡಗಿದರು.

ನಾಲ್ಕನೆಯ ದಿನ ಲಕ್ಕಣ್ಣನಿಗೆ ಕಾಗದ ಬಂದಿತು.

ಪೂಜ್ಯ ಮಾವಯ್ಯನವರಿಗೆ, ಸುಬ್ಬಣ್ಣನ ಸಾ. ನಮಸ್ಕಾರಂಗಳು. ಉಭಯಕುಶಲೋಪರಿ. ನಾನೀಗ ಕೊಪ್ಪಕ್ಕೆ ಬಂದಿದ್ದೇನೆ. ಮೊನ್ನೆ ಸಂತೆಯ ದಿನ ರಾಜುಮೇಸ್ತ್ರಿ ನನ್ನನ್ನು ಇಲ್ಲಿಗೆ ಕರಕೊಂಡು ಬಂದಿದ್ದಾನೆ. ಒಳ್ಳೆ ಕೆಲಸ ಉಂಟು, ಆದುದರಿಂದ ಇಲ್ಲೆ ನಿಂತಿದ್ದೇನೆ. ಹೇಳದೆ ಹೊರ ಟದ್ದಕ್ಕೆ ಬೇಸರ ಮಾಡಬಾರದು. ಬಾಕಿ ಸಂಗ್ತಿ ಹಿಂದಿನಿಂದ ಬರೆಯು ತ್ತೇನೆ.

ಇತಿ ಬೇಡುವ ಆಶೀರ್ವಾದ

ಸುಬ್ಬಣ್ಣ—

ಎಲ್ಲರೂ ಒಮ್ಮಿಂದೊಮ್ಮೆಗೆ ದಿಗಿಲುಬಿದ್ದರು. ತುಂಗಮ್ಮನಂತೂ ಪಾತಾಳದಲ್ಲೇ ಹೂತುಹೋದಳು!

ಮನೆಯ ಯಜಮಾನತಿ ಬಾಯಿಬಿಟ್ಟು ಹೇಳದಿದ್ದರೂ ತನ್ನ ಮಗನ ಗಡಿಪಾರಿಗೆ ತುಂಗಮ್ಮನ ತಾಯ ಹೇಯ ವರ್ತನೆಯೆ ಕಾರಣವೆಂಬ ಧೃತಿ ನಿರ್ಭರವಾಗಿದ್ದಿತು. ಆದುದರಿಂದ ಈ ತನಕ ತುಂಗಮ್ಮನನ್ನು ಕಾಣು ತಿದ್ದ ಅನುಕಂಪದ ದೃಷ್ಟಿ ಕಳೆದುಹೋಗಿ ಒಂದು ತಾತ್ಸಾರದ ಸ್ವಭಾವವು ಒಡಮೂಡಿತು. ಇದರಿಂದಾಗಿ ರಾಮಿ ಸೀತು ಮೊದಲಾದವರು ಇವಳ ಮೇಲೆ ಸವಾರಿ ಬಿಡುವಾಗಲೆಲ್ಲಾ ಅದರ ಯೋಗ್ಯತೆ—ಎಂದು ಸುಮ್ಮನಿರು ತಿದ್ದಳು. ಹೀಗೆ ತುಂಗಮ್ಮನ ಕೆಲಸಗಳಲ್ಲೆಲ್ಲ ಲೋಪದೋಷಗಳನ್ನು ಕಾಣು ವುದು ಒಂದು ರೂಢಿಯಾಗಿ ಹೋಯಿತು! ಸೊಪ್ಪು ತರಲು ಹೋದವಳು

ಕೊಂಚ ತಳುಹಿದರೆ ಅವಳ ಬಟ್ಟಲು ಗಂಜಿ ಕಾಣದೆ ಖಾಲಿಯಿರುತಿದ್ದಿತು. ಸೌದೆಹೊರೆ ಚಿಕ್ಕದೆಂದು ಹೇಳಿ ಕಂಡ ಗಂಜಿಯೂ ಬಹಳ ತೆಳುವಾಗಿ ತೇಲು ತಿದ್ದಿತು. ನನಗೆ ಯಾರೂ ತಲೆಗೆ ಹೊರೆ ಹಿಡಿಯಲಿಲ್ಲ. ಆದುದರಿಂದ ಸೌದೆ ಸ್ವಲ್ಪವಾಯಿತು. ಎಂದರೆ—ಹೋಗೇ! ನಿನ್ನ ತಲೆಗೆ ಹಿಡಿವವರನ್ನು ಕೊಪ್ಪಕ್ಕೆ ಹೋಗಿ ಕರಕೊಂಡು ಬಾ! ಎಂಬ ನಂಜಿನ ಬಾಣ ಇವಳ ಮೇಲೆ ಬಿಡಲ್ಪಡುತಿದ್ದಿತು!

ತುಂಗಾ—ನಿನಗೆ ಸೌದೆಗಿವುದೆ ಬೇಕಾದರೆ ನಮ್ಮಣ್ಣನ ದರ್ಖಾಸು ಇದೆ. ಅಲ್ಲಿ ಮೊನ್ನೆ ಮೊನ್ನೆ ಎಲ್ಲಾ ಗಿಡ ಕಡಿದು ಹಾಕಿ ಅವಕ್ಕೆ ಸದ್ಯ ಬೆಂಕಿ ಕೊಡುತ್ತೇವೆ. ಬೇಕಾದರೆ ನೀನು ಸುಲಭವಾಗಿ ಕೊಂಡು ಹೋಗ ಬಹುದು. ನಾನು ತಲೆಗೆ ಹಿಡಿಯುತ್ತೇನೆ—ಎಂದು ಒಂದು ದಿನ ಗುಳಿ ಬೆಟ್ಟನ ಗೌರಿ ಹೇಳಿದಳು.

ತುಂಗನಿಗೆ ಇದರಲ್ಲಿ ಆಕ್ಷೇಪಣೀಯವೇನೂ ಕಂಡುಬರಲಿಲ್ಲ. ಅವ ರಿಗೆ ಬೇಡವಾದವುಗಳನ್ನು ತಾನು ಕೊಂಡುಹೋಗ ಬಹುದಲ್ಲ—ಎಂದು ಗೌರಿಯೊಡನೆ ಸಖ್ಯ ಬೆಳೆಸಿದಳು. ಹಾಗೆ ಸೌದೆ ತೆಗೆಯುತಿದ್ದಾಗ ಅಲ್ಲೆ ಪಕ್ಕದಲ್ಲಿದ್ದ ಗೌರಿಯ ಅಣ್ಣ ಸೀನನ ಒಂದು ಚಿಕ್ಕ ಹೋಟೆಲಿನಲ್ಲಿ ಅವಳ ಒತ್ತಾಯಕ್ಕಾಗಿ ನಾಲ್ಕು ಗುಟುಕು ಕಾಫಿ ಕುಡಿದಿದ್ದರೆ ಅದಕ್ಕಾಗಿ ಮರು ದಿನ ಮನೆಯಲ್ಲಿ ರಂಪಾಟವೆದ್ದಿತು!

ತುಂಗನಿಗೆ ಗೌರಿ ಭಾರೀದೋಸ್ತಿ! ಅವಳಣ್ಣನ ಕಾಫಿಯೂ ಬಹಳ ರುಚಿ! ಅದಕ್ಕೆ ಸಕ್ಕರೆ ತುಂಬಾ ಹಾಕುತ್ತಾರಂತೆ! ಎಂದಳು ರಾಮಿ.

ಈ ಮನೆಯ ಹುಡುಗಿ ಪದ್ದುವನ್ನು ಸೀನನು ಮೊದಲೊಮ್ಮೆ ಮದು ವೆಗೆ ಬಯಸಿ ತಿರಸ್ಕರಿಸಲ್ಪಟ್ಟಿದ್ದನು. ಹಾಗಾಗಿ ಕೆಲಕೆಲವು ವರ್ಷಗಳಿಂದ ಅವರಿವರ ಸಂಪರ್ಕವು ಶುಭ್ರವಾಗಿದ್ದಿಲ್ಲ. ಅವನು ಹೋಟೆಲಿನ ಹೆಸರಿನಿಂದ ಕಳ್ಳ—ಗಂಗರ ತಯಾರಿಸಿ ಗುಟ್ಟಾಗಿ ಮಾರುತ್ತಾನೆಂದು ಇವರೂ, ಇವರು ಮನೆಗೆ ಹೆಣ್ಣುಗಳನ್ನು ಪಡೆಯುವುದೂ ಕೋಣಗಳನ್ನು ಖರೀದಿ ಮಾಡು ವುದೂ ಒಂದೇ ಎಂದು ಆತನೂ ವಾಗ್ವಾದ ಮಾಡುತಿದ್ದರು. ಈ ವಿಚಾರ ಪಾಪ! ತುಂಗಮ್ಮನಿಗೇನು ಗೊತ್ತು? ಆದುದರಿಂದ ಅಂತಹ ವಿರೋಧವ

ಗದಾಪ್ರಹಾರವು ಬಜಾರಿ! ಗಂಡನನ್ನು ಗಟ್ಟಕ್ಕೆ ಅಟ್ಟಿ ಊರುಮೇಯು ತಾಯಿದ್ದೀಯು? ಎಂದು ಅತ್ತೆಯು ಕೈಯಿಂದ ಕಡೆಗೋಲಿನ ಮುಖಾಂತರ ಸಮರ್ಪಿಸಲ್ಪಟ್ಟಿತು!

ಮೂರು ತಿಂಗಳುಗಳು ಕಳೆದುಹೋದುವು. ತವರುಮನೆಯ ವರ್ತಮಾನವಿಲ್ಲ. ಅಂತೆಯೇ ಗಂಡನ ವಿಚಾರವೂ ಗೊತ್ತಿಲ್ಲ. ಸುಬ್ಬಣ್ಣನು ಕೊಪ್ಪದಿಂದ ಶೃಂಗೇರಿಗೆ ಗೇಯಲು ಹೋದನೆಂದು ಯಾರೋ ಆಳುಕಟ್ಟುವ ಸೇರೆಗಾರರೊಮ್ಮೆ ಹೇಳಿದರು ಅಷ್ಟೆ.

ಛೇ—ಅನ್ಯಾಯ! ಈ ಇನ್ನೂರು ವರ್ಷಗಳಿಂದ ಯಾರೂ ನಮ್ಮ ಮನೆಯವರು ಬೇರೆಯವರ ಆಳಾಗಿ ಗೇಯಲು ಗಟ್ಟಹತ್ತಿದುದಿಲ್ಲ. ಗೇಯಲು ನಮಗೇನು ಬಂಗಾರದಂತಹ ಭೂಮಿಯಿಲ್ಲವೆ? ಮನೆಬಾಗಿಲಿಲ್ಲವೆ? ಇಷ್ಟುದೊಡ್ಡ ಬೇಸಾಯ—! ಎಂದೊಮ್ಮೆ ಹಿರಿಯ ಅಣ್ಣ ತಂಕರ ಹಾರೆಗೆ ಕೀಲುಹಾಕುತ್ತ ಹೇಳಿದನು.

ಆಗ ಇಂತಹ ರಂಭೆ ನಿಮ್ಮ ಮನೆಗೆ ಬಳುವಳಿ ಬಂದಿಲ್ಲ—ಎಂದಳು ರಾಮಿ.

ಇವುಗಳನ್ನೆಲ್ಲ ಕೇಳಿ ಗುರಿಕಾರ ಲಕ್ಕಣ್ಣ ಬೇಸರಗೊಂಡು ಹೆಗಲ ಮೇಲೆ ಬೈರಾಸ ಹಾಕಿಕೊಂಡು ಹೊರಟು ಬಿಟ್ಟ—ಕಾಫಿ ಹೋಟೆಲಿಗೆ ! ಅವನಿಗೂ ಸೀನಪ್ಪ ಹೋಟೆಲಿನ ಕಾಫಿಗೆ ಸಕ್ಕರೆ ಜಾಸ್ತಿ ಎಂಬುದನ್ನು ಸ್ವಲ್ಪ ಗುಟ್ಟಾಗಿ ತಿಳಿಯ ಬೇಕಿದ್ದಿತು ! ಅಥವಾ ಎಲ್ಲಾದರೂ ಸ್ವಲ್ಪ ಕಳಿಗಂಗರ !

ನಾಲ್ಕು ದಿನಗಳ ಮೇಲೆ ಮತ್ತೊಂದು ಪ್ರಕರಣವು ಮೇಲ್ಬಿದ್ದು ರಾದ್ಧಾಂತವಾಯಿತು.

ಆಗ ರಾಮಿಗೆ ಒಡಲಿಗೆ ಆರು ತಿಂಗಳು. ತನ್ನ ತಾಯಮನೆಯಿಂದ ಒಂದು ಆಕಳನ್ನು ತನ್ನ ಗಂಡ ಮತ್ತು ಮಕ್ಕಳ ವಿಶೇಷ ಆರೈಕೆಗೆಂದೋ ಅಥವಾ ಆಂತರ್ಯತಃ ಇತರರನ್ನು ಹಂಗಿಸಲೆಂದೋ ತಂದಿದ್ದಳು. ಅದು ಒಂದು ಬೇಳೆ ಹಾಲು ಕೊಡುವ ದನವಂತೆ! ಆದರೆ ಈ ಹಾಳುಮನೆಗೆ ತಂದ ಕೂಡಲೇ ಅದರ ಹಾಲು ಮೂರೇ ಮೂರು ಕುಡುತೆಗೆ ಇಳಿದು

ಹೋಯಿತು ! ಅವಳ ಗಂಡನ ಎಲ್ಲಾ ಆಸ್ತಿ ಬದುಕುಗಳಿಗಿಂತ ಅದನ್ನು ಹೆಚ್ಚಾಗಿ ತಿಳಿದು ಅದೇ ಕಾಮಧೇನುವೆಂದೂ ಆ ಮನೆಯ ರಕ್ಷಣೆ ಭಕ್ಷಣ ಗಳಿಂದಲೇ ಅದರ ಹೊಟ್ಟೆ ತುಂಬುತಿದ್ದರೂ ಅದನ್ನು ತಾನೇ ತನ್ನ ಕೈ ಯಿಂದಲೇ ಸಾಕುವುದೆಂದೂ ವಾದಿಸುತಿದ್ದಳು. ತಾಯ ಮನೆಯ ಚಿಕ್ಕ ಬದುಕಾದರೂ ಅದು ಗಂಡನ ಮನೆಯಲ್ಲಿ ಮಹತ್ತಾಗುವುದು ಸಹಜ.

ಅವಳದನ್ನು ತಾನೇ ಒಂದುಕ್ಷಣ ಮಧ್ಯಾಹ್ನದ ಮೇಲೆ ಗುಡ್ಡೆಗೆ ಅಟ್ಟಿ ಕೊಂಡು ಹೋಗಿ ಮೇಯಿಸಿ ತರುತಿದ್ದಳು. ಆದರೆ ಒಂದು ಸಂಜೆ ಅದು ಅವಳ ಕಣ್ಣು ತಪ್ಪಿಸಿಕೊಂಡುಹೋಗಿ ಮನೆಗೆ ಬರಲಿಲ್ಲ.

ಸಂಜೆಯೆಲ್ಲಾ ಅಂತೆಯೇ ಬಹಳ ರಾತ್ರಿಯ ತನಕವೂ ಹುಡುಕಾಡಿ ಯಾಯಿತು. ರಾತ್ರಿಯೆಲ್ಲ ರಾಮಿಯು ಅದರ ಕರುವನ್ನು ತಬ್ಬಿಕೊಂಡು ಬಹಳವಾಗಿ ಗೋಳಾಡಿ ನೆರೆಕರೆಯವರಿಗೆ ಒಂದಿಷ್ಟೂ ನಿದ್ದೆ ಬರದಂತೆ ದುಃಖ ಪ್ರದರ್ಶನ ಮಾಡಿದಳು. ಮರುದಿನ ಬೆಳಿಗ್ಗೆ ಸೊಪ್ಪುತರಲು ಹೋದ ವರು ಆಚೆ ಬೆಟ್ಟದಮೇಲೆ ರಣಹದ್ದು ಹಾರುವುದನ್ನು ಕಂಡು ನೋಡಿದಾಗ ಆ ದನವನ್ನು ಮುಂಚಿನ ರಾತ್ರಿ ಹುಲಿತಿಂದಿದ್ದಿತು !

ಮತ್ತೆ ರಾಮಿಯ ದುಃಖವನ್ನು ತಡೆಗಟ್ಟುವರಾರು? ಕಟ್ಟಕಡೆಗೆ ಆ ಎಲ್ಲಾ ತಪ್ಪುಗಳೂ ತುಂಗಮ್ಮನದೆಂದು ತೀರ್ಮಾನವಾಯಿತು !

—ಆ ದನ ಆಚೆ ಕಡೆ ಹೋಗುವಾಗ ನಾನು ಕರೆದು ಹೇಳಿದೆ. ಈ ಮಾರಿ ಅಲ್ಲೆ ಸೌದೆ ಹೆಕ್ಕುತ್ತಾಯಿದ್ದಿತ್ತು. ಆದರೆ ಅವಳಿಗೆ ಹೊಟ್ಟೆಕಿಚ್ಚು! ನನ್ನ ದನ ಹೋಗಬೇಕೆಂದೇ ಅದನ್ನು ಈಚೆ ಅಟ್ಟದೆ ಗುಡ್ಡೆಗೆ ಬಿಟ್ಟು ಬಿಟ್ಟಳು !

ಇದನ್ನೆ ಪುನಃ ಪುನಃ ಹೇಳಿ ಒಂದೊಂದು ಬಾರಿಯೂ ಒಂದೊಂದು ಹೊಸ ಸಂಗತಿಯನ್ನು ಕೂಡಿಸುತ್ತ ಕಡೆಗೆ—ತುಂಗಮ್ಮನೇ ಕಲ್ಲು ಹೊಡೆದು ಅದನ್ನು ಆಚೆ ಅಟ್ಟಿಬಿಟ್ಟಳು. ಅಲ್ಲವಾದರೆ ನಾನು ಕರೆದಾಗ ಅದು ಈ ಕಡೆ ಬಾರದಿರುತ್ತಿರಲಿಲ್ಲ—ಎಂಬಲ್ಲಿ ಆ ಕತೆಯ ಪರ್ಯವಸಾನವಾಯಿತು !

ಹಾಗೆ ನಿರ್ಣಯವಾಗಿ ಕತೆಯು ಪರಿಸಮಾಪ್ತವಾಗುವ ವೇಳೆ ರಾಮಿಯ ಒಡಲ ಜ್ವಾಲಾಮುಖಿಯು ಸ್ಫೋಟವಾಗಿ ಅವರ ಕೆಂಗಿಡಿಯು

ಒಲೆಯ ಕೊಳ್ಳಿಯ ರೂಪದಲ್ಲಿ ಕಾಣಿಸಿಕೊಂಡು ಅದರ ಪ್ರಯೋಗವು ತುಂಗಮ್ಮನ ಬೆನ್ನಮೇಲೆ ನಡೆದೇ ನಡೆಯಿತು!

ಅತ್ತೆ ಸೊಸೆಗೆ ಹೊಡೆಯಬಹುದು. ಆ ಹೊಡೆಯುವ ಹಕ್ಕಿಗಾಗಿಯೇ ಅತ್ತೆಯ ಜನ್ಮ. ಅಂತಹ ಜನ್ಮಸಿದ್ಧವಾದ ಹಕ್ಕನ್ನು ಯಾರೂ ಆಕ್ಷೇಪಿಸಲು ಸಾಧ್ಯವಿಲ್ಲ. ಇನ್ನು ಮಾವ—ಗಂಡ—ಹಿರಿಯ ಭಾವ ಇವರೆಲ್ಲರೂ ಒಂದು ಪೆಟ್ಟನ್ನು ಕೆಲವುವೇಳೆ ಮೋಜಿಗಾಗಿ ಬಾರಿಸಿದರೂ ಬಾರಿಸಬಹುದು. ಅಡ್ಡಿಯಿಲ್ಲ. ಆದರೆ ಅತ್ತಿಗೆ—ತನ್ನಂತೆಯೇ ಈ ಮನೆಸೇರಿ ಕೂಳಿನ ಕಾಲಕ್ಷೇಪ ಮಾಡುವಾಕೆ—ಅವಳು ಹೊಡೆದ ಹೊಡೆತ ಸಿಡಿಲ ಬಡಿತಕ್ಕಿಂತಲೂ ಭಯಂಕರ!

ತುಂಗಮ್ಮನು ಅಮ್ಮಾ—ಅಮ್ಮಾ—ಎಂದು ಕೂಗಿದಳು. ಅವಳು ಈ ಹಲವು ವರ್ಷಗಳಲ್ಲಿ ತಾಯನ್ನು ಕರೆದುದು ಅದೇ ಮೊದಲು!

ಹಾಂ! ಆ ಬಜಾರಿ ತಾಯಿ ನಿನಗೆ ಬೇಕಾಗಿದೆ! ತಾಯಂತೆಯೇ ಮಗಳು—ಮತ್ತೇನು! ಗಂಡನನ್ನು ಅಟ್ಟಿ—

ಓಹೋ! ಬೈಗಳ ಸಹಸ್ರನಾಮದ ಸುರಿಮಳೆಯಾಗಿ ಹೋಯಿತು! ತುಂಗಮ್ಮ ಅದರಲ್ಲಿ ಮುಳುಗಿ ಮುಳುಗಿ ಕೊಚ್ಚಿ ಕೊಚ್ಚಿ ದಡಸೇರಲಾರದೆ ಸತ್ತೇ ಹೋದಳು - ಎನಬೇಕು!

ಮಧ್ಯಾಹ್ನ ಊಟವಿಲ್ಲ. ನಡುಬಿಸಿಲು ಸುಡುತ್ತಿದೆ. ಆ ಹೊತ್ತಿನಲ್ಲಿ ತುಂಗಮ್ಮ ಸೌದೆಗೆಂದು ಚಿಕ್ಕ ಕತ್ತಿಹಿಡಿದು ಹೊರಹೊರಟಳು. ನಡುಗಾಡಿನಲ್ಲಿ ಹಾಯಾಗಿ ಕುಳಿತು ತಾನೇ ತಾನೇ ಬೇಕಾದಂತೆ ಅತ್ತಳು. ಆದರೂ ಎದೆ ತಣಿಯಲಿಲ್ಲ. ಆಕಡೆ ತಾಯಿಯು ಕೈಯೆತ್ತಿ ಕರೆಯುವಂತೆ ಭಾಸವಾಯಿತು. ಬಾ, ಮಗೂ—ಬಾ! ನನ್ನ ಕಂದ ನನಗೆ ಹೆಚ್ಚಲ್ಲ. ಬಾ!—

ಅಮ್ಮಾ ಅಮ್ಮಾ—

ಅವಳು ಆವೇಶದಿಂದ ಎದ್ದು ನಿಂತು ಮುಂದೆ ನಡೆದಳು. ಮುಂದೆ ಹೆಜ್ಜೆಯಿಟ್ಟಂತೆಲ್ಲಾ ಆ ಮಧುರ ಸ್ವರವು ಮುಂದೆ ಮುಂದೆಯೇ ಸರಿದು ಸೆಳೆದೊ

ಯ್ಯುತಿದ್ದಿತು. ಹೊಳೆಯಲ್ಲಿ ತೇಲುವ ಹುಲ್ಲುಕಡ್ಡಿಯಂತೆ ಅವಳು ಹಾರುತ್ತಾ ಹಾರುತ್ತಾ ಮುಂದೆ ಸರಿದಳು. ಹೀಗೆ ನಡೆದು ನಡೆದು ಗಂಟೆ ನಾಲ್ಕರ ಹೊತ್ತಿಗೆ ಅವಳ ಕಾಲು ಹೆದ್ದಾರಿಯ ಮೇಲಿದ್ದಿತು.

ಹಲವು ಹನ್ನೆರಡು ಬಸ್ಸುಗಳು ಓಡಾಡುತಿದ್ದುವು. ಅದರೆಡೆಗೆ ಕೃಪಾಯಾಚನೆಯ ಆಶಾಪೂರ್ಣ ದೃಷ್ಟಿಯನ್ನು ಸರಿಸಿ ಮೆಲ್ಲ ತನ್ನೊಡನೆ ಒಂದು ಕುರುಡು ಕಾಸೂ ಇಲ್ಲವೆಂಬ ಅರಿವುಗೊಂಡು ಮತ್ತೆ ಮೆಲ್ಲನೆ ಹೆಜ್ಜೆ ಯಿಟ್ಟಳು. ಮುಸ್ಸಂಜೆ ಆರುಗಂಟೆಯ ಸಮಯಕ್ಕೆ ತಾನು ಯಾವುದೋ ಒಂದು ತಿಳಿದಿರುವ ಠಾವಿನಲ್ಲಿ ಸುತ್ತುತಿರುವೆನೆಂಬ ಗ್ರಹಿಕೆ ಅವಳಿಗೆ ತಲೆ ದೋರಿತು. ಯಾರೋ ಮೊದಲೇ ಹೇಳಿದ್ದರು – ಕೌಡೂರಿಗೆ? ಹೋಗು – ಇದೇ ರಾಜರಸ್ತೆ. ಮತ್ತೆ ಸುಮಾರು ದೂರಹೋದ ಮೇಲೆ ಎಡಕ್ಕೆ ತಿರುಗ ಬೇಕು.—

ತುಂಗಮ್ಮ ತಾನೇ ತಾನೇ ಗುಣುಗುಟ್ಟಿದಳು. ತಾನು ತವರು ಮನೆಗೆ ಹೋಗುತಿದ್ದೇನೆ—! ಅವಳ ಮನಸ್ಸಿನ ನೋವು ದೇಹದ ಆಯಾಸ ವೆಲ್ಲಾ ಕಳೆದು ಕಣ್ಣು ಆಶೋನ್ಮುಖವಾಗಿ ಮುಂದೆ ನೋಡುತಿದೆ. ತಲೆಯ ಮೇಲೆ ಅಕ್ಕಿ—ತೆಂಗಿನಕಾಯಿಯ ಹೊರೆ ಹೊತ್ತುಕೊಂಡು ಭಟ್ಟರು— ಅಹುದು!—ನೆನಪಾಯಿತು. ಅವರೇ ಎಷ್ಟೋ ತಡವೆ ಅವಳ ತಾಯ ಮನೆಗೆ ಮಂತ್ರದ ಹಗ್ಗ ಕಟ್ಟಲು ನಾಗನಿಗೆ ತನು ಹಾಕಲು ಬಂದಿದ್ದರಲ್ಲ– ಅದೇ ವಿಷ್ಣುಮೂರ್ತಿ ಭಟ್ಟರು ಇದಿರು ಬರುತಿದ್ದಾರೆ!

ತುಂಗಮ್ಮ ಮಾತಾಡಲಿಲ್ಲ. ಅವರೂ ಮಾತಾಡಲಿಲ್ಲ. ಹತ್ತು ಹೆಜ್ಜೆ ಮುಂದರಿಸಿ ಅವರು ಒಮ್ಮೆಗೇ ನಿಂತು ಕೇಳಿದರು

ಏ! ಎಲ್ಲಿಗೆ ಹೋಗುವವಳು ನೀನು? ಅಬ್ಬಾ ಹೆಣ್ಣೆ! ಈ ಮುಸ್ಸಂ ಜೆಯ ಹೊತ್ತಿಗೆ—?

ತುಂಗಮ್ಮ ಅಳುಕಿ ಅಳುಕಿ ಗುಣುಗುಟ್ಟಿದಳು—ಕಾವೇರಿ ಮನೆಗೆ ಹೋಗಬೇಕು—

ಹಾ! ಕಾವೇರಿ ಮನೆಗೆ—ಆ ಕುಲಗೆಟ್ಟ ಕಾವೇರಿ! ಎಂದು ದುರ ದುರನೆ ನೋಡುತ್ತ ಆ ಮುದುಕ ಮುಂದೆ ಸರಿದು ಮತ್ತೆ ಒಂದು ಕ್ಷಣ

ಅಲ್ಲೇ ನಿಂತು---ಏ ಹುಡುಗಿ! ಆ ಗ್ರಹಚಾರದ ಕಾವೇರಿ ಈ ಊರು ಬಿಟ್ಟು ಮೂರು ತಿಂಗಳಾಯಿತು. ಅವಳು ರಾಜರಸ್ತೆಯಲ್ಲಿ ಮರ್ಯಾದೆ ಮಾರಾಟ ಮಾಡುತ್ತಾಯಿದ್ದಾಳೆ. ತಿಳೀತೆ? ಬೇಕಾದರೆ ನೀನೂ ಅಲ್ಲಿಗೇ ಹೋಗಬೇಕು. ತಿಳೀತೆ ?— ಎಂದುಕೊಂಡು ಮತ್ತೆ ತಿರುಗಿಯೂ ನೋಡದೆ ಹೋದರು ಆ ಭಟ್ಟರು !

ತುಂಗಮ್ಮನಿಗೆ ತಲೆತಿರುಗಿದಂತಾಗಿ ಅಲ್ಲೇ ಕುಳಿತುಬಿಟ್ಟಳು. ಆ ಕಿರುದಾರಿಯ ಪಕ್ಕದಲ್ಲಿ ದೂಳುತುಂಬಿದ ಹರಕು ವಸ್ತ್ರವನ್ನುಟ್ಟ ಆ ಹೆಣ್ಣು ಮಗಳು ಒಂದು ಮೈಲುಕಲ್ಲಿನಂತೆ ನಿಶ್ಚಲಳಾಗಿ ನಿಸ್ಸಹಾಯಳಾಗಿ ಕುಳಿತು ಬಿಟ್ಟಳು. ಈ ತನಕ ತವರುಮನೆ ಸೇರಬೇಕೆಂಬೊಂದೇ ಆತ್ಮದ ಅಭಿ ಲಾಷೆಯ ಹೆಚ್ಚಳದಿಂದ ಹೆಜ್ಜೆ ಹಾಕುತ್ತ ಎಲ್ಲವನ್ನೂ ಮರೆತು ಮುನ್ನಡೆ ದಿದ್ದ ಅವಳ ಕಳೇವರವು ಅಲ್ಲಿಂದಲ್ಲಿಗೇ ಒಂದು ಕೊರಡಿನಂತೆ ತಟಸ್ಥ ವಾಯಿತು. ಅವಳ ತಲೆಯಲ್ಲಿ ಒಂದೇ ಶಬ್ದದ ಗುಂಗು ಸುಳಿದಾಡು ತಿದ್ದಿತು. ಕುಲಗೆಟ್ಟ ಕಾವೇರಿ --ಕುಲಗೆಟ್ಟ ಕಾವೇರಿ -- !

ಮುಸ್ಸಂಜೆ ಕಳೆದು ಕತ್ತಲ ಕರಿನೆರಳ ಹೆಬ್ಬಾವು ಜಗತ್ತನ್ನೇ ಕಬಳಿಸ ತೊಡಗಿದಾಗ, ಭ್ರಾಮಕ ಪ್ರಪಂಚದಲ್ಲಿ ಅಳಿದುಳಿದ ಆತ್ಮದ ದೀವಿಗೆಯಂತೆ ಕೆಲಕೆಲವು ತುಣುಕು ತಾರೆಗಳು ಕಣ್ಬಿಟ್ಟು ಕಾಣತೊಡಗಿದಾಗ—ತುಂಗಮ್ಮ ಮೆಲ್ಲನೆದ್ದು ತಡವರಿಸಿದಳು. ಬಂದದಾರಿಯ ಮೇಲೆ ಅವಳ ಹೆಜ್ಜೆಯು ಹಿಂದೆ ತಿರುಗಿತು - ಬರೀ ಒಂದು ಸೂತ್ರದಿಂದ ಸೆಳೆಯಲ್ಪಡುವ ಕೈಗೊಂಬೆ ಯಂತೆ. ಎಡವಿ ತಡಹುತ್ತ ದಡದಲ್ಲಿ ತೆರವುಗಾಣದೆ ಸಮುದ್ರದೆಡೆಗೆ ಹಿಂದೆ ಸಾರಲಿರುವ ಭಗ್ನತರಂಗದ ರೀತಿ ತತ್ತರಗೊಂಡು ತವರು ಮನೆಯಿಂದ ದೂರ ದೂರ ಸರಿಯುತಿದ್ದಳು ಆ ಹೆಣ್ಣುಮಗಳು!

ಎಷ್ಟುಹೊತ್ತಿಗೆ ತಾನು ಹಿಂದೆಬಂದು ಗಂಡನ ಮನೆಯ ಬಾಗಿಲಬಳಿ ಬಿದ್ದೆನೆಂಬ ಅರಿವು ಅವಳಿಗಿದ್ದಿಲ್ಲ. ಬೆಳಗಿನ ಜಾವದ ಕೋಳಿಯು ಕೂಗಿ ತಂಗಾಳಿಯು ತಲೆದೋರಿ ಬೆಳ್ಳಿಬೆಳಕಿನ ನಸುಕು ನಸುನಗೆ ಬೀರುತಿದ್ದಾಗ ಅವಳ ಕೇಡಮ್ಮತ್ತೆ ಕಾಮ ಹಿಡಿಯುತಿದ್ದ ತಲೆ ಮೆತ್ತನೆ ತೊಡೆಯಮೇಲಿ

ದ್ದಂತೆ ಭಾಸವಾಯಿತು. ಕಣ್ದೆರೆದು ನೋಡಿದಾಗ ಸುಬ್ಬಣ್ಣ ತಣ್ಣೀರನ್ನು ಹಣೆಗೆ ತಟ್ಟಿ ಗಾಳಿ ಹಾಕುತಿದ್ದನು.

ಪ್ರಜ್ಞೆ ಬಂದ ಮೇಲೆ ಅವನು ಮೆಲ್ಲನೆ ಕೇಳಿದ—ತುಂಗೂ—ನೀನು ಈ ನಡುರಾತ್ರಿ ಎಲ್ಲಿಗೆ ಹೋಗಿದ್ದಿ?—ಅದರಲ್ಲಿ ಭರ್ತ್ಸನೆಯ ಜಿದರಿಕೆ ಯಿದ್ದಿಲ್ಲ. ಕರುಣೆಯ ಕಾತರ್ಯವಿದ್ದಿತು!

ತುಂಗಮ್ಮ ಕ್ಷೀಣವಾಗಿ ಹೇಳಿದಳು—ತವರುಮನೆಗೆ!

ಯಾವಾಗ?

ಇದೇ ಸಂಜೆ

ಮತ್ತೇಕೆ ಕೂಡಲೇ ಹಿಂದೆ ಬಂದೆ? ಅದೂ ಒಬ್ಬಳೇ ಈ ರಾತ್ರಿ ಯಲ್ಲಿ !

ಅದಕ್ಕೆ ಏನು ಉತ್ತರ ಕೊಡಬೇಕೆಂದು ತಿಳಿಯದೆ ಕ್ಷಣಕಾಲ ಮೌನ ವಾಗಿ ದುಃಖವನ್ನು ಅನುಭವಿಸುತ್ತ ಮತ್ತೆ ಮೆಲ್ಲನೆ ನುಡಿದಳು—ನನಗೆ ತವರು ಇಲ್ಲ !—

ಹಾಗೆಂದರೆ ?

ನನ್ನ ತವರು ನೀವೇ— ಎಲ್ಲಾ ನೀವೆ ! ಎಂದು ಕಣ್ಣೀರು ಸುರಿಸಿದಳು.

ಹೆಜ್ಜೆ ೨ ಹೆತ್ತಳಾ ತಾಯಿ

ಸುಬ್ಬಣ್ಣನು ಮನೆಯಿಂದ ಹೊರಬಿದ್ದನು. ನಸುಕು ಕಳೆದು ನೇಸರನ ಮೊದಲ ಕಿರಣದ ಮಿದು ಸೋಂಕು ತಿರೆವೆಣ್ಣ ಮೈಯ ಸಂದು ಸಂದುಗಳಲ್ಲಿ ಕಿಚುಕುಳಿಯಾಡುವ ಮುಂಚಿತವಾಗಿ ತುಂಗಮ್ಮನ ಕೈ ಹಿಡಿದು ಸುಬ್ಬಣ್ಣನು ಮನೆಯಿಂದ ಹೊರಬಿದ್ದನು. ಮನೆಯ ಹೊರವಲಯದ ತುಳಸಿಕಟ್ಟೆಗೆ ಮೂರು ಸುತ್ತು ಬಂದು, ಹಟ್ಟಿಯ ಹಣೆಯ ಕಡೆಯಿಂದ ತಾನು ಈತನಕ ನೀರಿಟ್ಟು ಸಾಕಿಸಲಹಿದ ಜಾನುವಾರುಗಳನೊಮ್ಮೆ ಕಣ್ಣೀರು ತುಂಬಿದ ದೃಷ್ಟಿಯಿಂದ ನೋಡಿ, ಮನೆಯಿದಿರಿನ ಬಾವಿಗೊಮ್ಮೆ ಹಗ್ಗವಿಳಿಸಿ ಅದರ ತುಸು ಹನಿ ನೀರನ್ನು ತಲೆಗೆ ತಳೆದುಕೊಂಡು, ಸುಬ್ಬಣ್ಣನು ಭಾರವಾಗಿ ಹೆಜ್ಜೆಯನಿಡುತ್ತ ಮುಂದರಿದು ಮೆಲ್ಲನೆ ತುಂಗಮ್ಮನೊಡನೆ ಕೇಳಿದನು—

ನೀನು ಕೊಂಚ ನಡೆಯಬಲ್ಲೆಯಷ್ಟೆ ?

ತುಂಗಮ್ಮ ಆಶಂಕೆಯಿಂದ ಕೇಳಿದಳು—ಕೊಪ್ಪಕ್ಕೆ?

ಗೊತ್ತಿಲ್ಲ. ಅದನ್ನು ಆ ಕಡೆ ಹೋಗಿ ನಿರ್ಧಾರ ಮಾಡೋಣ. ನಿನಗೆ ಕಾಲು ನೋವು ಬಾರದಿದ್ದರೆ ನಡೆಯಲು ಸಾಧ್ಯವಾದರೆ—

ಹಾಗಾದರೆ ಈ ಮನೆಯಿಂದ ?

ಹೌದು. ಈ ಮನೆ ನಿನಗೆ ಒಗ್ಗಲಾರದಾದರೆ ನನಗೂ ಬೇಡ !

ತುಂಗಮ್ಮ ಒಂದು ಹೆಜ್ಜೆ ಹಿಂದೆಸರಿದು ಮುಖ ತಗ್ಗಿಸಿನಿಂತು ನುಡಿದಳು—ಹಾಗಾದರೆ ನನಗಾಗಿ ನೀವು ನಿಮ್ಮ ಕೂಡು ಕುಟುಂಬ ಮನೆ ಬಾಗಲೆಲ್ಲಾ ಬಿಟ್ಟು ದೇಶಾಂತರಕ್ಕೆ ಹೊರಡುವುದಾದರೆ—ನನಗೆ ಇದೇ ಮನೆಯೇ ಬಹಳ ಸುಖ!

ಸುಬ್ಬಣ್ಣ ಅವಳ ಬೆನ್ನಕಡೆ ಕೈಹಾಕಿ ಆಧರಿಸಿಕೊಳ್ಳುತ್ತ—ಹಾಗಲ್ಲ ತುಂಗು! ನಾನು ಈ ನಾಲ್ಕು ತಿಂಗಳಲ್ಲಿ ಗಟ್ಟದ ಕಡೆ ಮುಳ್ಳಿನ ಮೇಲೆ ನಿಂತಂತೆ ನಿಂತಿದ್ದೆ. ನನಗೆ ನಿನ್ನ ಕಷ್ಟದ ಅರಿವು ಇಲ್ಲವೆಂದು ಭಾವಿಸಬೇಡ. ಆದರೆ ಮನೆಯವರಿಗೆ ತಿಳಿಯ ಹೇಳುವ ಅಧಿಕಾರ ನನಗಿಲ್ಲ. ನನ್ನೊಬ್ಬನ ಸುಖಕ್ಕಾಗಿ ಈ ಮನೆಯಲ್ಲ. ಇದು ಹಲವರ ಕುಟುಂಬದ ಮನೆ. ಆದುದರಿಂದ ಅದನ್ನು ನನಗೆ ಬೇಕಾದಂತೆ ತಿದ್ದುಪಡಿಮಾಡಲು ಎಂದಿಗೂ ಬರಲಾರದು. ಎಂದಮೇಲೆ ನನಗಾಗಿ ಅಂತೆಯೇ ನಿನಗಾಗಿ ನಾನೊಂದು ಚಿಕ್ಕ ಮನೆಯನ್ನು ಕಂಡುಕೊಳ್ಳುವುದು ನನ್ನ ಕರ್ತವ್ಯವೆಂದು ತಿಳಿದಿದ್ದೇನೆ. ಇನ್ನು ಬಾ ಹೋಗೋಣ!—

ಹಾಗಾದರೆ ಇದರಲ್ಲಿ ನನ್ನದೇನೂ ಹೊಣೆಗಾರಿಕೆ ಇಲ್ಲತಾನೆ?

ನಿನ್ನ ಹೊಣೆಯನ್ನೇ ನಾನು ಹೊತ್ತ ಮೇಲೆ ಎಲ್ಲವೂ ನನ್ನದೇ ಹೊಣೆಗಾರಿಕೆ!

ತುಂಗಮ್ಮ ಮೌನವಾಗಿ ಮುನ್ನಡೆದಳು. ಬೆಟ್ಟು ಗದ್ದೆ ದಾಟಿ ಹಾಡಿ ಹತ್ತಿ ಆ ಕಡೆ ಕೆಳಗಿಳಿದು ದಾರಿಹಿಡಿದಾಗ ಈಚೆ ಪಕ್ಕದ ಸೀನಪ್ಪನ ಹೋಟೆಲಿನ ಬೆಂಕಿ ಭಗಭಗಿಸುತಿದ್ದಿತು. ಕಾಫಿ ನೀರಿನ ಬಿಸಿ ತಪ್ಪಲೆಯೊಳಗಣ ಮುಕ್ಕಾಲು ತಟಪಟಗುಟ್ಟುತ ದಾರಿಹೋಕರಿಗೆ ಹಾರ್ದಿಕ ಆಹ್ವಾನ ಕೊಡುತಿದ್ದಿತು!

ಸುಬ್ಬಣ್ಣ ಮೆಲ್ಲನೆ ಕೇಳಿದನು—ನೀನು ನಿನ್ನೆ ಊಟ ಮಾಡಲಿಲ್ಲವಲ್ಲ?

ತುಂಗಮ್ಮ ನಿರುತ್ತರ. ಇಬ್ಬರೂ ರಸ್ತೆಯ ಕಾಲುವೆ ದಾಟಿ ಹೋಟೆಲಿನ ಜಗಲಿಯೇರಿದರು.

ಯಾರದು? ಬೆಳಗ್ಗಿನ ಬಸ್ಸಿಗೆ ಹೋಗುವವರೇನು? ಎನ್ನುತ್ತ ಸೀನಪ್ಪ ಹೊರಹಣಕಿದನು. ನಂತರ ಪರಿಚಯಗಂಡು ಹೋ—ಸುಬ್ಬಣ್ಣ! ಏನಿನ್ನು ನಿನ್ನೆ ತಾನೇ ಬಂದು ಈ ಬೆಳಿಗ್ಗೆ ಹೊರಟಂತಿದೆ! ಅದರಲ್ಲೂ ತುಂಗಮ್ಮ ಸಹ—ಎಂದು ಇಬ್ಬರನ್ನೂ ಒಳಕ್ಕೆ ಕರೆದುಕೊಂಡುಹೋಗಿ ಬೆಂಚಿನ ಮೇಲೆ ಕುಳ್ಳಿರಿಸಿದನು.

ಹೊರಟ ವಿಚಾರವನ್ನೆಲ್ಲ ನಂತರ ಹೇಳುತ್ತೇನೆ. ಈಗ ಸ್ವಲ್ಪ ಕಾಫಿ-ತಿಂಡಿ ಏನಾದರೂ ಇದ್ದರೆ ಕೊಡು ನೋಡೋಣ--ಎಂದನು ಸುಬ್ಬಣ್ಣ.

ತುಂಗಮ್ಮ ಇದಾವುದರ ಗೋಷ್ಠಿಯೂ ಇಲ್ಲದೆ ಮೂಕಶಿಲೆಯಂತೆ ಯೋಚಿಸುತ್ತಾ ಕುಳಿತಿದ್ದಳು. ತನ್ನ ಗಂಡನ ಅನಿರೀಕ್ಷಿತ ಆಗಮನ ಈ ಆಕಸ್ಮಿಕ ಘಟನೆಯ ಪರಿಣಾಮ ಇವುಗಳನ್ನೆಲ್ಲಾ ಎಳೆ ಎಳೆಯಾಗಿ ಹೊಂದಿಸಿ ಹೊಂದಿಸಿ ನೋಡುತಿದ್ದಳು. ಆದುದರಿಂದ ತನ್ನ ಗಂಡ ಎಚ್ಚರಗೊಡುವನಕ ಅವಳಿಗೆ ಮುಂಗಡೆ ಬಂದು ಕುಳಿತ ಬಿಸಿ ಕಾಫಿ—ಇಡ್ಲಿ ಅವಲಕ್ಕಿಯ ಥಾಟುಗಳ ಗೋಚರವಾಗಲಿಲ್ಲ.

ನಿಜವಾಗಿಯೂ ಅವಳ ಹೊಟ್ಟೆ ಬಹಳವಾಗಿ ಹಸಿದಿದ್ದಿತು. ನಿನ್ನೆಯ ಹನ್ನೆರಡು ಮೈಲುಗಳ ವ್ಯರ್ಥ ಪ್ರಯಾಣ ಮತ್ತು ಮರುಪಯಣ ಇವುಗಳಿಂದಾಗಿ ಅವಳ ದೈಹಿಕ ಅಂತೆಯೇ ಮಾನಸಿಕ ಬಲವೂ ಕುಂಠಿತವಾಗಿ ಮತ್ತೊಮ್ಮೆ ಗಂಡನ ಮುಖ ದರ್ಶನದಿಂದ ಉತ್ತೇಜಿತವಾಗಿ, ಹೆಂಡ ಕುಡುಕನ ತಲೆಯಂತೆ ಅವಳ ಮನಸ್ಸು ಅರೆ ನಿದ್ದೆಯಲ್ಲೇ ತೂಕಡಿಸುತಿದ್ದಿತು. ಅದಕ್ಕೆ ಈ ಬಿಸಿ ಕಾಫಿಯ ಅಭಿಷೇಕ ಎಷ್ಟೋ ಹಿತವಾಗಿ ಕಾಫಿಯನಂತರ ಒಂದು ಲೋಟ ತಣ್ಣೀರನ್ನು ಕೆಳಗಿಳಿಸಿ ಗಿಟ್ಟಿಸಿಕೊಂಡಳು. ಅದು ಅವಳ ಹಸಿದ ಹೊಟ್ಟೆಗೆ ಮಾತ್ರವಲ್ಲ ಹರಣಕ್ಕೂ ಕೊಂಚ ತಂಪು ತೋರಿ ತಟ್ಟಿದಂತಾಯಿತು.

ಸೀನಪ್ಪ ಆತನಕ ಅವರಿಬ್ಬರನ್ನು ಸುಮ್ಮನೆ ಕುಳಿತು ನೋಡುತಿದ್ದು ಕೊನೆಗೆ--ಈಗ ಹೇಳು ನೋಡೋಣ. ಏನು ಸಮಾಚಾರ? ಎಂದನು.

ಸುಬ್ಬಣ್ಣ ಗಂಭೀರವಾಗಿ ಹೇಳಿದ—ಕೇಳು ಸೀನಪ್ಪ. ನಾನು ನಿನ್ನ ಕೂಡೆ ಅಣ್ಣನಂತೆ ತಿಳಿದು ಹೇಳುತ್ತೇನೆ. ನನಗೆ ಮನಸ್ಸಿನಲ್ಲಿ ನೆಮ್ಮದಿ

ಯಿಲ್ಲ. ಮನೆಯಲ್ಲಿ ನೆಮ್ಮದಿಯಿಲ್ಲ. ಅಂತಹ ಕುದಿಯುವ ಕಾವಲಿಯಲ್ಲಿ ನನ್ನ ಹೆಂಡತಿಯನ್ನು ಮಾತ್ರ ಬಿಟ್ಟು ಊರ ಮೇಲೆ ತಲೆಮರಸಲು ನನಗೆ ಇಷ್ಟವಿಲ್ಲ. ಕಷ್ಟ—ಸುಖ ಹೇಗಾದರೂ ಒಂದೇ. ಪಾಲಿಗೆ ಬಂದದ್ದು ಪಂಚಾಮೃತ ಎಂತ ತಿಳಿದು ಅದನ್ನು ನಾವಿಬ್ಬರೂ ಹಂಚಿಕೊಳ್ಳುವುದು ಹಿತ ವೆಂದು ಈಗ ನಿರ್ಧರಿಸಿಕೊಂಡಿದ್ದೇನೆ.

ಎಂದರೆ ಆ ಕೊಪ್ಪದ ಕಣಿವೆಯಲ್ಲಿ ನಿನ್ನ ಹೆಂಡತಿಯನ್ನು ದೂಡ ಬೇಕೆಂದಿರುವೆಯ? ಎಂದನು ಸೀನಪ್ಪ.

ಹೌದು. ನೀನು ಹೇಳುವುದು ಅದೂ ಸಹಜವೆ. ನಾನು ಈ ಹೆಣ್ಣನ್ನು ಗಟ್ಟಕ್ಕೆ ಕರೆದುಕೊಂಡು ಹೋಗಿ ನಂತರ ಏನೆಲ್ಲಾ ದಾಂಧಲೆಗೆ—

ಸೀನಪ್ಪ ನಡುವೆ ಬಾಯಿ ಹಾಕಿ—ಸುಬ್ಬಣ್ಣ! ನಾನು ಸೀದಾ ಹೇಳಿ ದೆನೆಂದು ಬೇಸರಿಸಬಾರದು. ನೋಡು ಇದು ಕೆಟ್ಟ ಕಾಲ. ಗಟ್ಟದ ಮೇಲೆ ಗೇಯಲು ಹೋದವರಿಗೇ ಕೆಲಸ ಸಿಕ್ಕುವುದು ಕಷ್ಟವಾಗಿದೆ. ಆದ ರೂ ನೀನು ಗಂಡಸು. ಹೇಗಾದರೂ ಅಲ್ಲಿನ ನೀರಿಗೆ ಹೊಂದಿಕೊಂಡು ಹನ್ನೆರಡು ಊರು ತಿರುಗಿಕೊಂಡು ಹೊಟ್ಟೆ ತುಂಬಿಸಬಹುದು. ಆದರೆ ಪಾಪ! ಇವಳನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅಲ್ಲಿಯ ಗೌಡರ ಕಣ್ಣಿ ನಿಂದ ಹೇಗೆ ಪಾರಾಗ ಬಲ್ಲೆಯೋ ನನಗಂತೂ ತಿಳಿಯದು! —

ಸುಬ್ಬಣ್ಣನು ತುಂಗಮ್ಮನ ಮುಖವನ್ನೊಮ್ಮೆ ನೋಡಿ ಕೊಂಡು ಹೌದೆಂದು ತಲೆದೂಗಿದನು. ಅವನೇನು ಈ ಹಲವು ತಿಂಗಳುಗಳಲ್ಲಿ ಅಲ್ಲಿ ಯ ಪುಣ್ಯಕಥೆ ಕಾಲಕ್ಷೇಪಗಳನ್ನೆಲ್ಲ ಅರಿತಿಲ್ಲವೇನು? ಗೌಡರ ಕೃಪಾ ದೃಷ್ಟಿ ಸೇರೆಗಾರರ ಮೆಹರ್ಬಾನಿ ಇವುಗಳೆಲ್ಲ ಎಲ್ಲಿ ಧಾರಾಳವಾಗಿ ಹರಿಯ ಬಲ್ಲವೆಂಬುದನ್ನು ಅವನೇನೂ ಕಾಣದವನಲ್ಲ. ಇಂತಹ ಕೀಟಲೆಗಳನ್ನು ಇದಿರಿಸ ಹೊರಟು ಹಲವು ಪರಾಕ್ರಮಿಗಳು ಕೈಕಾಲು ಮುರಿದುಕೊಂಡು ಕಿವಿ ಮೂಗು ಕತ್ತರಿಸಿಕೊಂಡು ಕೊನೆಗೆ ಅದೃಷ್ಟಕ್ಕೆ ಮಾರುಹೋದ ಹಲವು ಹನ್ನೆರಡು ಸಂದರ್ಭಗಳನ್ನು ಅವನು ಕಣ್ಣಾರೆ ಕಂಡು ಕುದಿದಿರುವನು. ಎಂದ ಮೇಲೆ ತುಂಗಮ್ಮನಿಂದಾಗಿ ತಾನೂ ತಾಪತ್ರಯವನ್ನು ಹೆಚ್ಚಿಸಿ ಕೊಂಬ ವಿಧಾನವೇ ಹೊರತು ಬೇರೇನೂ ಅಲ್ಲ ಎಂಬುವನ್ನು ಅವನೂ ಮನ

ಗಂಡನು. ಆದರೂ ಬೇರೇನೂ ಮಾರ್ಗ ತೋರದಿರುವುದರಿಂದ ಸ್ತಬ್ಧ ನಾಗಿ ಕುಳಿತನು.

ಹೋಗಲಿ ಬಿಡು. ನೀನು ಇಲ್ಲೇ ಒಂದು ಬೇಸಾಯವೇಕೆ ಮಾಡಬಾರದು? ಎಂದನು ಸೀನಪ್ಪ.

ಸುಬ್ಬನು ಹೌಹಾರಿ—ಏನು? ಬೇಸಾಯವೆ? ಅದೂ ಈ ಊರಲ್ಲಿ !

ಈ ಊರು ಬೇಡವಾದರೆ ಬಿಡು. ನೆರೆವೂರಲ್ಲಿ ನೋಡಬಹುದು. ನಾವಂತೂ ನೋಡು ಮಣ್ಣಿನೊಡನೆ ಹುಟ್ಟಿ ಮಣ್ಣಿನಲ್ಲೇ ಸಾಯುವ ಜನಾಂಗ. ಎಷ್ಟೆಂದರೂ ಅದೇ ನಮಗೆ ಹಿತ. ನಿನ್ನದು ನೇಗಲು ಹಿಡಿದು ದುಡಿದ ದೇಹ. ಅದಕ್ಕೆ ಅದೇ ಕೆಲಸ ಒಳ್ಳೆಯದು. ' ಹೊರತು ಗಟ್ಟ ಹತ್ತಿ ಕೆಳಗಿಳಿಯುವ ಪ್ರಸಂಗ ಬೇಡವೇ ಬೇಡ !

ಹೌದು ಸೀನಣ್ಣ. ನೀನು ಹೇಳುವುದೆಲ್ಲಾ ಖರೆ. ಒಪ್ಪಿಕೊಂಡೆ ಆದರೆ—

ಅದೇನು ಅಷ್ಟು ಸಂಶಯ?

ಸಂಶಯವೆಂದರೆ—ನಮ್ಮದು ಯಾವ ಭಾಗ್ಯನೋಡಿ ಧನಿಗಳು ಬೇಸಾಯ ಕೊಟ್ಟಾರು? ಕೊಟ್ಟರೂ ನಮ್ಮ ಕೂಡೆ ಏನು ಭಂಡವಾಳವಿದೆ? ಏನೋ ಈ ಕೆಲವು ತಿಂಗಳುಗಳಲ್ಲಿ ಒಂದು ನೂರು ರುಪ್ಯಾಗಳನ್ನು ಉಳಿಸಿ ಕೊಂಡಿದ್ದೇನೆ. ಒಂದು ಬೇಸಾಯಕ್ಕೆ ಎಷ್ಟು ಹಣಬೇಕಿಲ್ಲ? ಅದರಲ್ಲೂ ನಾವು ಹೊಸತಾಗಿ ಮನೆ ಬಾಗಿಲುಮಾಡಿ ಗೇಯುವವರೆಂದ ಮೇಲೆ ಆ ಹತ್ಯಾರುಗಳಿಗೆಲ್ಲಾ ಎಲ್ಲಿಂದ ದುಡ್ಡು ತರಬೇಕು? ಎಲ್ಲಿಂದ ಸಾಲ ಹೊರ ಬೇಕು? ನೀನೇ ಹೇಳು !

ಸೀನಪ್ಪ ಸ್ವಲ್ಪ ಹೊತ್ತು ಸುಮ್ಮನಿದ್ದು ತಲೆ ಕೆರೆದುಕೊಂಡು ಕೊನೆಗೆ ಏನೋ ಜ್ಞಾಪಿಸಿಕೊಂಡು-ಹಾ ನೋಡು. ಈಗ ನೆನಪಾಯಿತು ! ನಮ್ಮ ಗೌರಿಯ ಗಂಡನ ಮನೆಯ ಹತ್ತಿರ ಒಂದು ಒಕ್ಕಲು ಬಿಟ್ಟುಹೋಗಿ ಅದ ನ್ನೆಲ್ಲಾ ಧನಿಗಳೇ ವಹಿಸಿಕೊಂಡಿದ್ದಾರಂತೆ. ಅದಕ್ಕೆ ಒಳ್ಳೆ ಜನಸಿಕ್ಕಿದರೆ ಆ ಸೊತ್ತುಗಳ ಸಮೇತ ಬೇಸಾಯಕ್ಕೆ ಸಹಾಯ ಮಾಡುತ್ತಾರಂತೆ. ಅದನ್ನು ನೀನು ವಿಚಾರಿಸಿ ನೋಡಬಹುದು—ಎಂದನು.

ಒಮ್ಮೆ ಸುಬ್ಬಣ್ಣನ ಮುಖವರಳಿ ಮತ್ತೆ ಕಂದಿಹೋಯಿತು. ಆವನು ನಿರಾಶೆಯಿಂದ ನಿಟ್ಟುಸಿರು ಬಿಟ್ಟು—ಸೀನಣ್ಣ—ನಿನ್ನ ಸಹಾಯದಿಂದ ಅದೆಲ್ಲ ಸರಿಯಾಗಬಹುದು. ಆದರೆ ನಾವಿಬ್ಬರೇ ಅಂತಹ ಬೇಸಾಯಕ್ಕೆ ಕೈಗೊಟ್ಟು ಮತ್ತೆ ಗಾಣಕ್ಕೆ ಕೈಗೊಟ್ಟಂತಾಗಲಾರದು ತಾನೆ?

ಛೆ! ಅದೆಂತಹ ಮಾತು? ಭೂಮಿತಾಯಿ ನಂಬಿದ ಮಕ್ಕಳನ್ನು ಎಂದಿಗೂ ಬಿಟ್ಟು ಹಾಕುವುದಿಲ್ಲ. ಬಿಡು ಹೋಗೋಣ ನಾನು ಬರುತ್ತೇನೆ. ಇಲ್ಲಿಂದೇನು ಬರೇ ನಾಲ್ಕು ಮೈಲು ದೂರ. ಮಧ್ಯಾಹ್ನದೊಳಗೆ ಎಲ್ಲಾ ತಿಳಿದು ಮಾತಾಡಿ ಬರಬಹುದು. ಅದರಲ್ಲಿ ಧನಿಗಳು ನೋಡು—ಒಳ್ಳೇ ಮನುಷ್ಯ—ಆ ಕುಕ್ಕುಂಜಾರು ಹೆಗ್ಡೇರು!

ಈ ವಿಚಾರ ವಿಮರ್ಶೆಗಳನ್ನೆಲ್ಲಾ ತುಂಗಮ್ಮ ಮೌನವಾಗಿ ಮೂಲೆಯಲ್ಲಿ ಕುಳಿತು ಕೇಳುತಿದ್ದಳು. ಇವುಗಳೆಲ್ಲ ತನ್ನ ತಾಪತ್ರಯದಿಂದಾಗಿ ಎಂಬೊಂದು ವಿವೇಚನೆಯು ಅವಳ ಎದೆ ಹಿಸುಕುತಿದ್ದಿತು. ತನ್ನಿಂದಾಗಿ ದೊಡ್ಡ ಮನೆಯೊಂದರ ಅನ್ನ ಪಾತ್ರದಲ್ಲಿ ಒಡಕುಹುಟ್ಟಿ ಗಂಜಿಯು ಹರಿ ಹಂಚ ಹರಡಿ ಹೋಗುವುದಲ್ಲ—ಎಂಬ ವಿವಂಚನೆಯಲ್ಲಿ ಅವಳ ಮನಸ್ಸು ತೂಗಾಡುತಿದ್ದಿತು. ಆದರೆ ಇದೀಗ ಮಿತಿಮೀರಿದ ಮಾತಾಗಿದೆ. ಇನ್ನು ಹಿಂದೆ ಹೆಜ್ಜೆ ಸರಿಸಲು ಬರುವಂತಿದೆಯೆ? ಎಂಬ ಸಂಶಯದಿಂದ ತನ್ನ ಗಂಡನನ್ನು ಕುರಿತು ಮೆಲ್ಲನೆ ಕೇಳಿದಳು—ಏನೋ ನನ್ನ ಮನಸ್ಸಿಗಂತೂ ಬಹಳ ಹೆದರಿಕೆಯಾಗುತ್ತಿದೆ. ನೀವು ಹಿರಿಯರ ಮನಸ್ಸು ಮೀರಿ ಹೋದರೆ ಮನೆಯ ದೈವಗಳ ಚಿತ್ತಕ್ಕೆ ಬಂದೀತೆ? ಹೇಗಾದರೂ ಹೊಂದಿಕೊಂಡು ಒಟ್ಟಾಗಿರುವುದೇ ಲೇಸೆಂದು ಕಾಣುತ್ತದೆ.

ಸುಬ್ಬಣ್ಣ ತನ್ನ ಮುಡಿಯನ್ನು ಬಿಚ್ಚಿ ಪುನಃ ಗಂಟು ಹಾಕುತ್ತಾ—ದೈವಕ್ಕೂ ಕಣ್ಣುಂಟು. ನಾವೇನು ಅದರ ಗಂಟು ಮುಳುಗಿಸಲಿಲ್ಲ. ಅಥವಾ ವಾಕ್ಕು ಮಾಡಿ ಬಂದಿರುವುದೂ ಇಲ್ಲ. ಮತ್ತೂ ನೋಡು! ನೀನು ನಿನ್ನೆ ರಾತ್ರಿಯೆಲ್ಲಾ ಅಡ್ಡಾಡುತ್ತಾಯಿದ್ದಿದ್ದಿ ಎಂಬ ವಿಷಯ ಮನೆಯವರಿಗೆ ತಿಳಿದರೆ ಅದರ ಪರಿಣಾಮವೇನಾದೀತು ಎಂಬ ವಿಚಾರ ನಿನಗೆ ಗೊತ್ತೆ ?

ಚಿಂತಿಲ್ಲ; ಅದನ್ನೆಲ್ಲಾ ನಾನು ಸಹಿಸಿಕೊಳ್ಳುತ್ತೇನೆ.

ಆದರೆ ನಾನು ಸಹಿಸಿಕೊಳ್ಳಲಾರೆ. ಆ ಮಾತೆಲ್ಲಾ ಬಿಡು.

ಹಾಗಾದರೆ ಗೌರಿಯಕ್ಕನ ಕೂಡೆ ಮಾತನಾಡಿ ಆ ಬೇಸಾಯದ ವಿಚಾರ ತಿಳಿದು ನಂತರ ಸಮಗಟ್ಟಾದರೆ ಅಲ್ಲಿಗೆ ಹೋಗಿ ನೋಡಿ ಬರುವುದು ಒಳ್ಳೇದು.

ಅದು ಹೌದೆಂದು ಎಲ್ಲರೂ ಒಪ್ಪಿದರು. ಸೀನಪ್ಪ ತನ್ನ ತಮ್ಮನೊಡನೆ ಹೋಟೆಲು ಸ್ವಲ್ಪ ನೋಡಿಕೊಂಡಿರಲು ಹೇಳಿ ಅಲ್ಲೇ ಹತ್ತಿರದ ತನ್ನ ಬೇಸಾಯದ ಮನೆಗೆ ಇವರನ್ನು ಕರೆದುಕೊಂಡುಹೋದನು.

ಆ ವಠಾರದಲ್ಲಿ ಗೌರಿಯ ನಿರ್ಣಯಕ್ಕೆ ತುಂಬಾ ಮನ್ನಣೆಯಿದ್ದಿತು. ಯಾವುದಕ್ಕೂ ಅಂಜದ ಗಂಡುಗಲಿಗಳ ಕೆಚ್ಚೆದೆಯು ಅವಳ ನಾಲಗೆಯ ತೀಕ್ಷ್ಣಧಾರೆಗೆ ಹೆದರಿ ಹಿಮ್ಮೆಟ್ಟುತಿದ್ದಿತು. ಹಾಳು ಹರಟೆಯ ಹಳ್ಳಿಯ ಹೆಂಗುಸರ ಅಪಪ್ರಚಾರಕ್ಕೆಲ್ಲ ಅವಳ ನಾಲಗೆಯೊಂದೇ ಸೀಮಾಂತಿಕವಾಗಿದ್ದಿತು. ಅದರಲ್ಲೂ ಆ ದಿನ ತನ್ನ ಅಲ್ಪ ಸತ್ಕಾರಕ್ಕಾಗಿ ತುಂಗಮ್ಮನ ಮುದಿಯತ್ತೆ ಮುನಿದು ಲತ್ತಾಪ್ರಹಾರ ಮಾಡಿತ್ತೆಂಬುದನ್ನು ಅರಿತ ಮೇಲಂತೂ ಅವಳ ಜೀವವೇ ಸಿಟಿಗೊಂಡು ತುಂಗಮ್ಮನ ಕರುಣೆಯೊಂದಿಗೆ ಕೂಡಿ ಹೋಗಿ ತುಂಗಾ! ನೀನೇನೂ ಅಂಜುವುದು ಬೇಡ. ಈ ಗೌರಿಯ ಜೀವವಿರುವ ತನಕ ನಿನಗೆ ಯಾರಿಲ್ಲವಾದರೂ ಹೋಗಲಿ—ಆ ಚಿಂತೆಯೇ ಬೇಡ! ಎಂದು ಅವಳನ್ನು ತಬ್ಬಿಕೊಂಡು ಅವಳ ಆತ್ಮಕ್ಕೊಂದು ರಕ್ಷಾಕವಚವನ್ನು ಕೊಟ್ಟು ಬಿಟ್ಟಳು!

ಮತ್ತೇನು? ಗೌರಿ ಮನಸ್ಸು ಮಾಡಿದ ಮೇಲೆ ಮತ್ತೆ ಯಾವ ಕೆಲಸ ತಾನೇ ಹಿಂದೆ ಬಿದ್ದೀತು? ಹಳ್ಳಿ ಹಳ್ಳಿಗರ ನಾಲಗೆಯ ಮೇಲೆ ನಲಿದಾಡುವ ಅವಳ ಹೆಸರು ಗೌರಿ—ದಳವಾಯಿಗೌರಿ—ಎಂಬ ಬಿರುದಾಂಕಿತಧವಳ ಕೀರ್ತಿಯ ಶುಭ ನಾಮಧೇಯ! ಅವಳ ಬಲದಿಂದ—ತುಂಗು ನನ್ನ ತಂಗಿ. ನನ್ನ ಗಂಡನ ಮನೆಯ ಪಕ್ಕದಲ್ಲಿ ಅವಳು ಬೇಸಾಯ ಹೂಡಿದರೆ ನಾವಿಬ್ಬರೂ ಒಂದು ಜೊತೆ! ಎಂಬ ಅವಳ ಅಭಿಮಾನದ ಆತ್ಮೀಯತೆ ಇವರುಗ

ಳಿಂದಾಗಿ ಕುಕ್ಕುಂಜಾರು ಹೆಗ್ಗಡೆಯರ ಬೇಸಾಯ ಸುಬ್ಬಣ್ಣನಿಗೆ ದಕ್ಕಿ ಹೋಯಿತು.

ಗೌರಿಯ ಹಸ್ತಕ್ಷೇಪದಿಂದಾಗಿ ಸುಬ್ಬಣ್ಣ ಬೇಸಾಯ ಮಾಡಿದ ಕತೆ ಊರೆಲ್ಲಾ ಸುಂಟರ ಗಾಳಿಯಂತೆ ಸುಳಿದು ಹೋಯಿತು. ಗುರಿಕಾರ ಲಕ್ಕಣ್ಣ-ಹೂ ಆಗಬಹುದು. ಸುಬ್ಬನಿಗೆ ಗಟ್ಟಿ ಸಾಕಾಗಿ ಈಗ ಬೇಸಾಯ ತೊಡಗಿದ್ದಾನಂತೆ -ಎಂದನು. ಬೇಸಾಯವೇ ಆಗಬೇಕೆಂದಿದ್ದರೆ ನಮ್ಮಲ್ಲೇನು ಜಮೀನು ಕಡಿಮೆಯಿದ್ದಿತ್ತೆ? ಇದೆಲ್ಲಾ ನೆಪಮಾತ್ರ!—ಎಂದನು ತಂಕರ

ಹೂ ಹಾಗಲ್ಲ. ಇದೆಲ್ಲಾ ಗೌರಿಯ ಗಡದ್ದುಗಾರಿಕೆ! ಆ ಸೂಳೆಯ ಮಗಳನ್ನು ಊರಮೇಲೆ ಎತ್ತಿಕಟ್ಟಿ ನಮ್ಮ ಮುಖಕ್ಕೆ ಮಂಗಳಾರತಿ ಮಾಡಬೇಕೆಂದೇ ಅವಳ ಸಾಹಸ! ಇನ್ನು ಇಬ್ಬರೂ ಕೂಡಿ ಬೇಕಾದಂತೆ ಕೋಲ ಕಟ್ಟಬಹುದು!—ಎಂದು ವ್ಯಾಖ್ಯಾನ ಬರೆದಳು ರಾಮಿ.

ಇವುಗಳೆಲ್ಲಾ ಇದ್ದಂತೆಯೇ ಅಥವಾ ಕೊಂಚ ಉದ್ದ ಅಗಲವಾಗಿಯೇ ಗೌರಿಯ ಕಿವಿಗೆ ಬಿದ್ದವು.

ಸೂಳೆ ಮಗಳಂತೆ ಸೂಳೆ! ಗಂಡನನ್ನು ಕಳೆದುಕೊಂಡ ಇವಳ ಚಿಕ್ಕ ತಾಯಿ ಯಾರೊಡನೆಯೋ ಗಟ್ಟಕ್ಕೆ ಓಡಿಹೋಗಿ ಮತ್ತೆ ಏನೇನೋ ಆಗಿ ಆ ದಿಂಡೆ ಯಾರೋ ಒಬ್ಬ ಜಾತಿ ಮುದಿಯನಿಗೆ ದುಡ್ಡು ಕೊಟ್ಟು ಒಪ್ಪಿಸಿ ಕೊಂಡಾಗಅದೆಲ್ಲಾ ಸಂಭಾವಿತತನ! ಮತ್ತೆ ಈ ತುಂಗಮ್ಮನ ತಾಯಿ ಹಾಗೆ ಮಾಡದೆ ಪಾಪ! ಎಲ್ಲವನ್ನು ಅನುಭವಿಸಿದಾಗ ಅದೊಂದು ದೊಡ್ಡ ತಪ್ಪೆಂತ ಬಗುಳುತ್ತಾಳೆ!—ಎಂದು ದಳವಾಯಿ ಗೌರಿ ಸಿಡಿಗುಂಡು ಹಾರಿಸಿದಾಗ ಅವರೆಲ್ಲಾ ಅಂಜಿ ಮುಖಮುಚ್ಚಿಕೊಂಡರು!

ಸುಬ್ಬಣ್ಣ ತನ್ನ ಬೇಸಾಯಕ್ಕೆ ಗೇಣಿಚೀಟು ಬರೆದುಹಾಕಿ ಧನಿಯರಿಂದ ಬೇಕಾದ ಜೋಡು—ಬೀಜ—ಗೊಬ್ಬರ ಎಲ್ಲವನ್ನುವಹಿಸಿಕೊಂಡನು.

ಅವುಗಳಿಗೆಲ್ಲಾ ಗೃಹಸ್ಥರ ಮುಂದೆ ಕ್ರಯಕಟ್ಟಿ ಅವುಗಳನ್ನು ಐದು ವರ್ಷಗಳಲ್ಲಿ ನಿಬಡ್ಡಿಯಿಂದ ಮರುಪಾವತಿ ಮಾಡಬೇಕೆಂದೂ ನಿರ್ಣಯಿಸ

ಲಾಯಿತು. ಅಂತೆಯೇ ಯುಗಾದಿಗೆ ಮುಂಚಿತವಾಗಿಯೇ ಅವರು ಆ ಹೊಸಮನೆ ಸೇರಿದರು.

ಆ ಮನೆ ಹೊಕ್ಕಾಗ ಒಮ್ಮೆ ತುಂಗಮ್ಮನ ಕಣ್ಣಿನಿಂದ ನೀರುಕ್ಕಿತು. ಇದು ತನ್ನ ಮನೆ. ತನ್ನದೆಂಬ ಬೆಚ್ಚನೆ ಬದುಕಿನ ಮೆಚ್ಚಿತದ ಮನೆ. ಇಲ್ಲಿ ಅತ್ತೆಯ ಸಿಡುಕಿನ ಸೆಕೆಯೂ ಇಲ್ಲ. ಅತ್ತಿಗೆ ನಾದಿನಿಯರ ನಂಜಿನ ನಡುಕದ ಚಳಿಯೂ ಇಲ್ಲ. ತನಗಾಗಿ ತನ್ನ ಬಾಳೆಂಬ ವೈಯಕ್ತಿಕತೆಯ ನೆಲೆಗಟ್ಟಿನ ಮೇಲೆ ನಿಂತಿರುವ ಮನೆ! ಆದರೆ ಅದರ ಒಳಹೊಕ್ಕು ಮೂಲೆ ಮೂಲೆಯ ಕರಿನೆರಳಿನ ಕಡೆ ನೋಡಿ ಒಮ್ಮೆ ಬೆಚ್ಚಿಬಿದ್ದು—ಅಯ್ಯೋ! ಈ ಮನೆಯಲ್ಲಿ ನಾನೇನು ಮಾಡಲಾಪೆ? ಇದರ ಕಸಗುಡಿಸಿ ಚೊಕ್ಕವಾಗಿರಿಸಿ ಇದನ್ನು ಬೆಳಗಿಸಬಲ್ಲೆನೆ?—ಎಂದು ತರ್ಕಿಸಿಕೊಳ್ಳುವಳು. ಆದರೆ ನಂತರ ಸ್ತ್ರೀಸಹಜವಾದ ಆತ್ಮದ ಭರವಸೆಯ ಮುನ್ನೋಟದಿಂದ—ಇದೇನು ಮಹಾ! ಎಂದು ನೀರಿಗೆ ಬಿದ್ದ ಹಂಸದಂತೆ ಎಲ್ಲವನ್ನು ಸ್ವಾಭಾವಿಕವಾಗಿ ಕಂಡು ಗ್ರಹಿಸಿಕೊಳ್ಳುವಳು. ಆದರೆ—ಒಂದು ಬಾರಿ ತನ್ನ ತಾಯಿ ಇವುಗಳನ್ನೆಲ್ಲಾ ನೋಡಿ ಹೆಮ್ಮೆಯಿಂದ ನಸುನಕ್ಕಿದ್ದರೆ? ಆ ಮಾತು ಇನ್ನೇಕೆ? ಹೋಗಲಿ! ತುಂಗಮ್ಮನಿಗೆ ತವರೇ ಇಲ್ಲ!

ಲಕ್ಕಣ್ಣನ ಮನೆಯಲ್ಲಿ ತೂತು ಬಿದ್ದ ಗಡಿಗೆ ಮತ್ತೆ ಕೆಲವು ತಿಂಗಳುಗಳಲ್ಲಿ ಮತ್ತೂ ಬಿರಿಬಿಟ್ಟು ದೊಡ್ಡದಾಯಿತು. ಸುಬ್ಬಣ್ಣನ ತಮ್ಮ ಗೋವಿಂದ ಒಂದು ದಿನ ಮಧ್ಯಾಹ್ನ ಊಟಕ್ಕೆ ತುಂಗಮ್ಮನ ಮನೆಗೆ ಬಂದನು. ಊಟ ಮುಗಿಸಿ ಸಂಜೆಯಾದರೂ ಅಲ್ಲಿಂದ ಕದಲಲಿಲ್ಲ. ಕೊನೆಗೆ ಕಣ್ಣೀರು ಸುರಿಸುತ್ತ ಅಣ್ಣನೊಡನೆ—ನನಗೊಂದು ಇಲ್ಲೆ ಚಿಕ್ಕ ಕೋಣೆ ಆದೂ ಅಲ್ಲವಾದರೆ ಹೊರಚಾವಡಿಯಾದರೂ ಚಿಂತಿಲ್ಲ ಸಾಕು! ಆದರೆ ನನಗೆ ಮನೆಯ ರಾಮಿಯ ಗಂಜಿಯಂತೂ ಬೇಡ!—ಎಂದನು.

ಸುಬ್ಬಣ್ಣ ಮತ್ತು ತುಂಗಮ್ಮ ಮುಖಮುಖ ನೋಡಿಕೊಂಡರು. ಇದರಿಂದಾಗಿ ತಮ್ಮ ಮೇಲೆ ಅಪವಾದ ಬರಲಾರದೆ? ಎಂದು ಅಂಜಿ ಗುಸುಗುಸು ಮಾತಾಡಿದರು. ಕಟ್ಟಕಡೆಗೆ ಗೋವಿಂದನು—ನಿಮ್ಮಲ್ಲಿ ನನಗೆ ಜಾಗ ಇಲ್ಲವಾದರೆ ನಾನು ಬೊಂಬ್ಯಾಗಾದರೂ ಹೋಗುತ್ತೇನೆ—ಎಂದ

ಮೇಲೆ ಇಬ್ಬರೂ—ನೀನೇನೂ ನಮಗೆ ಹೆಚ್ಚಲ್ಲ. ಬಾ! ನಮ್ಮಲ್ಲಿಯೇ ಇರು—ಎಂದು ಒಪ್ಪಿಕೊಂಡರು.

ಇದೆಲ್ಲ ಸೀನನ ಕಾಫಿಯ ಪ್ರಭಾವ—ಗೌರಿಯು ದಲ್ಲಾಳಿ!—ಎಂದು ರಾಮಿಯು ಬುಸುಗುಟ್ಟಿದಳು. ಅಲ್ಲ—ಅಲ್ಲ, ಅದು ರಾಮಿಯು ತೆಳು ಗಂಜಿನೀರಿನ ಪ್ರಭಾವ!—ಎಂದು ಗೌರಿಯೂ ಪ್ರತ್ಯಸ್ತ್ರ ಹೂಡಿದಳು! ಸೀನನ ಹೋಟೆಲಿಗೆ ಕಾಫಿ ಕುಡಿಯಲು ಬಂದ ಗಿರಾಕಿಗಳೆಲ್ಲಾ ಅದಕ್ಕೆ ಸಹಜ—ಎಂದು ಸೈಗುಟ್ಟಿದರು!

ಬೇಸಗೆಯು ಕಳೆಯುತ್ತ ಬಂದಿತು. ಸುಬ್ಬಣ್ಣನ ಬಿತ್ತಿದ ಬೀಜವ ಹದಗೆಡಲಿಲ್ಲ. ಅಗೆ ಸಮೃದ್ಧವಾಗಿ ಬೆಳೆದು ಮಳೆಗಾಲದ ಮೊದಮೊದ ಲಿಗೇ ಅವನ ಬೇಸಾಯ ಚೊಕ್ಕವಾಗಿ ಮುಗಿದುಹೋಯಿತು.

ತುಳುನಾಡಿನ ಮಳೆಯ ವೈಭವವನ್ನು ಕಣ್ಣಾರೆ ಕಾಣಬೇಕು. ಮಲೆ ನಾಡಲ್ಲಿ ಮುಗಿಲು ಬೆಟ್ಟ ತಲೆಗೆ ಮುಸುಕು ಮುಚ್ಚಿಕೊಂಡು ನಿರಂತರವಾಗಿ ವಿಧವೆಯಂತೆ ಕಣ್ಣೀರು ಸುರಿಸಿ ಗೋಳಾಡುತಿದ್ದರೆ - ತುಳುನಾಡ ಬಯಲು ಬೆಟ್ಟುಗದ್ದೆಗಳ ಮೇಲೆ ಮುಗಿಲು ಮಿಂಚಿನ ಬೈತಲೆ ಬಿಟ್ಟು ಕಪ್ಪು ಮುಂಗುರುಳನ್ನು ಹರಡಿ ಹಾಯಾಗಿ ನೀರು ಸುರಿಸುವಂತೆ ಸುಪ್ರಸನ್ನ.

ಆಗಲಾಗ ಬೇಸಾಯ ಮುಗಿಸಿ ಮನೆಯ ಚಾವಡಿಯ ಮುಂಭಾಗ ದಲ್ಲಿ ಕುಳಿತು ತುಂಗಮ್ಮನ ಮುಂಜಾಗ್ರತೆಯಿಂದ ಕೂಡಿಟ್ಟ ಹಲಸಿನ ಹಪ್ಪಳ ಬೀಜಗಳನ್ನು ಸುಟ್ಟು ಮೆಲ್ಲುತ್ತ ಆ ತ್ರಿಮೂರ್ತಿಗಳು ತಾವೇ ಚರಿತಾರ್ಥರೆಂದು ಭಾವಿಸಿಕೊಂಡರು!

ಸುಬ್ಬಣ್ಣನ ಕೊಯ್ಲು ಎಲ್ಲರಿಗಿಂತಲೂ ಮೊದಲಿಗೇ ತೀರಿಹೋಯಿತು. ಆದುದರಿಂದ ನಂತರದ ಆಳುಗಳ ಅಭಾವದ ತಾಪತ್ರಯ ಅವನಿಗೆ ತಗಲಲಿಲ್ಲ. ಅಂತೆಯೇ ಕೆಲಸದ ಒತ್ತಡದಿಂದಾಗಿ ಆಳುಗಳಿಗೆ ದುಬಾರಿ ಕೂಲಿಯಾಗಿ [illegible]ಳಿಸು ಕೊಡುವ ಸಂದರ್ಭವೂ ಅವನನ್ನು ಸೋಂಕ ಲಿಲ್ಲ. ಆದುದರಿಂದ ತೆನೆತುಂಬಿದ ಬತ್ತ ಅವನ ತಿರಿಯಲ್ಲೇ ನೆಲೆಯಾಗಿ ನಿಂತಿತು.

ಸುಗ್ಗಿ ಬೇಸಾಯ ಅವರಿಗೆ ಮಿತವಾಗಿದ್ದಿತು. ನಾಲ್ಕೆ ಗದ್ದೆಗಳು ! ಅವುಗಳೂ ನಂಜು ನೀರಿನ ಗದ್ದೆಗಳಾದುದರಿಂದ ಈ ಹಿಂದಣವರಾರೂ ಅದರಲ್ಲಿ ಚೆನ್ನಾಗಿ ಬೆಳೆ ತೆಗೆದಿದ್ದಿಲ್ಲ. ಬೆಳೆ ಕೊಳೆತು ಹೋಗುವುದೇ ಅದರ ವಾಡಿಕೆಯಾಗಿದ್ದಿತು. ಸುಬ್ಬಣ್ಣನು ಅದಕ್ಕೆ ಉಪ್ಪಿನ ಗೊಬ್ಬರ ಹಾಕಿ ಸರಕಾರಿ ಬೀಜವಿಟ್ಟು ಬೆಳೆಬೆಳೆಸಿದಾಗ ಅಹಾ ! ನೋಡಬೇಕಿದ್ದಿತು ಅದರ ಸೌಂದರ್ಯ ! ಆ ಕಟ್ಟಹುಣಿಯಲ್ಲಿ ತೆರಳುವವರನ್ನೆಲ್ಲ ಆ ತೆನೆಗಳು ಕೈ ತೂಗಿ ಕರೆದು ಕಾಲು ಹಿಡಿದು ಕ್ಷಣಕಾಲ ನಿಲ್ಲಿಸಿ ಮೆಚ್ಚಿಸಿ ಕಳುಹಿಸು ತಿದ್ದುವು. ಅಲ್ಲಿ ಆ ಗದ್ದೆಯ ಮಧ್ಯೆ ಗೋವಿಂದನ ಬೆದರುಕನಿರದಿರುತಿದ್ದರೆ ನಿಜವಾಗಿಯೂ ಅದಕ್ಕೆ ಕೆಟ್ಟಕಣ್ಣುತಾಗಿ ಹುಳಹಿಡಿದು ಹಾಳಾಗು ತಿದ್ದಿತೋ ಏನೋ !

ಸುಬ್ಬಣ್ಣನಿಗೆ ಸುಗ್ಗಿಯ ಸಾಗುವಳಿಯಿಂದಲೇ ಧನಿಯರಿಗೆ ಗೇಣಿ ಸಲಾಯಿಸಲು ಸಾಧ್ಯವಾಯಿತು. ಇನ್ನು ಅವರ ಸಾಲದಲ್ಲಿ ಅರ್ಧಾಂಶ ವನ್ನೇ ತೆರಬಹುದಿದ್ದಿತು. ಆದರೆ ಅದಕ್ಕೆ ಇನ್ನೂ ನಾಲ್ಕು ವರ್ಷಗಳ ಕಂತು ಇದೆ. ಆದುದರಿಂದ ಅದನ್ನು ಒಮ್ಮಿಂದೊಮ್ಮೆಗೆ ತೀರಿಸುವುದಕ್ಕಿಂತ ಕೊಂಚ ಮುಂಜಾಗ್ರತೆಯಿಂದ ಉಳಿಸಿಕೊಂಡು—

ಅಹುದು. ಮುಂಜಾಗ್ರತೆಯಿಂದ ಉಳಿಸಿ ಕೊಳ್ಳಲೇ ಬೇಕು. ತುಂಗಮ್ಮ ಈ ಮೂರು ತಿಂಗಳುಗಳಿಂದ ಬಹಿಷ್ಠೆಯಾಗಿಲ್ಲವೆಂದು ಹೇಳು ತಿದ್ದಳಲ್ಲ ? ಅದಕ್ಕಾಗಿ ಉಳಿಸಿಕೊಳ್ಳಲೇ ಬೇಕು !

ಈ ಸುದ್ದಿಯನ್ನು ಸುಬ್ಬಣ್ಣನು ಗೌರಿಯೊಡನೆ ಒಂದು ದಿನ ಹೇಳಿದನು. ತುಂಗಮ್ಮನು ಕೊಂಚ ವ್ಯಸ್ತಳಾಗಿ ಇಶ್ಶಿ ! ಇದನ್ನೆಲ್ಲಾ ಈಗಲೇ ಪ್ರಚಾರ ಮಾಡುತ್ತಾ ಬರಬೇಕೆ ? ಎಂದಳು.

ಹೇಳದೆ ಮತ್ತೆ ಆಸಮಯಕ್ಕೆ ನಾನು ಯಾರ ಕೈಕಾಲು ಹಿಡಿಯಲು ಹೋಗಬೇಕು ? ನನಗಂತೂ ಯಾರೂ ಇಲ್ಲ ತಾನೆ ?

ತುಂಗಮ್ಮನು ಉದಾಸಳಾಗಿ—ನನಗೂ ಹಾಗೇನೇ!–ಎಂದು ನಿಟ್ಟು ಸಿರು ಬಿಟ್ಟಳು.

ಗೌರಿಯು ಮಾತ್ರ ಅದನ್ನೆಲ್ಲ ಗಾಳಿಯಲ್ಲಿ ತೇಲಬಿಟ್ಟು - ಛೆ! ಏನು ಹುಚ್ಚಾಟವಿದು? ಯಾರಿಗೆ ಯಾರು ಇಲ್ಲವಾದರೆ ಊರಲ್ಲಿ ಹೆರಿಗೆಯೇ ಆಗೋದಿಲ್ಲವೆ? ಯಾರಿಲ್ಲದಿದ್ದರೇನು? ದೇವರಿದ್ದಾನೆ! ನಾಡದು ಪೆರ್ಡೂರು ಪದ್ಮನಾಭ ದೇವರಿಗೆ ಹಬ್ಬಕ್ಕೆ ಒಂದು ಸಾವಿರ ಹಣ್ಣು ಹರಕೆಹೇಳಿಕೊಳ್ಳಿ. ಏನೂ ಗಾಬರಿಯಿಲ್ಲ. ನಮ್ಮ ದೇವರು ನಮ್ಮ ಕೈ ಬಿಡಲಾರ!–ಎಂದಳು.

ಪೆರ್ಡೂರು ಅನಂತ ಪದ್ಮನಾಭ ಸ್ವಾಮಿ! ದುಷ್ಟ ಶಕ್ತಿಗಳ ನಿಗ್ರಹಕ್ಕಾಗಿ ಅವನು ಗದಾಧಾರಿಯಾದಂತೆಯೇ ಅವನ ಪ್ರಸನ್ನ ವರದ ಹಸ್ತವು ಭಕ್ತರ ಭಾಗ್ಯಾವನಿಯ ಭವ್ಯೋದಯಕ್ಕಾಗಿ ಸದಾ ನೆರವುನೀಡಿದೆ! ಅವನ ಅಮೃತಮಯ ಮಂದಹಾಸ ಸಜ್ಜನರ ಉಲ್ಲಾಸಕ್ಕಾಗಿ ತುಂಬಿತುಳುಕುತಿರುವಂತೆಯೇ ಜನರ ಅಲ್ಪ ಕೃತಿಗಳ ವೃಥಾ ಪರಿಶ್ರಮಕ್ಕಾಗಿ ಅವಜ್ಞೆಯನ್ನು ಸುರಿದಂತೆ ತೋರುತಿದೆ! ಅವನ ಉದ್ಧಾರಕ್ಕೆಂದು ಸನ್ನದುಹೊತ್ತು ಈ ತನಕ ಬಂದ ಮಹನೀಯರೇನು? ಅರ್ಥಪ್ರಿಯರೋ–ಧರ್ಮಪ್ರೀಯರೋ–ಕರ್ಮಪ್ರಿಯರೋ ಅಥವಾ ವರ್ಣ ಪ್ರಿಯರೋ—ಯಾರಾದರೇನು? ಆ ಮಾನವೀಯ ಲೋಪದೋಷಗಳೆಡೆ ತನ್ನ ದೈವಿಕ ದಯಾಮಯ ದೃಷ್ಟಿಯ ಆಚ್ಛಾದನೆಯನ್ನು ಪಸರಿಸಿ ಕಾಯಲಿರುವ ಕಲ್ಯಾಣಮೂರ್ತಿ! ಎಂತು ಗಟ್ಟಿದ ದಿಬ್ಬದಾಚೆ ಕೈನೀಡಿ ಸೇವೆಗೊಂಡು ಸಲಹುವ ಸೌಜನ್ಯವೋ ಅಂತೆಯೇ ಮಲೆನಾಡ ಹೊಲಬೆಳೆಗಳನ್ನು ತುಂಬಿಕೊಟ್ಟು ಹಣ್ಣಿನ ಹರಕೆಗಳಿಂದ ತೃಪ್ತಿಗೊಳುವ ಪದ್ಮನಾಭನ ದಿವ್ಯಸನ್ನಿಧಿಯಲ್ಲಿ ತಮ್ಮ ಸೇವೆಯನ್ನು ಒಪ್ಪಿಸಲಿರುವೆವೆಂದು ಆ ದಂಪತಿಗಳು ಕೈಮುಗಿದು ಬೇಡಿಕೊಂಡರು!

ಹಳ್ಳಿಗರ ಸರಳ ಸಂಸ್ಕೃತಿಯ ಪ್ರತೀಕದಂತಿರುವ ಆ ಚಿಕ್ಕ ಪಟ್ಟಣವು ಅನಂತ ಪದ್ಮನಾಭ ಸ್ವಾಮಿಯ ಕೃಪಾಕಟಾಕ್ಷದಿಂದಾಗಿ ಇತ್ತೀಚೆಗೆ ಎಷ್ಟು ಬೆಳೆದು ಬಂದಿಲ್ಲ! ನಾಲ್ಕು ಜವಳಿಯ ಮಳಿಗೆಗಳು—ನಾಲ್ಕು ದವಸದ ಅಂಗಡಿಗಳು—ನಾಲ್ಕು ಲೋಹ ಸರಕಿನ ಸಂಚಯಗಳು—ಹನ್ನೆರಡು ಪಾನೀಯ ಗೃಹಗಳು! ಇವುಗಳ ಮೇಲೆಲ್ಲ ಆ ಸ್ವಾಮಿಯ ದಿವ್ಯಕಟಾಕ್ಷ ಓರಂತೆ ಬಿದ್ದಿದೆ. ಹೆಚ್ಚೇಕೆ? ಇನ್ನು ತುಸು ದೂರ ಸರಿದು ಆ ಕಡೆ ಮದ್ಯಸಿನ್ಧೋಧದ ಕಾಯಿದೆ ಮುರಿಯುವ ಸದ್ಗೃಹಸ್ಥರ ಮೇಲೂ ಅವನ ಪೂರ್ಣಾನು

ಗ್ರಹ ಬಿದ್ದಿಲ್ಲವೆಂದು ಹೇಳುವರಾರು? ಸುಲಭನೋ ಹರಿ ತನ್ನ ಭಕುತರಿಗೆ– ಎಂಬದಾಸರ ಪದ ಸತ್ಯವೇ ಸತ್ಯ!

ತುಂಗಮ್ಮನ ಹೊಟ್ಟೆಗೆ ಆರು ತಿಂಗಳಾಗುವ ಮುನ್ನವೇ ಸುಬ್ಬಣ್ಣನು ದೇವರಿಗೆ ಸಾವಿರ ಹಣ್ಣಿನ ಹರಕೆ ಸಲಿಸಿ ಕೃತಾರ್ಥನಾದನು.

ಆ ಊರಲ್ಲಿ ಸುಬ್ಬಣ್ಣನ ಹರಕೆಯ ಹಣ್ಣು ತಮಗೆ ಸಿಗಲಿಲ್ಲವೆಂದು ಯಾರೂ ಹೇಳಿದಂತಿಲ್ಲ. ಧನಿಗಳಿಗೆ ಅಂತೆಯೇ ಗೌರಿಗೆ ನಾಲ್ಕು ಹಣಿಗೆ ಒಳ್ಳೆ ಹಣ್ಣನ್ನು ತೆಗೆದಿಟ್ಟಮೇಲೆ ಉಳಿದವುಗಳೆಲ್ಲಾ ಕಂಡ ಕಂಡವರ ಬಾಯಿ ಸೇರಿವೆ. ತೆಗೆದಿಟ್ಟ ಹಣ್ಣುಗಳಲ್ಲಿ ಎರಡು ಹಣಿಗೆಯನ್ನು ಆ ಸಂಜೆಯೇ ಸುಬ್ಬಣ್ಣ ಧನಿಯರಿಗೆ ಕೊಟ್ಟು ಕೈ ಮುಗಿದನು.

ಇದೇನು ಸುಬ್ಬಣ್ಣ? ಭಾರಿ ಹಣ್ಣು!

ಏನಿಲ್ಲ. ಏನೋ ಎಂದು ಚಿಕ್ಕ ಹರಕೆಯಿದ್ದಿತ್ತು.

ಯಾವ ಬಗ್ಗೆ?

ನಮ್ಮವಳಿಗೆ ಹೆರುವಾಗ ಕೈಕಾಲು ಸುಖಕೊಡಬೇಕೆಂದು ಬೇಡಿಕೊಂಡಿದ್ದೆ.

ಈಗ ಎಷ್ಟು ತಿಂಗಳು?

ಆರು ಮಾತ್ರ.

ಹಾಗಾದರೆ ತಿಂಗಳು ತುಂಬಿದ ಹಾಗೆಲ್ಲಾ ಜಾಗ್ರತೆ ಮಾಡಿಕೊ! ಇದು ಮೊದಲ ಹೆರುಗೆ, ಏನಾದರೂ ನಂಜು ಏರಿದರೆ ಬಾ, ನೀರು ಮಂತ್ರಿಸಿ ಕೊಡುತ್ತೇನೆ—ಎಂದರು ಹೆಗ್ಗಡೆಯರು.

ಶ್ರೀಮಾನ್ ಹೆಗ್ಡೆಯರ ಮಂತ್ರದ ನೀರಿನ ಖ್ಯಾತಿ ಆ ಪ್ರಾಂತದಲ್ಲಿ ತುಂಬಾ ಹಬ್ಬಿದೆ. ಯಾವ ವಿಷದ ಜಂತುಗಳಿಗಾದರೂ ಒಬ್ಬನನ್ನು ಕೊಲ್ಲಬೇಕೆಂದೇ ಖಂಡಿತವಾಗಿದ್ದರೆ ಆಗ ಅವುಗಳಿಗೆ ಹೆಗ್ಗಡೆಯವರ ಗೈರು ಹಾಜರಿಯನ್ನು ವಿಚಾರಿಸಿಕೊಂಡೇ ಇರಬೇಕಿದ್ದಿತು. ಅಲ್ಲವಾದರೆ ಅಂತಹವನಿಗೆ ಸಾಯಲು ಅವರು ಸರ್ವಥಾ ಬಿಡುತ್ತಿರಲಿಲ್ಲ. ಹೀಗಾಗಿ ಆ ಊರಿನ ಹಾವು

ಗಳೆಲ್ಲ ತನ್ನ ಜೀವನದ ಅಸಾರ್ಥಕತೆಗಾಗಿ ಬಾರಿ ಬಾರಿಗೂ ಬುಸ್ಸೆಂದು ನಿಟ್ಟುಸಿರು ಬಿಡುವುದೊಂದು ಜೋದ್ಯದ ಮಾತಲ್ಲ!

ಆ ಮಂತ್ರಶಕ್ತಿಯ ನೀರಿನ ಗುಣವನ್ನು ಸುಬ್ಬಣ್ಣನು ಕಣ್ಣಾರೆ ಕಂಡು ತಿಳಿದಿರುವನು. ಏಕೆ? ಕಳೆದ ಬಾರಿ ಹೂಟಿಯ ಸಮಯ ತನ್ನ ಎತ್ತಿನ ಕಾಲು ಮುರಿದು ಹೋದಾಗ ಅದರ ಬಲದಿಂದಲೇ ಅವನು ಪಾರಾಗಿದ್ದನು. ಆದುದರಿಂದ ತನ್ನ ಹೆಂಡತಿಯ ಹೆರಿಗೆಯ ಸಂದರ್ಭದಲ್ಲಿ ಅದರ ಉಪಯೋಗವು ಬೀಳುವುದಾದರೆ ಸರಿ – ಹೆದರಿಕೆಯಿಲ್ಲವೆಂದು ಧೈರ್ಯ ಮಾಡಿಕೊಂಡನು.

ಆ ರಾತ್ರಿ ತುಂಗಮ್ಮನು ಗೌರಿಯ ಮನೆಗೆ ಹಣ್ಣುಗಳನ್ನು ಕೊಂಡು ಹೋಗಿ ಕೊಟ್ಟು ಹೇಳಿದಳು--

ಗೌರಕ್ಕ! ದೇವರೊಡನೆ ಕೇಳಿಯಾಯಿತು. ಇನ್ನು ನಿನ್ನೊಡನೆ ಕೇಳುವುದು ಮಾತ್ರ. ನನಗೇಕೋ ತಿಂಗಳು ತುಂಬಿತೆಂದರೆ ಎದೆ ದಡದಡ ಹೇಳತೊಡಗಿದೆ.

ಅಯ್ಯೋ ಬೆಪ್ಪೆ! ನೀನೇಕೆ ಹೆದರುವುದು? ನಿನಗೆ ಒಂಬತ್ತು ತಿಂಗಳು ತುಂಬಿತೆಂದ ಮೇಲೆ ಮತ್ತೆ ನೀನು ಹೆರುವನಕ ನಾನು ಈ ಠಾವು ಬಿಟ್ಟು ಕದಲುವುದಿಲ್ಲ. ನಿನಗದರ ಯೋಚನೆಯೇ ಬೇಡ! ದೇವತಾನುಗ್ರಹದಿಂದ ಯಾವ ತೊಂದರೆಯೂ ಬರಲಾರದು. ಇನ್ನು ಅಂತಹ ಸಂದರ್ಭದಲ್ಲಿ ನಮ್ಮ ಹಿರಿಯಡ್ಕ ಡಾಕ್ಟರರ ಕೈಗುಣ ಬಹಳ ಒಳ್ಳೇದು! ನಿನಗೆ ಗಾಬರಿಯೇ ಬೇಡ!–ಎಂದು ತುಂಗಮ್ಮನ ಮೈದಡವಿ ಸಮಾಧಾನ ಪಡಿಸಿದಳು ಗೌರಿ.

ಆ ಹಳ್ಳಿಗರೊಡನೆ ಎಂತಹ ಮಧುರ ಬಾಂಧವ್ಯದ ಬೆಸುಗೆ ಕೂಡಿ ಹೋಗಿದೆ!

ಗೌರಿ ಮತ್ತೆ ಹೇಳಿದಳು ಆದರೆ ಒಂದು ಶರ್ತ -

ಏನದು?

ನಿನ್ನ ಬಯಕೆ ನಮ್ಮ ಮನೆಯಲ್ಲಿ ಆಗಬೇಕು. ಅದಕ್ಕೆ ನೀನು ತಕರಾರು ಹೇಳಬಾರದು!

ಅಯ್ಯೋ ಅದೆಲ್ಲಾ ಯಾಕಪ್ಪ? ನನಗಂತೂ ಅದಾವುದೂ ಬೇಡವಾಗಿದೆ!

ಆದರೆ ನನಗೆ ಅದೆಲ್ಲಾ ಬೇಕಾಗಿದೆ ನೋಡು! ನೀನು ಯಾವ ಕರಕರೆಯನ್ನೂ ಮಾಡಿಕೊಳ್ಳುವುದು ಬೇಡ. ನಾನೆಲ್ಲಾ ನೋಡಿಕೊಳ್ಳುತ್ತೇನೆ.

ಎಂಟನೇ ತಿಂಗಳಲ್ಲಿ ಗಂಡನ ಮನೆಯಲ್ಲಿ ಬಸಿರಿಗೆ ಸೀಮಂತ ಪ್ರಸ್ಥವಾಯಿತು. ಅಂತೆಯೆ ಅದಕ್ಕೆ ಉತ್ತರವಾಗಿ ಗೌರಿಯ ಮನೆಯಲ್ಲಿ ಗಡದ್ದಿನ ಬಯಕೆಯ ಸನ್ಮಾನವು ನಡೆಯಿತು. ಮತ್ತೆ ಆ ಕಡೆ ಈ ಕಡೆ ಜಾತಿಯವರ ಮನೆಯಲ್ಲಿ. ಕೊನೆಗೆ ಧನಿಗಳ ಮನೆಯಲ್ಲಿ ಹೆಗ್ಗಡಿತಿಯವರ ಔದಾರ್ಯ—ತುಂಗಮ್ಮನ ದಾಕ್ಷಿಣ್ಯ ಇವುಗಳಿಂದಾಗಿ ಹೊಡೆದ ಹೆಸರಿನ ಪರಮಾನ್ನ ಬಹಳವಾಗಿ ಆಕೆ ಸೋತೇ ಹೋದಳು !

ಇನ್ನು ಸಾಕು ಈ ಊಟದ ಶಾಸ್ತ್ರ. ಸುಮ್ಮನೆ ಆರಾಮವಾಗಿ ಕುಳಿತಿರಬೇಕು—ಎಂದನು ಸುಬ್ಬಣ್ಣ. ಆದರೆ ಹಾಗೆ ಆರಾಮವಾಗಿ ಕುಳಿತಿರುವುದೂ ತುಂಗಮ್ಮನಿಗೆ ಕಷ್ಟವಾಗಿ ಬಂದಿತು ಎಂದೂ ಬಾರದ ತಾಯ ನೆನವರಿಕೆಗಳೆಲ್ಲಾ ಮುಂದೆ ಬಂದು ಅವಳನ್ನು ಹಂಗಿಸುತಿದ್ದುವು. ಬೇನೆ ಹೆಚ್ಚಿದಂತೆಲ್ಲ—ಅಯ್ಯೊ ತವರು ಬೇಕಪ್ಪಾ ಬೇಕು ! ಅಮ್ಮಾ—ಅಮ್ಮಾ!---ಎಂದು ಗುಣುಗುಟ್ಟುತಿದ್ದಳು.

ತನ್ನ ಹೇಳಿಕೆಯಂತೆ ಗೌರಿಯು ತುಂಗಮ್ಮನಿಗೆ ತಿಂಗಳು ಕಳೆದಮೇಲೆ ಆ ತಾವು ಬಿಟ್ಟು ಕದಲಲಿಲ್ಲ. ಹಲವು ರಾತ್ರಿಗಳನ್ನು ಅವಳ ಹಾಸುಗೆಯ ಮೇಲೆ ಕಳೆದಳು. ಸುಬ್ಬಣ್ಣನು ಆ ಹೆಣ್ಣು ಮಗಳ ವಾತ್ಸಲ್ಯವನ್ನು ಕಂಡು ಬೆಚ್ಚು ಬೆರಗಾಗಿ–ಹೆರುಗೆಯ ಸಮಯ ಯಾರಿದ್ದರೇನು ? ಹೆಣ್ಣಿಗೆ ಹೆಣ್ಣೇ ಬೇಕು! ಎಂದುಕೊಂಡನು.

ಕಟ್ಟ ಕಡೆಗೆ—ಕಾರ್ತಿಂಗಳ ಬೇಸಾಯದ ಹೊರೆಯೆಲ್ಲ ಮುಗಿದು ಹಗುರವಾದ ಸಮಯ ಆ ಪುಣ್ಯತಾಯಿ ತುಂಗಮ್ಮ ಹೆಣ್ಣು ಮಗುವನ್ನು ಸುಖವಾಗಿ ಹೆತ್ತಳು !

ಹೆಜ್ಜೆ ೩ ಕಾವೇರಿಯ ಕುತ್ತ

ಕಾವೇರಿ!–ಇದು ಹೆತ್ತ ಹೆಂಗಸು ಮಾನಬಿಟ್ಟು ಕೈಮಾರಿ ಕುಲಗೆಟ್ಟ ಕಾವೇರಿ—ಕೌಡೂರಿನಲ್ಲಿ ಒಂದು ಕ್ಷಣವೂ ನಿಲ್ಲಲು ಬಯಸಲಿಲ್ಲ. ಚಿಕ್ಕಂದಿನಿಂದಲೂ ತಾನು ಸೇದಿ ಕುಡಿದು ಕಂಡ ಅಲ್ಲಿಯ ಗಾಳಿ ನೀರು ಬೆಳಕು ಇವುಗಳೆಲ್ಲಾ ಇಂದವಳಿಗೆ ಗಂಟಲು ಹಿಡಿಯುವ ಗಾಳದಂತೆ ಕಂಡುಬರತೊಡಗಿದುವು. ಅಲ್ಲಿಯ ಮಣ್ಣಿನೊಡನೆ ಇವಳ ಆತ್ಮದ ಬೆವರಬಿಂದು ಕೂಡಿ ಹೋಗಿ ಆತ್ಮೀಯವಾಗಿ ಈ ತನಕ ತೋರುತಿದ್ದ ಅಲ್ಲಿಯ ಎಲ್ಲಾ ಬಯಲು ಬೆಟ್ಟುಗಳು, ಆ ಮಾರ್ಗವನ್ನೇ ತನ್ನದಾಗಿ ಬಳಸಿಕೊಂಡು ಬಂದ ಅಲ್ಲಿಯ ಕಟ್ಟಹುಣಿಗಳು—ಇವುಗಳೆಲ್ಲಾ ಈಗ ಇವಳ ಕಡೆ ಸಾಕೂತದೃಷ್ಟಿಕ್ಷೇಪವನ್ನು ಮಾಡಿ ಅವಹೇಳನ ಮಾಡುತ್ತಿದ್ದಂತೆ ಕಂಡಿತು. ಸಮಾಜದ ಹೆಗಲ ಮೇಲೆ ತಲೆಹೊರೆಯಾಗಿ ಬಾಳಬಯಸುವುದು ಧೂರ್ತತನ. ಸಮಾಜವೇ ತನ್ನ ಹೆಗಲ ಮೇಲೆ ಇಂತಹ ಹಲವು ಹನ್ನೆರಡು ಘಟನೆಗಳ ಘಟಶ್ರಾದ್ಧಗಳನ್ನು ಹೇರಿಸಿಕೊಂಡು ಆನುಷಂಗಿಕವಾಗಿ ನಿರಾಕ್ಷೇಪವಾಗಿ ಇರಬಯಸುವುದಾದರೆ ಅದು ಅದರ ವಿಶಾಲಧರ್ಮವಾಯಿತು. ಸಮಾಜದ ಕೊಳೆಯಲ್ಲಿ ಎಷ್ಟು ಕ್ರಿಮಿಕೀಟಗಳು ಸೇದೆತೆಗೆದು ಸ್ವಸ್ಥವಾಗಿರುವುದಿಲ್ಲ? ಆದರೆ ಆದೇ ಸಮಾಜದ ಕುಡಿವ ನೀರಿನ ಕೊಳದೆಡೆಗೆ ಒಂದು ಜೀವವು ಅಸ್ಪೃಶ್ಯವೆಂಬ ಮನೋಭಾವದ ಭೀತಿಯಿಂದ ಮುಟ್ಟಬಯಸಿದರೆ ಆಗ ಆ ಅಖಂಡ ಸಮಾಜವೇ ಕೆರಳಿ ಕೂಗಿಕೊಳ್ಳಲಿದೆ. ಆದುದರಿಂದ ಅಂತಹ ಸಮಾಜ ಅದರ ಪಾಡಿಗೇ ಒತ್ತಟ್ಟಗಿರಲಿ. ಅವರ ಗೊಡವೆಯೇ ಇರದೆ ಬಾಳು

ಬಮುಕಬಲ್ಲುದಾದರೆ ಸರಿಹೋಯಿತು. ಆ ಕಡೆಯಿಂದ ದೂರ ಸಿಡಿದು ಹೋಗಿ ತನ್ನ ಒಳಿತು ಕೆಟ್ಟುದರ ಸರಕಿನಂಗಡಿಯನ್ನು ಎಲ್ಲೋ ಏನೋ ಹರಡಿ ಕುಳಿತು ತನ್ನ ಪಾಡಿಗೆ ತಾನಿರಬಹುದೆಂಬ ನಿರ್ಧಾರದಿಂದ ಕಾವೇರಿ–ಆ ಕುಲಗೆಟ್ಟ ಕಾವೇರಿ—ತನ್ನ ಹೆರುಗೆಯ ಮುಂಚಿತವಾಗಿಯೇ ಪಾಪದ ಹೊರೆಯನ್ನು ಹೊತ್ತು ಅದನ್ನು ಆ ತನ್ನ ಆತ್ಮೀಯವಾದ ನೆಲದಲ್ಲಿ ತೋರಗೊಡದಂತೆ ಜಾರಿಬಿಡಬೇಕೆಂದೆಣಿಸಿದ್ದಳು. ಆದರೆ ಅಷ್ಟು ಬೇಗನೆ ತನ್ನ ಭವಿಷ್ಯವನ್ನು ಮನುಷ್ಯನು ನಿರ್ಮಿಸಿಕೊಳ್ಳಲು ಎಲ್ಲಿಯೂ ಬರುವಂತಿಲ್ಲ. ಹೀಗಾಗಿ ಜೈಲೂರಿನ ಬೀಡದಂಗಡಿಯ ವಿಚಾರ ಕೊಂಚ ದೂರ ಸರಿಯಿತು—ಎನುವಾಗ ಅವಳ ಹೆರುಗೆಯ ದಿನವೂ ಹತ್ತಿರ ಓಡುತ್ತಾ ಓಡುತ್ತಾ ಬಂದೇ ಬಂದಿತು. ತನ್ನ ಬಾಳಿಗಲ್ಲವಾದರೂ ಆ ಹುಟ್ಟುವ ಮಗುವಿನ ಹಿತದೃಷ್ಟಿಯಿಂದ ಅದಕ್ಕೊಂದು ಆಸರಬೇಕು. ಅದರ ತಲೆಯ ಮೇಲ್ಗಡೆಯೊಂದು ಹುಲ್ಲಿನ ಮಾಡಾದರೂ ಬೇಕು—ಎಂದು ಭಾವಿಸಿ ಆಕೆ ಬಾಣಂತಿತನವನ್ನು ತನ್ನ ಮನೆಯಲ್ಲೇ ತೀರಿಸಿದಳು. ಆ ಬಾಣಂತಿತನ ಮುಗಿದವೇಳೆ ಅವಳ ವೈಮನಸು ಹೇಸಿಹೋಯಿತು. ಈ ತನಕ ತಾನು ಎಷ್ಟು ನೆರೆಕರೆಯವರ ಹೆರುಗೆ ಬಾಣಂತಿತನಗಳಲ್ಲಿ ಕೈಹಾಕಿ ಅವರ ಸುಖದುಃಖಗಳಲ್ಲಿ ಸಮಯೋಚಿತವಾಗಿ ನೆರವಾಗಿಲ್ಲ? ಅಂತೆಯೇ ಈ ಮೊದಲು ತನ್ನ ಹೆರುಗೆಯ ಕಾಲದಲ್ಲೂ ಎಷ್ಟು ಮಂದಿ ತನ್ನ ಬಳಗದವರಂತೆಯೇ ಕೂಡಿ ಬಂದು ದಿನ ದಿನ ತನ್ನ ಮನೆಯ ಆಗುಹೋಗುಗಳನ್ನು ವಿವೇಕವಾಗಿ ವಿಚಾರಿಸಿಕೊಂಡು ಹೋಗಿಲ್ಲ? ಆದರೆ ಈಗಲೀಗ ತಾನಿಟ್ಟ ಹೆಜ್ಜೆ ತುಸು ಹಗುರವಾಯಿತೆಂದಾಗ ಯಾರೊಬ್ಬರೂ ಈ ಕಡೆ ಮುಖ ಹಾಕಿ ಹಣಕಲೂ ಬರಲಿಲ್ಲ. ಹಾಗಾದರೆ ಆ ಹಿಂದಿನ ಒಡನಾಟದ ಸಾಮರಸ್ಯ ಒಂದೇ ಈ ಸಮಾಜನೀತಿಯ ಹೊಡೆತದಿಂದಾಗಿ ಕಳಚಿ ಬಿದ್ದು ಹೋಯಿತೆ? ತನ್ನಂತೆಯೇ ಏಕೆ?—ಇದಕ್ಕೂ ಮಿಗಿಲಾಗಿ ಎಷ್ಟೋ ಮಾನವತಿಯರು ಹದಗೆಟ್ಟು ನಡೆದು ಆ ಅಪರಾಧವನ್ನು ಸೆರಗಿನೆಡೆ ಮುಚ್ಚಿಟ್ಟು ಸಂಭಾವಿತರಾಗಿಯೇ ಇಂದಿಗೂ ಸಮಾಜದ ಮುಂದೆ ಕಣ್ಣಿಗೆ ಮಣ್ಣೆರಚಿ ಮಾಯಾಮೃಗದಂತೆ ಸುಳಿಯುತ್ತಿಲ್ಲವೆ? ಅಂತಹ ಮಹಾ ಪತಿವ್ರತೆಯರ ತಪ್ಪಿಗಿಂತಲೂ ತನ್ನ ತಪ್ಪು ಬಹಳ ಹೆಚ್ಚಿನದಾಯಿತೆ? ಅಥವಾ ಅವರಂತೆ

ಅದನ್ನು ಮುಚ್ಚಿಟ್ಟು ಸುಳಿದಾಡಲು ತನ್ನ ಆತ್ಮದ ಮೊದಲ ಸುಸಂಸ್ಕಾರ ಹೇಸುತ್ತಿರುವುದೆ? ಎಂಬ ಈ ಎಲ್ಲ ಭಾವನೆಗಳಿಂದಾಗಿ ಅವಳ ಆ ತಿಂಗಳ ಬಾಣಂತಿತನ ಒಂದು ಯುಗವಾಗಿ ಕಳೆಯಿತು! ಆ ಸಮಯದಲ್ಲಿ ಅವಳನ್ನು ಕಾಣಲು ಊರಿನ ಮಂದಿ ಬಿಟ್ಟು ಅವಳ ಸ್ವಂತ ಹೊಟ್ಟೆಯ ಮಗಳಂದಿರೇ ಹತ್ತಿರ ಬರಲಿಲ್ಲ. ಸಹಜ. ಅವರನ್ನೆಲ್ಲಾ ಅವರವರ ಸಮಾಜಬಂಧವು ಆ ಕಡೆ ಬಲವಾಗಿ ಬಿಗಿದಿಟ್ಟಿರುವುದು. ಅದನ್ನು ಕಡಿದು ಬರಬೇಕೆಂದರೆ ಹೇಗೆ ಸಾಧ್ಯ?

ತಿಂಗಳು ಕಳೆದೊಡನೆಯೇ ಅವಳೇ ಐತಣ್ಣನೊಡನೆ ತ್ವರೆಗೊಳಿಸಿದಳು—ಆ ಬೈಲೂರಿನ ಅಂಗಡಿ ಮಾತಾಡಿಯಾಯಿತೆ ?

ಏನು ? ಆ ಕಡೆ ಹೋಗುವುದೆಂತಲೇ ನೀನು ನಿಶ್ಚಯ ಮಾಡಿದ್ದೀಯ ? ಹಾಗೇನು ಓಡಿ ಹೋಗಲು ನೀನು ಯಾರ ಮನೇಗೂ ಕನ್ನ ಹಾಕಿಲ್ಲ !—

ಸರಿ. ಆ ಮಾತು ಹೋಗಲಿ. ನನ್ನ ಮನೆಗೇ ನಾನು ಕನ್ನ ಹಾಕಿಕೊಂಡಿದ್ದೇನೆ. ಅದಕ್ಕಾಗಿ ನಾನು ಇಲ್ಲಿಂದ ಓಡಿಹೋಗುತ್ತೇನೆ. ನಾನಂತೂ ಇಲ್ಲಿ ನಿಲ್ಲುವುದಿಲ್ಲ !

ನೀನೇನು ಇಲ್ಲಿ ನಿಂತರೆ ನಿನ್ನ ಐತಣ್ಣ ಬಿಟ್ಟು ಹಾಕುತ್ತಾನೆ ಎಂತ ನೀನು ಹೆದರುವುದು ಬೇಡ!

ಇನ್ನು ಹೆದರುವ ಅಂಶವೇನಿದೆ? ಹಾಗೆ ಕೈಬಿಡಬಾರದೆಂದಿದ್ದರೆ ಎಲ್ಲಿಯೂ ಬಿಡಲಾರ. ಅಥವಾ ಯಾರು ಕೈಬಿಟ್ಟರೂ ದೇವರು ಕೈಬಿಡಲಾರ!

ಹಾಗಲ್ಲ ಕಾವೇರಿ! ನೀನು ನನ್ನ ಮೇಲೆ ಕೋಪಮಾಡಿಕೊಂಡು ಹೊರಟುಹೋಗಬಾರದು. ಹೀಗೆಲ್ಲ ದೊಡ್ಡ ದೊಡ್ಡ ಮಾತಾಡಲಿಕ್ಕೆ ನೀನೇನೂ ಇನ್ನೂ ಅಷ್ಟು ಮುದುಕಿಯಾಗಿ ಹೋಗಿಲ್ಲ. ಇನ್ನೂ ಹತ್ತು ಕಾಲ ಬಾಳಬೇಕಲ್ಲ?

ಇಲ್ಲ ಐತಣ್ಣ. ನನಗೇನು ಕೋಪ? ಕೋಪಮಾಡಿಕೊಳ್ಳುವುದಾದರೆ ಅಂದೇ ಮಾಡಿದ್ದರೆ ಅದೊಂದು ಕ್ರಮವಾಗುತಿತ್ತು. ಈಗ ಕೋಪ

ಗೀಪ ಮಾಡಿ ನಾನು ಹೇಗಸು ಮಾಡುವುದೇನು? ಅಂತೂ ಆ ಅಂಗಡಿ ಖಂಡಿತಾ ನನಗೆ ಬೇಕು.

ಆಗಲಿ. ಆದರೆ ಅದನ್ನು ಕೇಳಲಿಕ್ಕೆ ಹೋದಾಗ ಕಮ್ತಿಯರು ಸ್ವಲ್ಪ ತೋರವಾಗಿ— —

ಎಷ್ಟೇ ತೋರವಾಗಲಿ. ಸ್ವಲ್ಪ ಹೆಚ್ಚುಕಡಿಮೆ ಮಾಡಿ ನನಗೆ ಸಿಕ್ಕಲೇ ಬೇಕು.

ಐತಣ್ಣ ಆಯಿತೆಂದು ಹೊರಟು ಹೋದವ ಮತ್ತೆ ಮರುದಿನ ಬಂದು ಹೇಳಿದ—ಎಲ್ಲ ಸರಿಯಾಯಿತು. ವರ್ಷಕ್ಕೆ ಮೂವತ್ತು ರುಪಾಯಿಗೆ ಎಲ್ಲ ಒಪ್ಪಿಸಿ ಬಂದಿದ್ದೇನೆ. ಅದಕ್ಕಿಂತ ಕಡಿಮೆಗೆ ಆ ಕೊಂಕಣ ಬಿಲ್ಕುಲ್ ಒಪ್ಪಲಿಲ್ಲ. ಬಾಡಿಗೆ ಚೀಟು ಬರೆದು ಕೊಡುತ್ತೇನೆ.

ಉಹೂಂ. ಬಾಡಿಗೆ ಚೀಟು ನನ್ನ ಹೆಸರಲ್ಲಿ!

ಆದಕ್ಕೆ ಅವರು ಒಪ್ಪಬೇಕಲ್ಲ?

ನಾನು ಒಪ್ಪಿಸುತ್ತೇನೆ. ಅದಕ್ಕೆ ನೀನು ಸಾಕ್ಷಿ ಹಾಕಿದರೆ ಸರಿ.

ಹೋ ಇದೇನು? ಬಹಳ ದೂರ ದೂರ ಹೋಗುವಂತಿದೆ!

ಹಾಗಲ್ಲ ಐತಣ್ಣ. ನಾನು ಈ ಮೊದಲೂ ನನ್ನ ಕಾಲಮೇಲೆಯೇ ನಿಂತು ಬಾಳಿದವಳು. ಇನ್ನೂ ಹಾಗೇನೇ ನಿಲ್ಲಲು ಯತ್ನಿಸುತ್ತೇನೆ. ಹಾಗೆ ಆ ಕಡೆ ಈ ಕಡೆ ವಾಲುವಾಗ ನೀನು ಬಂದು ಸ್ವಲ್ಪ ಸ್ವಲ್ಪ ಆಧರಿಸಿ ಕೊಂಡರೆ ಸಾಕು. ಇದರಿಂದ ಹೆಚ್ಚು ನಿನ್ನ ಮೇಲೆ ನನ್ನ ಭಾರ ಹೇರು ತ್ತೇನೆ ಎಂತ ನೀನು ಹೆದರುವುದು ಬೇಡ.

ಛೆ! ಹಾಗೆ ಎಣಿಸಲು ನಾನೇನು ಹುಚ್ಚನೆ? ಹಾँ ನೋಡು ಕಾವೇರಿ ಈ ಊರಿನಲ್ಲಿ ನಾನು ಎಷ್ಟೋ ಹೆಣ್ಣುಗಳನ್ನು ಹೊಡೆದುಹಾಕಿರ ಬಹುದು. ಅವರನ್ನೆಲ್ಲಾ ನಾನು ಅಂದಿಗಂದಿಗೆ ಆಚೆ ಆಚೆ ತಳ್ಳಿಬಿಟ್ಟಿದ್ದೇನೆ. ಅದರ ಗೊಡವೆಯೇ ನನಗಿಲ್ಲ. ಕೆಲವು ಪುಡಿ ಕಾಸು ಕೈ ಜಾರಿಹೋಗಿರ ಬಹುದು ಅಷ್ಟೆ! ಆದರೆ ನಿನ್ನ ವಿಚಾರದಲ್ಲಿ ನಾನು ಹಾಗೆ ಮಾಡಲು ತಯಾರಿಲ್ಲ. ಹಾ ಅದೇನು ಗೊತ್ತೆ ?

ಕಾವೇರಿ ಮಾತನಾಡಲಿಲ್ಲ.

ಅದೇನೆಂದರೆ ಕೇಳು. ನನಗೂ ವಯಸ್ಸಾಯಿತು. ಆ ಮೊದಲಿನ ಹಾರುವ ಬುದ್ಧಿ ಈಗ ಎಲ್ಲಾ ಕಡಿಮೆಯಾಗಿದೆ. ನಿನ್ನಂಥ ತಿಳಿದ ಹೆಂಗಸನ್ನು ಹಾಳುಮಾಡಿದ ಮೇಲೆ ನನ್ನ ಜವಾಬ್ದಾರಿ ನನಗೇ ತಿಳಿದು ಬಂದಿದೆ. ನನಗೂ ಈ ಲೋಕದ ಒಳ್ಳೇದು ಕೆಟ್ಟದರ ಹೆದರಿಕೆ ಏನೂಯಿಲ್ಲವೆಂತ ಭಾವಿಸಿದ್ದೀಯ ? ಹಾಗೆ ತಿಳಿಯಬೇಡ. ಈ ವಿಷಯದಲ್ಲಿ ಇದೇ ನನ್ನ ಕೊನೆಯದು !

ಯಾರೊಡನೆಯೂ ಹೇಳದೆ ಯಾರೊಡನೆಯು ಕೇಳದೆ ಅದೇ ರಾತ್ರಿ ತನ್ನ ಎರಡು ಹಿರಿಯ ಗಂಡು ಮಕ್ಕಳು—ಬಗಲೊಳಗೆ ಚಿಕ್ಕ ಕೂಸು ಇವನ್ನು ಆತುಕೊಂಡು ಕಾವೇರಿ ಒಮ್ಮೆ ತನ್ನ ಆ ಮನೆಯ ಬಾಗಿಲ ಕಡೆ —ಅಯ್ಯೋ ! ಈ ಮಣ್ಣಿನ ಋಣ ತೀರಿತಲ್ಲ—ಎಂದು ಹಣೆ ಬಡಿದು ಕೊಂಡು ಕೊಂಚ ದೂಳನ್ನು ಹಣೆಗೆ ಸವರಿಕೊಂಡು ಕಣ್ಣೀರು ಮಿಡುಕಿ ಹೊರನಡೆದಳು !—ತನ್ನ ಭವಿಷ್ಯದ ಮಾರ್ಗವಾದ ಆ ಬೈಲೂರ ಕಡೆಗೆ !

ಮರುದಿನ ಸಮಾಜದ ದೃಷ್ಟಿಯಿಂದ ಒಂದು ಮಟ್ಟ ಕೆಳಗಿಳಿದು ಆ ಮನೆ ರಣ ರಣ ಗುಟ್ಟುತ್ತಿದ್ದಿತು !

ಬೈಲೂರು ಪಾಂಡು ಕಮ್ತಿಯರು ಬಹಳ ಒಳ್ಳೆಯ ಮನುಷ್ಯ. ದೊಡ್ಡ ವಹಿವಾಟಿನ ಧಾರಾಳ ಮನಸ್ಸಿನ ಜನ. ಮನೆಯಲ್ಲಿ ದೊಡ್ಡ ಸಂಸಾರ—ಹಟ್ಟಿಯಲ್ಲಿ ದೊಡ್ಡ ಜಾನುವಾರುಗಳ ಸಂತೆ—ಕೆಲಬಲದಲ್ಲಿ ಕೆಲಸಗಾರರ ತಂಡ ಇವೆಲ್ಲಾ ಅವರ ಮೈಗೇ ರಕ್ತದಂತೆ ಕೂಡಿಹೋಗಿ ಒಂದು ತರದ ಸಿರೀಹಬುದ್ಧಿಯ ದೊಡ್ಡತನವೇ ಅವರ ಪ್ರಕೃತಿಯಾಗಿ ಹೋಗಿದ್ದಿತು. ಮನೆಯ ಹೆಬ್ಬಾಗಿಲಲ್ಲೇ ಜೀನಸಿನ ಅಂಗಡಿ—ಇದಿರುಗಡೆ ಬಟ್ಟೆಯ ಮಳಿಗೆ—ಇವುಗಳಿಂದಾಗಿ ಅವರ ದುಡ್ಡಿನ ಅಂತಸ್ತು ಮಾತ್ರವಲ್ಲ ಖ್ಯಾತಿಯೂ ಹೆಚ್ಚಿ ಹರಡಿದ್ದಿತು. ಅವರ ಪ್ರಾಮಾಣಿಕತನ ಮನೆಮಾತಾಗಿ ಮನೆ ಬಿಡುವ ವೇಳೆಗೇನೇ ಗಿರಾಕಿಗಳು ನಿರ್ಧಾರವಾಗಿ ಅವರಲ್ಲಿಗೇ ಹೊರಡುತಿದ್ದರು. ಎಂದ ಮೇಲೆ ಆ ಪಕ್ಕ ಈ ಪಕ್ಕದ ಹಲಕೆಲವು ಹೊಸ

ಅಂಗಡಿಯ ಮಾಲಿಕರು ಕಡಿಮೆದರದ ಮಾಲುಗಳನ್ನು ಕೊರಳಿಗೆ ಕಟ್ಟಿದರೂ ಜನ ಆ ಕಡೆ ಮುಖ ತಿರುಗಿಸಿ ನೋಡುತ್ತಿರಲಿಲ್ಲ. ಹೀಗಾಗಿ ಕಮ್ತಿಯರು ಎಲ್ಲರನ್ನು ಕಾಪಾಡುವ ತಂದೆ! ಅವರ ಮನೆ ಮಂದಿ ಎಲ್ಲರ ಮಂದಿ! ಮಕ್ಕಳು ಎಲ್ಲರ ಪ್ರೀತಿಯ ಕೈಗೂಸುಗಳು!

ಪಾಂಡು ಕಮ್ತಿಯರ ಮನೆಗೆ ಇಪ್ಪತ್ತು ಮಾರುಗಳ ದೂರದಲ್ಲೇ ಹುಲ್ಲು ಚಾವಣಿಯ ಚಿಕ್ಕ ಗುಡಿಸಲು. ಅದರ ಮುಖ ರಸ್ತೆಯ ಕಡೆ. ರಸ್ತೆಗೂ ಅದಕ್ಕೂ ಇರುವ ಅಭ್ಯಂತರ ಹತ್ತೇ ಮಾರು. ಅದರ ಮುಂದುಗಡೆಯೇ ಊರ ಸಂತೆ ಕೂಡುವ ಒಂದು ದಿಣ್ಣೆಯಿದೆ. ಸಂತೆಗೆ ಬರುವ ಮಂದಿ ಅಲ್ಲೇ ಕ್ಷಣಕಾಲ ಕುಳಿತಿರಬಹುದು. ಆ ಮನೆಯನ್ನೇ ಕಾವೇರಿ ಗೇಣಿಗೆ ಮಾಡಿಕೊಂಡು ತಳವೂರಿದಳು. ಕಮ್ತಿಯರ ಮನೆಮಂದಿ—ಇನ್ನು ಯಾವ ಬಿಕಾರಿ ಅದಕ್ಕೆ ಒಕ್ಕಲು ಬರಲಿರುವಳೋ—ಎಂದು ಹೆದರಿದ್ದವರು ಅವಳ ಮುಖನೋಡಿ ಮೆಚ್ಚಿ ಅವಳ ವಿನಯಕ್ಕೆ ಮಾರುಹೋದರು. ತನ್ನ ಹಿರಿಯ ಮಗನನ್ನು ಕೆಲವೇ ದಿನಗಳಲ್ಲಿ ಆಕೆ ಆ ಪ್ರಸ್ತಾವ ಈ ಪ್ರಸ್ತಾವ ಎತ್ತಿ ಧನಿಗಳ ಅಂಗಡಿಯಲ್ಲೇ ಕೆಲಸಕ್ಕೆ ಕೂಡಿಸಲು ಯತ್ನಿಸಿ ಜಯಶೀಲಳಾದಳು. ಆ ಹದಿನಾಲ್ಕು ವರ್ಷದ ಹುಡುಗ ಅವರಲ್ಲೇ ಸೇರಿ ಹೋದಂತಾಯಿತು. ಮತ್ತೆ ಕೆಲಸಮಯದಲ್ಲಿ ಇವಳ ಎಂಟು ವರ್ಷದ ಎರಡನೇ ಹುಡುಗ ತನ್ನ ಅಸಾಧಾರಣ ಪಶುವಿದ್ಯೆಯ ಪಾಂಡಿತ್ಯದಿಂದ ಕಮ್ತಿಯರ ಮನೆಯವರನ್ನು ಮೆಚ್ಚಿಸಿ ಅವರ ಹಟ್ಟಿಯ ಗುರಿಕಾರನಾಗಿ ಬಿಟ್ಟ! ಅವನು ಅವರ ಎಮ್ಮೆಯ ಮುಂಗಡೆ ಒಂದು ಹಿಡಿ ಹುಲ್ಲು ಹಿಡಿದು ನಿಂತನೆಂದರೆ ಆ ಎಮ್ಮೆ ಈ ತನಕ ಕಾಲೆತ್ತಿ ಕೆಡಹುವುದರಲ್ಲಿ ಖ್ಯಾತಿಗೊಂಡ ಆ ಹರಾಮಿ ಎಮ್ಮೆ ಅವನ ಮುಖನೋಡುತ್ತಲೇ ನಿಂತಿರುತ್ತಿದ್ದಿತು. ಎಂದ ಮೇಲೆ ಕಾವೇರಿಯ ಬಾಡಿಗೆ ಮಾಮೂಲು ಪ್ರಕಾರ ವಜಾ ಆಗಿ ಅವಳಿಗೇ ಕೊಂಚ ಹಣ ಕೈಸೇರುವ ಸಂದರ್ಭ ಬಂದಂತಾಯಿತು. ಏನೋ ಹಾಳು ಕಸುಬಿನವಳಂತೆ-ಎಂದು ಮೂಗು ಮುರಿದಿದ್ದ ಆ ಮನೆ ಹೆಂಗಸರು—ಛೆ! ಕಾವೇರಿಯಿದ್ದರೆ ನಾಲ್ಕು ಆಳಿನ ಧೈರ್ಯ—ಭಲೇ ಜಾಣೆ!—ಎಂದು ಕೂತದ್ದಕ್ಕೂ ಎದ್ದದ್ದಕ್ಕೂ ಅವಳ ಅಭಿಪ್ರಾಯ ಕೇಳುವ ಪರಿಸ್ಥಿತಿಗೆ ಬಂದಂತಾಯಿತು! ಆದರೆ ಕಾವೇರಿ ಬಹಳ ಜಾಣೆ ಏನೋ ಸಹಜ. ಆದುದರಿಂದ ಕುದುರೆಯ

ಹಿಂದಿರಬೇಡ--ಅರಮನೆಯ ಮುಂದಿರಬೇಡ ಎಂಬ ಗಾದೆಯನ್ನು ಚೆನ್ನಾಗಿ ತಿಳಿದು ಎಂದಿಗೂ ಅನಾವಶ್ಯಕವಾಗಿ ಅವರ ಮನೆ ಮುಂದೆ ನಿಂತು ನಾಲಿಗೆ ಚಾಚುತಿರಲಿಲ್ಲ. ಕರೆದಾಗ ಒದಗುವುದು ಕರೆಯದಾಗ ದೂರವಿರುವುದು--ಇಂತಹ ಜಾಗರೂಕತೆಯ ಜಾಣತನದಿಂದಾಗಿ ಅವಳು ಯಾವತ್ತೂ ಪರಿಮಳವಾಗಿಯೇ ಉಳಿದಳು!

ಇನ್ನು ಅವಳ ಚಿಕ್ಕ ಅಂಗಡಿ! ಮೂಗಿನ ಮೇಲಣ ನತ್ತಿನಂತಿರುವ ಸ್ಥಳ. ಅದರಲ್ಲಿ ಚೊಕ್ಕವಾಗಿ ಓರಣವಾಗಿ ಬೀಡ–ಬೀಡಿ ಬರುತ್ತಾ ಬರುತ್ತಾ ಸಿಗರೇಟು ಸಹ ಅಲಂಕಾರವಾಗಿ ಕುಳಿತಿತು. ಕ್ರಮೇಣ ಸಂತೆಯವರ ಅನುಕೂಲಕ್ಕಾಗಿ ಬೇಯಿಸಿದ ಗೆಣಸು—ಹುರಿದ ಹಪ್ಪಳ–ಚಕ್ಕುಲಿ–ಎಳ್ಳಿನ ಉಂಡೆಗಳು ಅಲ್ಲಿ ಕಂಡುಬಂದುವು.

ತಾಯಂದಿರ ಕಂಕುಳಡಿನೇತಬಿದ್ದು ಸೋತುಹೋದ ಮಕ್ಕಳು ಅವಳ ಅಂಗಡಿ ಬಂದೊಡನೆಯೇ ಕೈತೋರಿಸಿ ಅವುಗಳಿಗಾಗಿ ಕಾಡುತಿದ್ದುವು. ಎಂದಾಗ ತಾಯಂದಿರ ಸೆರಗಿನ ತುದಿಯಿಂದ ಕೊಂಚ ಹಣವಾದರೂ ಜಾರಿ ಕಾವೇರಿಯ ಕೈಸೇರಿತೆಂದೇ ಅಭಿಪ್ರಾಯ!

ಈ ಒಂದು ದೃಷ್ಟಿಯಿಂದ ಕಾವೇರಿಯ ಭವಿಷ್ಯದ ತಳಹದಿಯು ಭವ್ಯವಾಯಿತೆಂದೇ ಹೇಳಬೇಕು. ಹಾಗೆಯೇ ಕೈಯಲ್ಲಿ ನಾಲ್ಕುಕಾಸು ಕೂಡಲೂ ತೊಂದರೆ ಬರಲಿಲ್ಲ. ಎಲ್ಲರಕೂಡೆ ಹೊಂದಿಸಿಕೊಂಡು ಹೋಗುವ ಅವಳ ಚಾಕಚಕ್ಯದಿಂದಾಗಿ ಆ ಊರವರಿಗೆಲ್ಲ ಅವಳ ಒಂದಲ್ಲ ಒಂದು ವಿಧದ ಸೇವೆ ಅತ್ಯಗತ್ಯವೇ ಆಯಿತು!

ಕೆಲವೊಮ್ಮೆ ಐತಣ್ಣ ಇದನ್ನು ಅಭಿಮಾನದಿಂದ ಕಾಣುತಿದ್ದನು. ಕೆಲವೊಮ್ಮೆ ಅಸೂಯೆಯಿಂದಲೂ ಕಾಣುತಿದ್ದನು. ಅಂತೆಯೇ ಹಲವೊಮ್ಮೆ ಅವನ ನಂಜಿನ ಮಾತು—ಏನು ಕಾವೇರಿ! ಈಗ ಐತಣ್ಣನ ದುಡ್ಡಿನ ಹಂಗಿಲ್ಲವಲ್ಲ? ನೀನೀಗ ಪೇಟೆಯ ಪುಣ್ಯಾತ್ಮಳಾಗಿದ್ದಿ. ಹಾಂ? ಇನ್ನು ಐತಣ್ಣನ ಗೊಡವೆಯೂ ಅಷ್ಟಷ್ಟೆ! ಎನುತಿದ್ದನು. ಅಂತೆಯೇ ಅವನ ಬರುವಿಕೆಯೂ ಅಷ್ಟಷ್ಟರಲ್ಲೇಯಿದ್ದಿತು—ಎಂದರೆ ಕಾವೇರಿಗೆ ಬೇಡವಾದ ಸಂದರ್ಭವೇ ಹೆಚ್ಚೆಂದರೂ ಆ ಮಾತು ಸತ್ಯ!

ಕೈಯಲ್ಲಿ ಕಾಸಾಯಿತೆಂದರೆ ಸಮಾಜದ ವಕ್ರದೃಷ್ಟಿಯು ಋಜುವಾಗುವುದು. ಅದರ ಬಿಗುವಾನದ ಮಂಗಮುಷ್ಟಿ ಸ್ವಯಮೇವ ಸಡಿಲಾಗುವುದು. ಏನೋ ಹಾರಿ ಹೋದ ಹೊಲಸು ಪದಾರ್ಥವೆಂದು ಕಡೆಗಣಿಸುತಿದ್ದವರ ನಾಲಗೆ ನೀರೂರಿ ಸ್ವಲ್ಪ ನಯವಾಗಿ, ಊರಕಡೆಯುವರು ಅತ್ತ ಬಂದರೆ ಅವಳ ಜಗಲಿಗೆ ಬಂದು ಜಗ್ಗಹಾಕಿ—ಒಂದು ಬೀಡ ಜಗಿದು ಹರಟೆ ಹೊಡೆಯುವ ದಿನ ಬಹಳ ದೂರವಾಗಿ ಉಳಿಯಲಿಲ್ಲ. ಅಂತೆಯೇ ಈಗ ಹೆತ್ತು ಮನೆ ಬಿಟ್ಟ ಆರು ತಿಂಗಳಲ್ಲೇ ಅವಳ ಹಿರಿಯ ಅಳಿಯ ಚಂದಯ್ಯ ಒಂದು ದಿನ ಸಂತೆಗೆ ಬಂದವ ಅವಳ ಒತ್ತಾಯದ ಊಟದ ರುಚಿ ನೋಡಿ ಬೆಚ್ಚುಬೆರಗಾಗಿ ಮರುದಿನವೇ ತನ್ನ ಹೆಂಡತಿಯನ್ನು ಇನ್ನು ಕಳುಹಿಸದಿರುವುದರಲ್ಲಿ ಅರ್ಥವಿಲ್ಲವೆಂದು ನಿರ್ಣಯಿಸಿಬಿಟ್ಟ ! ಹಿರಿಯ ಅಕ್ಕ ಬಂದ ಮೇಲೆ ಕಿರಿಯಾಕೆ ಏಕೆ ಬಾರದಿರಬೇಕು ? ಲಾಭದ ದೃಷ್ಟಿಯಿಂದಲಾದರೂ ಬರುವುದು ವಿಹಿತವೆಂದೇ ಆಕೆಯ ಗಂಡನಮನೆಯವರಿಗೆ ಸುಜ್ಞಾನ ಸೂರ್ಯೋದಯವಾಯಿತು ! ಎಲ್ಲ ಬಿಟ್ಟು ಒಮ್ಮೆ ಕೌಡೂರಿನ ಖ್ಯಾತನಾಮ ಪುರೋಹಿತ ವಿಷ್ಣುಮೂರ್ತಿ ಭಟ್ಟರೂ ಒಂದು ದಿನ ಅವರು ಹೇಳುವಂತಾದರೆ ದಾರಿತಪ್ಪಿ ಅವಳಲ್ಲಿಗೆ ಬಂದು ಹೀ ಹೀ ಹಲ್ಕಿರಿದು — ಏನು ಕಾವೇರಿ ? ಚೆನ್ನಾಗಿದ್ದಿಯ ? ಎಂದು ಪರಿಷ್ಕಾರವಾಗಿ ವಿಚಾರಿಸಿಕೊಂಡರು. ಆದಿನವೇ ಕಾವೇರಿ ತನ್ನ ಧನಿಗಳಲ್ಲಿಗೆ ಅವರನ್ನು ಕರೆದುಕೊಂಡು ಹೋಗಿ ಅವರ ಎಮ್ಮೆಗೋ ದನಕ್ಕೋ ಬೂದಿ ಮಂತ್ರದ ಹಗ್ಗ ಕೊಡಿಸಿ ಉಡಿತುಂಬ ಅಕ್ಕಿ ತೆಂಗಿನ ಕಾಯಿ ಹಿಡಿತುಂಬ ಕಾಂಚನ ದೊರಕಿಸಿಕೊಟ್ಟ ಮೇಲೆ ಮತ್ತೆ ಹೇಳುವುದೇನು ? ಅವಳ ಕೀರ್ತಿ ಗಾಳಿಗೆ ತೂರಿದ ಹತ್ತಿಯಂತೆ ಊರೆಲ್ಲಾ ಹಬ್ಬಿಹೋಯಿತು! ಅವಳಿಂದ ಅಲ್ಪ ಉಪಚಾರ ಉಪಕಾರ ಹೊಂದಿದ ಎಲ್ಲರೂ ಅದನ್ನು ಸೈಸೈ ಎಂದು ಊದಿಯೂದಿ ಉಬ್ಬರಿಸಿ ಬಿಟ್ಟರು ! ಅಂತೆಯೇ ಈ ಕೆಲಕೆಲವು ಗಾದೆಗಳೂ ಪ್ರಚಾರಗೊಂಡವು—

ಆನೆ ಜಾರಿಬಿದ್ದರೂ ಆನೆ ಆನೆಯೆ !

ಮುತ್ತು ಕೆಟ್ಟರೂ ಬತ್ತಕ್ಕಿಂತ ಮೇಲು !

ಗತಿಗೆಟ್ಟರೇನು? ಗಾಂಭೀರ್ಯವೇ ಮುಖ್ಯ !

ಇತ್ಯಾದಿ ಇತ್ಯಾದಿ !

ಕಾವೇರಿಯ ಜೀವನ ಸುಗಮಕ್ಕಿಂತ ಒಂದು ತೂಕ ಸಮೃದ್ಧವಾಗಿಯೇ ಸಾಗುತಿದ್ದಿತು. ಅಂತೆಯೇ ಒಂದು ವರ್ಷವೂ ಕಳೆಯಿತು. ಈ ಒಂದು ವರ್ಷದಲ್ಲಿ ಅವಳು ಕೆಲವೊಮ್ಮೆ ಬಾಗಿಲ ಕಡೆ ಹಣಕಿದುದಿದೆ—ರಾತ್ರಿ ಹಲವೊಮ್ಮೆ ಅಂಗಳಕ್ಕಿಳಿದುದಿದೆ ! ಏಕೆ ? ಎಲ್ಲರ ಗೌರವ ದೃಷ್ಟಿ ಅವಳ ಮೇಲಿದ್ದರೇನು? ಹಿರಿಯ ಮಗಳಂದಿರು ಅಳಿಯಂದಿರು ಸಹ ಸರಾಗವಾಗಿ ಬರುತ್ತಾ ಹೋಗುತಿದ್ದರೇನು? ಆ ಕಾಲಿಟ್ಟು ಬಾಳದ ಒಂದು ಜೀವವಿದೆಯಲ್ಲ? ಒಂಬತ್ತು ತಿಂಗಳು ಹೊಟ್ಟೆಯಲ್ಲಿ ಹೊತ್ತು ಹೆತ್ತು ಸಲಹಿ ಅತ್ತಕಡೆ ಮದುವೆ ಮಾಡಿ ದಾಟಿಸಿಕೊಟ್ಟ ಒಂದು ಕಿರಿಯ ಜೀವವಿದೆಯಲ್ಲ? ಅಬ್ಬಾ ಏನು ಉಡಾಪಿ! ಊರಿಗೆ ಸರಿಹೋದರೂ ಆ ಪೋರಿಗೆ ಸಮಗಟ್ಟಾಗಲಿಲ್ಲವೋ ಏನೋ!--ಎಂದು ಕೆಲವೊಮ್ಮೆ ಸಿಟ್ಟುಗೊಳ್ಳುವಳು. ಆದರೆ ಆ ಪೋರಿ ಕಾಲಿಟ್ಟು ಬರಲಿಲ್ಲವೆಂಬ ದುಃಖದೊಡನೆ ಅವಳ ಅಹಂಕಾರವೂ ಪುಡಿಪುಡಿಯಾಗಿ ಒಂದು ತೆರದ ಉದಾಸಭಾವದ ದೈನ್ಯವೃತ್ತಿಯು ಅವಳ ಮನಸ್ಸನ್ನು ಮುಸುಕಿಕೊಂಡಿತು!

ಹೇಳಿಕಳುಹಿಸಲೆ? ಛೆ ಅದಾಗದು! ಈಗ ಬೇರೆ ಮನೆ ಬೇಸಾಯ ಮಾಡಿರುವರಂತೆ-- ಎಂದರೆ ಬಂದೇ ಬಂದಾರು ! ಅಯ್ಯೋ— ಈಗ ಬಸುರಿಯಂತೆ ! ಹೆರಲಿಕ್ಕೆ ಬಾರದಿರುವಳೆ ? ಚೊಚ್ಚಲ ಗರ್ಭಿಣಿ--ಆದರೂ ಬರಲಿಲ್ಲ ! ತಾನೇ ಏಕೆ ಆಕಡೆ ಹೋಗಿ ನೋಡಿಕೊಂಡು ಬರಬಾರದು? ಅದರಲ್ಲೇನು ಅಷ್ಟು ಅಹಂಕಾರ? ತನ್ನ ಮಗಳು ಎಂದಿಗೂ ತನ್ನವಳೆ. ಆದರೆ ಅವಳದೇ ಮನೆ ಅವಳದೇ ಬಳಗ ಅವಳದೇ ಒಂದು ವಾತಾವರಣವನ್ನು ನಿರ್ಮಿಸಿಕೊಂಡಿರುವ ಆ ಹೆಮ್ಮೆಯ ಹೆಣ್ಣಿನ ಕೂಡೆ ಹೇಗೆ ನಡೆದುಕೊಳ್ಳಬೇಕು? ಅವಳ ಪಾಲಿಗೆ ತಾನು ಹಿತವೋ ಅಹಿತವೋ ಯಾರು ಬಲ್ಲರು? ಅದಕ್ಕಾಗಿ ಅಳಿಯನನ್ನು ಎಲ್ಲಿಯಾದರೂ ಸಂತೆಯಕಡೆ ಕಾಣಬಹುದೆಂದು ಕಾದಿದ್ದಳು. ಅದೂ ಆಗಲಿಲ್ಲ! ಆ ಕಡೆ ಹೋಗುವವರನ್ನು ವಿಚಾರಿಸಿಕೊಳ್ಳಬೇಕೆಂದು ಹವಣಿಸಿದಳು. ಅದಕ್ಕೂ ಸಮಗಟ್ಟಿನ ಉತ್ತರ

ಬರಲಿಲ್ಲ. ಎಂದ ಮೇಲೆ ತನಗೆ ತಾನೇ ಹೇಸಿ ಹಗುರವಾಗಿ ಹೋದಳು ಆ ಕಾವೇರಿ!

ತುಂಗಮ್ಮ ಹೆತ್ತ ಸಮಾಚಾರ ಗತಾನುಗತಿಕವಾಗಿ ಮನೆಮುಟ್ಟಿತು. ಆ ಹೆರುಗೆಯ ದಿನ ಹೆಣ್ಣು ಮಗಳು ಬೇನೆಯಿಂದ ನೊಂದು ಅಮ್ಮ—ಅಮ್ಮ ಎಂದು ಕೂಗಿ ತನ್ನನ್ನು ಕರೆದಿರಬಹುದಲ್ಲ? ಅಯ್ಯೋ! ನಾನೆಂತಹ ಪ್ರಾಣಿ! ಮಗಳ ಉಪಕಾರಕ್ಕೆ ಒದಗದಿದ್ದ ಜೀವಿ! ನಾನಾಗಿಯೇ ಹೋಗಿದ್ದರೆ ಏನಾಗುತಿದ್ದಿತು? ಪಾಪ! ಆಕೆ ಯಾರೊಡನೆ ಹೇಳಿ ಕಳುಹಿಸಬಲ್ಲಳು? ಹೆರರ ಕೈ ಕಾದು ಬದುಕುವ ಜೀವ- ಹೆರರ ಕೈಯಿಂದಲೇ ತನ್ನ ಹೆರುಗೆ ತೀರಿಸಿಕೊಂಡಳು! ಸಾಯಹೊರಟ ಈ ಮುದಿಗೆ ಏನು ಅಹಂಕಾರ!—ಎಂದು ಗಾಯಗೊಂಡು ಗುಣವಾಗದ ನಾಯಿಯ ಹಾಗಾಯಿತು ಅವಳ ಪಾಡು! ಇತರರ ಕಣ್ಣಿಗೆ ಕಾಣಲಾರದ ರೋಗ! ಯಾರೊಡನೆಯೂ ಮನಸ್ಸು ಬಿಚ್ಚಿ ಹೇಳಲಾರದ ವ್ಯಾಧಿ! ಕರುಳು ಕರುಳನ್ನು ಅದುಮಿ ಹಿಡಿದು ಕೊರೆದು ಕತ್ತರಿಸುವ ಒಂದು ಕುತ್ತ! ಯಾರೊಡನೆಯೂ ಸೋಲನ್ನು ಒಪ್ಪದಿದ್ದ ಕಾವೇರಿ ತನ್ನ ಹೆಣ್ಣು ಮಗಳೊಡನೆ—ತುಂಗಮ್ಮನೊಡನೆ ತನ್ನ ಆತ್ಮದ ಸೋಲನ್ನು ಒಪ್ಪಿಕೊಂಡಳು! ಆ ಮಗಳನ್ನು ಸೇರಲು ಅಥವಾ ಸೇರಿಸಿಕೊಳ್ಳಲು ತನ್ನ ಆತ್ಮದ ಸ್ವರೂಪ ಚಿಕ್ಕದೆಂದು ತಾನೇ ಒಪ್ಪಿಕೊಂಡಳು. ತನ್ನ ಮನೆಗೆಲಸಗಳ ಮಧ್ಯೆ--ಐತಣ್ಣನ ಬೂಟಾಟಿಕೆಯ ಮಧ್ಯೆ—ಒಮ್ಮಿಂದೊಮ್ಮೆಗೆ ಹೌಹಾರಿ ಬಿದ್ದು ಅಯ್ಯೋ ಹೀಗಾಯಿತಲ್ಲ!—ಎಂದು ತಾನೇ ಪರಿತಪಿಸುವಳು. ಒಮ್ಮೆ ನಿರ್ಧಾರವಾಗಿ ತಾನೇ ಹೊರಟಳು. ಮತ್ತೊಮ್ಮೆ ಹಿರಿಮಗನನ್ನು ಹಣತೆತ್ತು ಹೊರಡಿಸಿದಳು. ಆದರೇನು? ಒಂದು ಕ್ಷಣದ ಮೇಲೆ ಆ ಕಾವು ಕಳೆದು ತನ್ನ ತಪ್ಪಿಗೆ ತಾನೇ ಬಾಲ ಮುದುಡುವ ನಾಯಂತೆ ಕಿರಿದಾಗಿ ಮನಸ್ಸಿನ ಮೊನೆ ಮುರಿದು ಹೋಯಿತು! ಆ ಮಗಳ ಮತ್ತು ತನ್ನ ಮಧ್ಯೆ ಒಂದು ದೊಡ್ಡ ಹೊಳೆ ಹರಿದಿದೆ. ಅದನ್ನು ಯಾರು ದಾಟಬೇಕು? ಮಗಳು ದಾಟಬೇಕೆ? ನ್ಯಾಯವಿಲ್ಲ! ತಾನು ಮೊದಲು ದಾಟಬೇಕೆ? ಆ ಆತ್ಮದ ಧೈರ್ಯವಿಲ್ಲ! ಕಾರಣ ಅದು ತನ್ನ ಅನೀತಿಯ ನೀರಿನ ಹೊಳೆ. ಅದರಲ್ಲಿ ಕಾಲಿಟ್ಟಾಗ ತನ್ನದೇ ಮೈನಿಮಿರೇಳುವುದು! ಕಳೆದ ನೆನಪಿನೊಡನೆ ನಾಚು

ಗೆಯ ತೆರೆ ತೆರೆಗಳ ತತ್ತರ ತನ್ನನ್ನೇ ಮುಳುಗಿಸಿ ಬಿಡುವುದು. ಎಂದ ಮೇಲೆ ತಾನೇನು ಮಾಡಲುಂಟು?—ಎಂದು ನಿಸ್ಸಹಾಯಳಾಗಿ—ನಿರುಪಾಯಳಾಗಿ ತನ್ನಷ್ಟಕ್ಕೆ ತಾನೇ ನವೆದು ನೀರಾಗಿ ಹೋದಳು.

ಒಂದು ದಿನ ಐತಣ್ಣ ಕೇಳಿದ—ಏನು ಕಾವೇರಿ! ಬಹಳ ಬೆಂಡಾಗಿದ್ದಿ? ಏನಾದರೂ ಹೊಸ— —

ಏನಿಲ್ಲ!

ಧನಿಗಳ ಮನೆಯಲ್ಲಿ ಮರುದಿನ ಕೇಳಿದರು—ಏನು ಕಾವೇರಿ! ಬಹಳ ಸೊರಗಿದ್ದಿ?

ಏನಿಲ್ಲ!

ಮತ್ತೆ ಒಂದು ದಿನ ಪಾಂಡುಕಮ್ಮಿಯರೇ ಕೇಳಿದರು—ಏನು ಕಾವೇರಿ! ಬಹಳ ಕ್ಷೀಣವಾಗಿ ಹೋದಿಯಲ್ಲ? ಬಹಳ ಕರಕರೆಯಿದೆಯೆ?—

ಏನಿಲ್ಲ!

ಏನಿಲ್ಲ—ಏನಿಲ್ಲ—ಏನಿಲ್ಲ!—ಎಲ್ಲರೊಡನೆಯೂ ಈ ಉತ್ತರ ಹೇಳಿ ಹೇಳಿ ಅವಳ ಹರಣ ಹೇಸಿಹೋಯಿತು—ಹಗುರವಾಗಿ ಹೋಯಿತು—ಆವಿಯಾಗಿ ಆರಿಹೋಯಿತು!

ಅಯ್ಯೋ! ತುಂಗಮ್ಮ! ನಾನು ನಿನ್ನ ಮಗಳಾಗಿ ನೀನು ನನ್ನ ತಾಯಿಯಾಗಿ ಹೋದಿಯಲ್ಲ?—ಈ ಮಾತಿನೊಡನೆ ಕಾವೇರಿ ಚಿಕ್ಕ ಮಗುವಿಗಿಂತಲೂ ಕಡೆಯಾಗಿ ಅತ್ತುಬಿಟ್ಟಳು!

ಹೆಜ್ಜೆ ೪ ಗೋವಿಂದನ ಗಾಡಿಎತ್ತು

—ಹೇನು ಬಲ್ಲುದೆ ಮುಡಿದ ಹೂವಿನಾ ಪರಿಮಳವ—ಎಂಬ ದಾಸರ ಪದದಲ್ಲಿ ಬಹಳ ಅರ್ಥವಿದೆ. ಅಂತೆಯೇ ಶೃಂಗೇರಿಯಂತಹ ಒಂದು ಮಹತ್ತರವಾದ ಸ್ಥಾನದ—ಕನ್ನಡಿಗರ ಕುಲಗೌರವವಾಗಿ ಜೋತೀರೂಪವಾದ ಸ್ಥಾನದ—ಮಹತ್ವ—ಮನ್ನಣೆಗಳೆಲ್ಲ ಸುಬ್ಬಣ್ಣನಿಗೆ ಏನೂ ಗೋಚರವಿಲ್ಲದ ವಿಷಯ. ಆದರೆ ಆಸ್ಥಾನದ ನೆನಪು ಅಂದಿಗಂದಿಗೆ ಬರುವುದಿದ್ದರೆ ಅದು ಅಯ್ಯಣ್ಣ ಸೇರೆಗಾರರ ಸಲುವಾಗಿ. ತನ್ನ ಹಿಂದಿನ ಗಟ್ಟದವಾಸದ ಕಹಿ ಅನುಭವದ ಮಧ್ಯದಲ್ಲಿ ಒಮ್ಮಿಂದೊಮ್ಮೆಗೆ ಸವಿಯಾದ ನೆನಪು ಮೂಡಲಿರುವ ಸಂದರ್ಭವಾದ ಅವರ ಸಾಹಚರ್ಯವನ್ನು ಅವನೆಂದಿಗೂ ಮರೆಯಲಾರ. ತನ್ನ ಒಡಹುಟ್ಟಿದವರಂತೆ ಕೆಲಸದಾಳುಗಳನ್ನು ಕಾಣುವ ಅವರ ರೀತಿನೀತಿಯು ಸೇರೆಗಾರರ ಸ್ಥಿತಿಗೇ ಒಂದು ಅಪವಾದವಾಗಿದ್ದಿತು. ಜಿಗಳೆಯಂತೆ ಕಂಡುಬರುವ ಸೇರೆಗಾರ—ನರಿಯಂತೆ ನಕ್ಕು ಸೋಲಿಸುವ ಸೇರೆಗಾರ—ಹುಲಿಯಂತೆ ಅದರಲ್ಲೂ ನರಭಕ್ಷಕನಂತೆ ಹಾರಿಬೀಳುವ ಸೇರೆಗಾರ ಇವರೆಲ್ಲರ ವರ್ತನೆ ಸೇರೆಗಾರರ ವಂಶಕ್ಕೇ ಒಂದು ಕಳಂಕವೆರಚಿ ಅವರ ಕೃಪಣತೆಯನ್ನು ಅಮಾನುಷವಾಗಿ ವರ್ಣಿಸಿ ಆಳು - ಒಡೆಯರ ಬಾಂಧವ್ಯವನ್ನೇ ಕುಲುಷಿತಗೊಳಿಸಿದ್ದಿತು. ಆದರೆ ಅಗತ್ಯಬಿದ್ದಾಗಲೆಲ್ಲ ತಾನಾಗಿಯೇ ಒದಗಿಬಂದು ಬೇನೆ ಬಿದ್ದಾಗಲೆಲ್ಲ ತಾನೇ ವಿಚಾರಿಸಿಕೊಂಡು ಹೊಂದಿಕೆಯಾಗಿ ನಡೆವ ಹಿತಜೀವಿಗಳಲ್ಲಿ ಅಯ್ಯಣ್ಣ ಸೇರೆಗಾರರೂ ಒಬ್ಬರು.

ಒಂದು ದಿನ ಸುಬ್ಬಣ್ಣ ಪೇಟೆಯಲ್ಲಿ ಮಲ್ಯರ ಅಂಗಡಿಯಲ್ಲಿ ತುಂಗಮ್ಮನಿಗಾಗಿ ಏನೋ ಒಂದು ನಿತ್ಯದ ಸೀರೆ ನೋಡುತಿದ್ದನು. ಆಗ ಪಕ್ಕದ ಬಸ್ಸು ನಿಲ್ದಾಣದಲ್ಲಿ ಯಾರೋ ತನ್ನನ್ನು ಹೆಸರೆತ್ತಿ ಕರೆದಂತಾಯಿತು—ಸುಬ್ಬಣ್ಣ—ಸುಬ್ಬಣ್ಣ—!

ಸುಬ್ಬಣ್ಣ ಆ ಕಡೆ ಹೊರಳಿ ನೋಡಿದನು. ಅಯ್ಯೋ! ಅಲ್ಲಿಯ ಅವಾಂತರವೆ! ಜನಸಂದಣಿ ಒಂದೇ ಸವನೆ ಗಡೀಪಾರು ಆಜ್ಞೆ ಪಡೆದಂತೆ ದೇಶಬಿಡಲು ಯತ್ನಿಸಿ ನುಗ್ಗಾಟವಾಡುವ ರೀತಿಯಲ್ಲಿ ಬಸ್ಸು ಟಿಕೇಟಿಗಾಗಿ ರಂಪಾಟವೇಳಿಸುತಿದ್ದಿತು. ಆ ಗುಂಪಿನ ಮಧ್ಯೆ ಸೇರೆಗಾರರ ಕೆಂಪು ಶಾಲಿನ ಶೀರ್ಷಿಕೆ ಸುತ್ತಿದ ಪ್ರಚಂಡ ದೇಹ ಹೋರಾಡುತಿದ್ದಿತು!

ಸುಬ್ಬಣ್ಣ ಆ ಕಡೆ ಸರಿದುಹೋಗಿ ಸೇರೆಗಾರರನ್ನು ಕಂಡು ಕೈಮುಗಿದು—ನಮಸ್ಕಾರ—ಎಂದನು.

ಏನು ಸುಬ್ಬಣ್ಣ? ಬಹಳ ಸಮಯವಾಯಿತು ನೋಡದೆ. ಹೇಗಿದ್ದೀಯಾ?—ಎಂದು ಅವನನ್ನು ಕಾಲಿನಿಂದ ಹಿಡಿದು ತಲೆಯ ತನಕಕಂಡು ನಸುನಕ್ಕರು.

ಅಹುದು. ಸುಬ್ಬಣ್ಣನನ್ನು ಕಂಡು ಸೇರೆಗಾರರಿಗೆ ಸಂತೋಷವಾಯಿತು. ಯಾರಾದರೂ ಉತ್ತಮ ಚರ್ಯೆಯಲ್ಲಿರುವುದು ಅವರಿಗೊಂದು ಸಂತೋಷ. ಸುಬ್ಬಣ್ಣನು ಬಹಳ ಸ್ತಿಮಿತದ ಮನುಷ್ಯ—ಮಿತಿತಪ್ಪುವವನಲ್ಲವೆಂದು ಅವರು ನಿರ್ಣಯವಾಗಿ ಹೇಳುತಿದ್ದರು. ಈಗ ಒಂದೆರಡು ವರ್ಷಗಳಿಂದ ಅವನನ್ನು ಕಂಡಿಲ್ಲವಾದರೂ ಅವನು ಮಿತಿತಪ್ಪದೆ ಸುಧಾರಿಸಿ ಕೊಂಡಿದ್ದಂತೆಯೇ ಕಂಡು ಬಂದುದಕ್ಕಾಗಿ ಅವರಿಗೆ ತುಂಬಾ ಸಂತೋಷ. ಹೂ ಒಳ್ಳೆಯ ಹುಡುಗ. ಚೆನ್ನಾಗಿದ್ದಾನೆ—ಎಂದು ಮನಸ್ಸಿನಲ್ಲೇ ಭಾವಿಸಿಕೊಂಡರು.

ಹಿರಿಯರಕೂಡೆ ಬಾಯಿತೆರೆದು ಮಾತನಾಡುವುದು ಸುಬ್ಬಣ್ಣನ ಅಭ್ಯಾಸವಿದ್ದಿಲ್ಲ. ಅದನ್ನರಿತೇ ಸೇರೆಗಾರರು ಪ್ರಸ್ತಾವನಾಗಿ ಹೇಳಿದರು—ನೋಡು. ಬಡಗಲಾಗಿ ಹೋಗಬೇಕೆಂದಿದ್ದೆ. ಅದಕ್ಕೆ ಬಸ್ಸು ಕಾಯುತ್ತಾಯಿದ್ದೇನೆ.

ಬಡಗಲಾಗಿ! ಸುಬ್ಬಣ್ಣನು ಆ ಕಡೆ ಹೋಗಿಲ್ಲವಾದರೂ ಮೂಡಣ ವರ ಬಾಯಿಂದ ಈ ಮಾತನ್ನು ವರ್ಷ ವರ್ಷ ಈತನಕವೂ ಕೇಳುತ್ತ ಬಂದಿರುವನು. ತಾನು ಕೈಗೂಸಾಗಿರುವಾಗ ತನ್ನ ತಾಯಿ ಹರಕೆ ಸಲ್ಲಿಸಿ ಬಂದ ವಿಚಾರ ಕೇಳಿರುವನು. ಎಲ್ಲಿಯೋ ಕುಂದಾಪುರದ ಕಾಡುಕೊಂಪೆಯಲ್ಲಿ ಹುದುಗಿರುವ ಆ ಸ್ಥಾನ? ಆದರೂ ಅದರ ಮಹತ್ವ ಈ ಮೂಲೆಯನಕವೂ ಕೈಚಾಚಿ ಭಾವುಕರನ್ನು ಆ ಕಡೆ ಸೆಳೆಯುತಿದ್ದಿತು. ಅದೇ ತಾನೆ ದೈವಿಕ ಮಾಯೆ? ಪ್ರತಿವರ್ಷವೂ ಹಿಂಡುಗಟ್ಟಲೆ ಈ ಕಡೆಯ ಜನ ಸೂಜಿಕಲ್ಲು ಸೆಳೆವ ಕಬ್ಬಿಣದ ತುಂಡಿನಂತೆ ಅತ್ತ ಹರಕೆ ಹೊತ್ತು ಪ್ರಯಾಣಗೊಳ್ಳುತಿರುವ ಗದ್ದಲವೇ ಗದ್ದಲ! ಅಂತಹ ಹಿಂಡನ್ನೆಲ್ಲ ಸಮಜಾಯಿಸಿ ಬಸ್ಸು ತುಂಬಿಸಿ ರವಾನಿಸುವ ಜವಾಬ್ದಾರಿ ಹೊತ್ತ ಅಲ್ಲಿಯ ಬಸ್ಸು ಟಿಕೇಟಿನ ಅಧಿಪತಿ—ಹೆಬ್ಬಾರರ ಇಳಿವಯಸ್ಸಿನ ಮುಖ ಮತ್ತಷ್ಟು ಹಣ್ಣು ಹಣ್ಣಾಗಿ ಹೋಗುತಿದ್ದಿತು! ಆ ಎಲ್ಲರ ಮೂರ್ಖ ಪ್ರಶ್ನೆಗಳಿಗೆ ಉತ್ತರ ಕೊಡುವ—ಕೊಡದಿದ್ದರೆ ಬೈಗಳು ತಿನ್ನುವ—ಆದರೂ ಸಹನೆಗೆಡದೆ ಒಮ್ಮೆ ಮುಖದ ಮೇಲಣ ಕನ್ನಡಕ ಮೇಜಿನ ಮೇಲಿರಿಸಿ ಸುತ್ತಲೂ ನೋಡಿ ಮತ್ತೊಮ್ಮೆ ಅದನ್ನು ಮೂಗಿನ ಮೇಲೇರಿಸಿಕೊಂಡು ಹಸನ್ಮುಖರಾಗಿ ಆ ತಂಡವನ್ನು ಇದಿರಿಸುವ ಅವರ ಸಾಹಸ ನಿಜವಾಗಿಯೂ ಸ್ತುತ್ಯವೇ ಸರಿ! ಆದುದರಿಂದಲೇ ತಾಸುಗಟ್ಟಲೆ ಕಾದು ನಿಂತ ಪ್ರಯಾಣಿಕ ಒಮ್ಮೊಮ್ಮೆ ಸೈರಣೆಗೆಟ್ಟರೂ ಅವರ ಹಿತ ಮಿತ ವಚನ ಪ್ರಣಾಲಿಯಿಂದ ಮೆಚ್ಚಿ ಮತ್ತೊಂದು ಬಸ್ಸು ಬರುವತನಕ—ಅದೂ ಹೋಯಿತೆಂದರೆ ಮತ್ತೂ ಕೊಂಚಕಾಲ—ಹೀಗೆ ತಪಸ್ಸು ಮಾಡುತ್ತ ಕಾದು ಕುಳಿತು ಇದಿರುಗಡೆಯ ಹೋಟೆಲಿಗೆ ಒಳ್ಳೆಯ ಗಿರಾಕಿಯಾಗುತಿದ್ದನು. ಅದೂ ಬಡಗಣ ಕಡೆ ಯಾತ್ರೆಯ ಸಮಯವೆಂದರೆ ಮತ್ತೆ ಕೇಳಬೇಕೆ? ಹೆಬ್ಬಾರರು ಕುಡಿದ ಕಾಫಿಯೆಲ್ಲ ರಕ್ತವಾಗಿ ಮೈಕೂಡಿಹೋಗುವ ಬದಲು ಬೆವರಾಗಿಯೇ ಹರಿದು ಹೋಗುತಿದ್ದಿತು!

ಇಂತಹ ಘನ ಘೋರ ಟಿಕೇಟು ಸಂಗ್ರಾಮದ ದಿನ ಸೇರೆಗಾರರು ಅಲ್ಲಿ ಸಿಕ್ಕಿಹೋಗಿ ಅದರಲ್ಲೂ ಕೊಂಚ ವಿಳಂಬವಾಗಿ ಬಂದುದರಿಂದ ಸೋತೇ ಹೋದರು. ಆದರೂ ಅಲ್ಲಿ ಹೆಬ್ಬಾರರ ಹಸನ್ಮುಖವಿರುವನಕ

ವಿಳಂಬವಾದರೂ ನಿರಾಶೆಗೊಳುವ ಸಂದರ್ಭವಿಲ್ಲವಷ್ಟೆ? ಎಂದ ಮೇಲೆ ಮತ್ತೇನು ಹೆದರಿಕೆ? ಆದರೆ ಈಗ ಸುಬ್ಬಣ್ಣನನ್ನು ಕಂಡ ಮೇಲೆ ಅವರಿಗೊಂದು ಹೊಸಯೋಚನೆ ಬಂದಿತು. ಸೇರೆಗಾರರು ಆರಾಮವಾಗಿ ಯಾತ್ರೆ ಮಾಡಬೇಕೆಂದು ಒಂದು ದಿನ ಮುಂಚಿತವಾಗಿಯೇ ಹೊರಟಿದ್ದರು. ಆದರೆ ಈಗ ಹೊತ್ತಾಗಿ ಹೋಯಿತು. ವಿಳಂಬವಾಗಿ ಪ್ರಯಾಣಮಾಡಿ ಅಕಾಲವಾಗಿ ಗುಡಿ ಸೇರುವುದಕ್ಕಿಂತ ಒಂದು ದಿನ ನಿಂತರೂ ಚಿಂತಿಲ್ಲ— ಮರುದಿನ ಮುಂಜಾನೆ ಲಘುವಾಗಿ ಹೊರಡಬಹುದು. ಅಲ್ಲದೆ ಒಂದಿಗೆ ಸುಬ್ಬಣ್ಣ ಬರುವುದಾದರೆ ಚಲೋದಾಯಿತು—ಎಂದು ಭಾವಿಸಿ— ಸುಬ್ಬಣ್ಣ—ಈ ಹೊತ್ತಿಗಂತೂ ನಾನು ಹೋಗುವ ಯೋಚನೆ ಬಿಟ್ಟದ್ದೇನೆ. ನೀನೂ ಬಾ. ನಾಳೆ ಹೋಗೋಣ—ಎಂದರು.

ಸುಬ್ಬಣ್ಣನು ಈ ವಿಷಯವನ್ನು ಎಣಿಸಿದ್ದಿಲ್ಲ. ಕೈಹಿಡಿದುಕಾವ ಶ್ರೀ ಪದ್ಮನಾಭನ ದಿವ್ಯ ಸನ್ನಿಧಿಯೇ ಅವನಿಗೆ ಮಹತ್ತರವಾಗಿದ್ದಿತು. ಆದರೂ ದೈವಸ್ಥಾನಕ್ಕೆ ಬಾ ಎಂದು ಕೇಳಿದಾಗ ತಿರಸ್ಕರಿಸುವುದು ಶ್ರೇಯಸ್ಸಲ್ಲ!—ಮಾತ್ರ ಮನೆಯಲ್ಲಿ ಕೇಳಬೇಕು—

ಅದರಲ್ಲೇನು ಮಹಾ! ಎರಡು ದಿನದಲ್ಲೇ ಹಿಂದೆ ಬರುತ್ತೇವೆ. ಅದೂ ಈಗೇನೂ ಅಂತಹ ಕೆಲಸವಿಲ್ಲತಾನೆ? ಎಂದು ಸೇರೆಗಾರರೇ ಅವನ ಪ್ರಶ್ನೆಗಳನ್ನೆಲ್ಲಾ ಊಹಿಸಿ ಉತ್ತರಗೊಟ್ಟರು.

ಸುಬ್ಬಣ್ಣನು ನಿರುಪಾಯನಾಗಿ-ಬನ್ನಿ ಮನೆಯ ಕಡೆ ಹೋಗೋಣ. ನಮ್ಮ ಗುಡಿಸಲು ಒಂದು ಬಾರಿ ನೀವು ನೋಡಬೇಕು—ಎಂದನು

ಬರಬಹುದಿದ್ದಿತು ನೋಡು! ಆದರೆ ನಾನೀಗ ಆಕಡೆ ಹೋಗುತ್ತೇನೆಂತ ಮನೆಯಲ್ಲಿ ಹೇಳಿ ಬಂದಿದ್ದೇನೆ. ಈಗ ಹೋಗದಿರುವುದರಿಂದ ಮನೆಗೆ ಹೋಗುವುದೇ ಉತ್ತಮ. ಮತ್ತೆ ಬಿಸಿಲಾಯಿತೆಂಬರೆ ನಡೆಯುವುದೂ ಕಷ್ಟ!—ಹೇಗಿದ್ದರೂ ನೀನು ನಾಳೆಬಾ. ಮೊದಲಿನ ಬಸ್ಸಿಗೆ ಸರಿಯಾಗಿ ನೀನು ಮನೆಯ ಪಕ್ಕದಲ್ಲೇ ರಸ್ತೆಯಲ್ಲಿ ನಿಂತಿರು. ನಾನು ಇಲ್ಲೇ ಟಿಕೇಟು ತೆಗೆದುಕೊಂಡು ಬರುತ್ತೇನೆ—ಎಂದು ಸೇರೆಗಾರರು ಅವನ ಕೈಹಿಡಿದು ಹೋಟೆಲಿಗೆ ಕರೆದುಕೊಂಡು ಹೋದರು.

ಆದರೂ ನೀವು ನನ್ನನ್ನು ನೋಡದೆ ಟಿಕೇಟು ತೆಗೆದುಕೊಳ್ಳುವುದು ಬೇಡ. ನಾನು ಇಲ್ಲಿಗೇ ಬರುತ್ತೇನೆ—ಎಂಬ ತಿದ್ದುಪಡಿಯೊಂದಿಗೆ ಆ ನಿರ್ಣಯ ಮಂಜೂರಾಯಿತು- ಅಂತೆಯೇ ಸೇರೆಗಾರರ ಸುಖದುಃಖದ ವಿಚಾರದೊಡನೆ ಸಮೃದ್ಧ ಕಾಫಿ ತಿಂಡಿಯೂ ಆಯಿತು!

ಸುಬ್ಬಣ್ಣನ ಮನೆಯಲ್ಲಿ ಈ ಪ್ರಸ್ತಾವ ಬಂದಾಗ ಯಾರೂ ಪಯಣಕ್ಕೆ ಅಡ್ಡಿಹೇಳಲಿಲ್ಲ. ತುಂಗಮ್ಮ ಮಗು ಚಿಕ್ಕದಲ್ಲವಾಗಿದ್ದರೆ ತಾನೂ ಬರುತಿದ್ದೆನೆಂದಳು. ಆದರೆ ಆ ಬಸ್ಸೋ—ಬಸ್ಸಿಲ್ಲವಾದರೆ ಗಾಡಿ ಇವುಗಳಲೆಲ್ಲ ಮಗು ಹಿಡಿಮಕೊಂಡು ಪಯಣಮಾಡುವುದೆಂದರೆ ಸಾಕು ಸಾಕಾದೀತು—ಎಂದು ಹೆದರಿದಳು. ಗೋವಿಂದನು ಮನೆಯಲ್ಲಿ ಬೇರೆಯಾರೂ ಗಂಡಸರಿಲ್ಲದಿರುವುದರಿಂದ ತಾನು ನಿಲ್ಲಬೇಕಾಯಿತಲ್ಲ—ಎಂದುಕೊಂಡನು. ಹೀಗಾಗಿ ಸುಬ್ಬಣ್ಣನು ಹೋಗಬಹುದೆಂದು ಏಕಮತವಾಗಿ ನಿರ್ಣಯವಾಯಿತು.

ಮರುದಿನ ಬೆಳಿಗ್ಗೆ ಸುಬ್ಬಣ್ಣನು ಪೇಟೆಗೆ ಹೋಗಿಯೇ ಸೇರೆಗಾರರನ್ನು ಕೂಡಿಕೊಂಡನು. ಟಿಕೇಟು ಸಿಕ್ಕುವುದರಲ್ಲಿ ಹೆಬ್ಬಾರರ ಸೌಜನ್ಯದಿಂದಾಗಿ ಬಹಳ ತಾಪತ್ರಯವಾಗಲಿಲ್ಲ. ಅಂತೂ ಪಯಣ ಸುಖವಾಗಿ ಸಾಗಿತು. ಮಧ್ಯಾಹ್ನಕ್ಕೆ ಮುಂಚಿತವಾಗಿ ಬಸ್ಸುಯಾನ ತಂಟೆ ತಕರಾರುಗಳ ಮುಷ್ಕರವಿಲ್ಲದೆ ಶಂಕರನಾರಾಯಣವನ್ನು ಸೇರಿದ್ದರಿಂದ ಯಾತ್ರಿಕರಿಗೆ ಮತ್ತೆ ಬೇಗಬೇಗನೆ ನಡೆದು ಮಾರಣಕಟ್ಟೆ ಸೇರಿ ಗುಡಿಯಲ್ಲಿ ಸೇವೆಸಲ್ಲಿಸಲು ಸಮಯ ಸಮರ್ಪಕವಾಯಿತು

ಓಹೋ ಅಲ್ಲಿಯ ಜನಸಂದಣಿಯೇ! ಎರಡು ಸಂಸ್ಕೃತಿಗಳ ಏಕತ್ರ ಸಮನ್ವಯ! ಆ ಬಡಗಣವರ ಕನ್ನಡ ನಡೆನುಡಿಗಳೊಡನೆ ಸಮತೂಕವಾಗಿ ಹೆಜ್ಜೆಹಾಕಲೆತ್ನಿಸುವ ಈ ಮೂಡಣ ತುಳು ಜನಾಂಗದ ಸಂಸ್ಕಾರ ಅವೆರಡೂ ಹೇಗೋ ಹೇಗೋ ಬೆರಕೆಯಾಗಿ ಕೊನೆಗೆ ಆ ದಿವ್ಯ ಸನ್ನಿಧಾನದಲ್ಲಿ ಹಿತವಾಗಿ ಹರಿಯುವ ಒಂದೇ ಆತ್ಮಸ್ವರೂಪದ ಸಂಗಮ! ಇವುಗಳ ಏಕಸೂತ್ರತೆಯನ್ನು ಕಾಣಬೇಕಾದರೆ ಅದಕ್ಕೂ ಒಂದು ಸುಯೋಗ ಬೇಕು ತಾನೆ? ಕಾಸುಕರ್ಚಿಲ್ಲದೆ ಸುಬ್ಬಣ್ಣನು ಸೇರೆಗಾರರ ಕೃಪೆಯಿಂದ ಇವನ್ನು

ಹೊಂದಿದಂತಾಯಿತು. ಮತ್ತೆ ಮುಂದಿನ ಮಕರ ಸಂಕ್ರಮಣದ ಪೂಜೆ ಪುನಸ್ಕಾರಗಳನ್ನು ಕಂಡು ಅಲ್ಲಿಂದ ಅವರಿಬ್ಬರೂ ಹೊರಟರು. ಆದರೆ ಬಸ್ಸಿನಲ್ಲಿ ಠಾವು ಸಿಗಬೇಕಲ್ಲ? ಎಷ್ಟೋ ದಿನಗಳಿಂದ ಸುರಿದು ಬಂದಂತೆ ಸೇರಿ ಸೇರಿ ಒಂದು ಮಹಾಸಮುದ್ರವಾಗಿ ಬೆಳೆದ ಆ ಸಮುಚ್ಚಯ! ಅಂತಹ ಸಮುದಾಯದಲ್ಲಿ ನಮ್ಮ ಸೇರೆಗಾರ—ಸುಬ್ಬಣ್ಣರಿಬ್ಬರು ಎರಡು ವ್ಯಕ್ತಿತ್ವವನ್ನು ಕಳೆದುಕೊಂಡ ಚಿಕ್ಕ ಮೀನುಗಳು ಮಾತ್ರ. ಅವರನ್ನಲ್ಲಿ ಗುರುತಿಸಬಲ್ಲವರಾರು?

ಎಷ್ಟು ಹೋರಾಡಿದರೂ ಸೇರೆಗಾರರಿಗೆ ಶಂಕರ ನಾರಾಯಣದಲ್ಲಿ ಬಸ್ಸಿಗೆ ಟಿಕೇಟು ಸಿಗಲಿಲ್ಲ. ಅಥವಾ ಆ ದಿನವಿಡೀ ಸಿಗುವುದೂ ದುಃಸಾಧ್ಯವೆಂದೇ ನಿರ್ಧಾರವಾಗಿ ತಿಳಿದು ಬಂದಿತು. ಇಬ್ಬರೂ ತಲೆ ಕೆರೆದುಕೊಂಡರು.– ಕೊನೆಗೆ ವೃಥಾ ಕಾಲಹರಣ ಮಾಡುವುದಕ್ಕಿಂತ ಹಿಂದೆ ನಡೆದರೂ ಚಿಂತಿಲ್ಲ ವಂಡ್ಸೆಯಿಂದ ದೋಣಿ ಹತ್ತಿ ಕುಂದಾಪುರಕ್ಕೆ ಸಾಗುವುದು ಉತ್ತಮವೆಂದು ನಿರ್ಣಯಿಸಿದರು.

ದೋಣಿಯ ಪಯಣ ಸಂಜೆ ಹೊತ್ತಿಗೆ ಬಹಳ ಹಿತವಾಗಿ ಕಂಡು ಬಂದಿತು. ಆದರೆ ಕುಂದಾಪುರ ಸೇರಿದಾಗ ಇವರಂತೆಯೇ ಆ ಮುಂಚಿತವಾಗಿಯೇ ಬಂದು ಸೇರಿ ಜಮೆಯಾದ ಜನರ ಗುಂಪಿಗೇನು ಕೊನೆ ಮೊದಲಿರಲಿಲ್ಲ. ಮರುದಿನ ಅಲ್ಲಿಂದ ಪಾರಾಗುವ ಬಗೆ ಹೇಗೆಂದು ಯೋಚನೆ ಮತ್ತೆ ಮೂಡಿತು. ಮಣೂರತನಕ ನಡೆದರೆ ಅಲ್ಲಿಂದ ದೋಣಿ ಹತ್ತಿ ಸೀದಾ ಸಾಗಬಹುದೆಂದು ಕೆಲವರು ನಿರ್ಣಯಿಸಿದರು. ಆ ತಂಡದೊಡನೆ ತಾವೂ ಸೇರುವುದು ವಿಹಿತವೆಂದು ಸುಬ್ಬಣ್ಣನವರು ಊಟ ತೀರಿಸಿ ಕುಂದಾಪುರದಿಂದ ಆ ರಾತ್ರಿಯೇ ತಿಂಗಳ ಬೆಳಕಿಗೆ ಹೊರಟರು.

ಗುಂಪಿನೊಡನೆ ಸಾಗುವಾಗ ನಡೆದ ದಾರಿಯ ಕಷ್ಟಸುಖಗಳ ನೆನವರಿಕೆಯಾಗುವುದಿಲ್ಲ. ಹಲವರು ತಮ್ಮ ತಮ್ಮ ಆಳವಾದ ಅನುಭವದಿಂದ ಒಂದೊಂದೇ ಪ್ರಕರಣಗಳನ್ನು ಸ್ವಾರಸ್ಯವಾಗಿ ಹೊರತೆಗೆದು ನಕ್ಕು ನಗಿಸಿ ನಡೆಯುತ್ತಿರುವ ವಿಧಾನದಿಂದಾಗಿ ದಾರಿಸಾಗಿಯೇ ಸಾಗಿತು. ಇವರೆಲ್ಲರ ಅದೃಷ್ಟಕ್ಕೆ ಸರಿಯಾಗಿ ಕೆಲವು ದೋಣಿಗಳು ಮಣೂರಿನಲ್ಲಿ ಯಾತ್ರಿಕರಿಗಾಗಿ

ಕಾಮು ಸಿದ್ಧವಾಗಿದ್ದುವು. ಈ ಕಡೆ ಬರುವ ಕೆಲಸರು ಒಂದು ದೊಡ್ಡ ದೋಣಿಯನ್ನು ಸೇರಿ ಬಜೆತನಕ ಬಿಡಬೇಕೆಂದು ಬಾಡಿಗೆ ನಿರ್ಣಯಿಸಿ ಹತ್ತಿದರು. ಭರತದ ಸಮಯವಾದುದರಿಂದ ಮೇಲುಮುಖದ ಪ್ರಯಾಣ ಪ್ರಯಾಸವಾಗಿ ಕಂಡುಬರಲಿಲ್ಲ.

ಬಜೆಯ ಕಡೆ ಬಂದು ಕೆಳಗಿಳಿದಾಗ ಮೂಡಣ ದಿಕ್ಕಿನಲ್ಲಿ ಬೆಳ್ಳಿ ಮೂಡಿದ್ದಿತಷ್ಟೆ. ಸುಬ್ಬಣ್ಣ ಮುಂದಕ್ಕೆ ನಾಲ್ಕು ಮೈಲು ನಡೆಯೋಣವೆ?—ಎಂದು ಕೇಳಿದ. ಆದರೆ ಸೇರೆಗಾರರು ನಿದ್ದೆಗಣ್ಣಿನಿಂದ ಆ ಕಡೆ ಈ ಕಡೆ ನೋಡಿ—ಸ್ವಲ್ಪ ತಾಳು. ಆ ಕಡೆ ಒಂದು ಗಾಡಿ ನಿಂತಂತಿದೆಯಲ್ಲ? ವಿಚಾರಿಸೋಣ. ನನಗೆ ನೋಡು! ಬೆಳಗ್ಗಿನ ಜಾವದ ನಿದ್ದೆಗೆಟ್ಟು ನಡೆಯುವುದೆಂದರೆ ಬಹಳ ಹೈರಣ!—ಎಂದರು.

ಹೋಯ್ ಗಾಡಿ—

ಯಾರದು?

ಯಾರಗಾಡಿ? ಎಲ್ಲಿಗೆ?—

ನಾನು ಸೋಮಯ್ಯ. ಯಾರಿಗೋ ಸವಾರಿಗೆ ಕಾಯುತ್ತಾಯಿದ್ದೇನೆ. ನೀವೆಲ್ಲಿಗೆ?

ಹತ್ತಿರ ಬಂದ ಮೇಲೆ ಸೋಮಯ್ಯನಿಗೆ ಸುಬ್ಬಣ್ಣನ ಗುರುತು ಸಿಕ್ಕಿತು. ಹಾಗಾದರೆ ನೀವೇ? ಹತ್ತಿ, ಮನೆಗೆ ಬಿಡುತ್ತೇನೆ.—ಎಂದನು.

ಮತ್ತೆ ನೀನು ಕಾಯುತ್ತಿರುವ ಜನ?

ಇಷ್ಟು ಹೊತ್ತು ನಾನು ಕಾದಿದ್ದೆ. ಬೇಕಾದರೆ ಇನ್ನು ಸ್ವಲ್ಪ ಅವರು ಕಾದಿರಲಿ, ಚಿಂತಿಲ್ಲ. ನೀವು ಹತ್ತಬಹುದು.

ಸರಿ—ಎಂದು ಸೇರೆಗಾರರು ಆ ನ್ಯಾಯಾನ್ಯಾಯಗಳ ಗೊಡವೆಗೆ ಹೋಗದೆ ಗಾಡಿ ಏರಿದರು. ಹೊತ್ತು ಮೂಡುವ ವೇಳೆಗೆ ಮುನ್ನವೇ ಪೆರ್ಡೂರು ದಾಟುವಾಗ ಸೇರೆಗಾರರು ಕಾಲು ಚಾಚಿ–ಸುಬ್ಬಣ್ಣ! ನಾನಿಲ್ಲಿ ಯಿಳಿಯುತ್ತೇನೆ—ಎಂದರು.

ಹಾ. ಅದಾಗದು. ನಮ್ಮಲ್ಲಿಗೇ ಗಾಡಿ ಹೋಗುವುದು. ನೀವು ಬರಲೇಬೇಕು.

ಸೇರೆಗಾರರು ಮುಖ ಮುಖ ನೋಡಿದರು. ಸುಬ್ಬಣ್ಣನ ಆಹ್ವಾನದಲ್ಲಿ ಆಡಂಬರವಲ್ಲ—ಆತ್ಮೀಯತೆ ಮಾತ್ರ ಎದ್ದು ಕಾಣುತಿದ್ದಿತು. ಆದುದರಿಂದ ಚಾ—ಚೂ ಎನ್ನದೆ ಸುಮ್ಮನಿದ್ದರು.

ಸೂರ್ಯೋದಯಕ್ಕೆ ಸರಿಯಾಗಿ ಗಾಡಿ ಸುಬ್ಬಣ್ಣನ ಮನೆ ಸೇರಿತು!

ಸುಬ್ಬಣ್ಣ ಸೇರೆಗಾರರನ್ನು ಒಳಗೆ ಕರೆದುಕೊಂಡು ಹೋಗಿ ಚಾವಡಿಯಲ್ಲಿ ಕುಳ್ಳಿರಿಸಿ ಮತ್ತೆ ಗಾಡಿಯ ಬಳಿಬಂದು ಗೋವಿಂದನನ್ನು ಕರೆದು ಗೋವಿಂದ—ಎತ್ತುಗಳಿಗೆ ಸ್ವಲ್ಪ ನೀರುಕೊಡು—ಎಂದು ಹೇಳಿ ಒಳಕ್ಕೆ ಹೋದನು. ಎತ್ತುಗಳು ಧಾರಾಳ ನೀರು ಕುಡಿದು ಹುಲ್ಲು ತಿಂದು ಮೆಲುಕಾಡಿ ಆಕಡೆ ಈಕಡೆ ತಿರುಗಾಡ ತೊಡಗಿದುವು.

ಸೋಮಯ್ಯ ಅರ್ಧಗಂಟೆಯ ಕಾಲ ಸೇರೆಗಾರರ ಮತ್ತು ಸುಬ್ಬಣ್ಣನೊಡನೆ ಚಾವಡಿಯಲ್ಲಿ ಕುಳಿತು ಮಾತನಾಡುತಿದ್ದು ತುಂಗಮ್ಮನ ಬೆಳಗ್ಗಿನ ಇಸ್ಪೆಶಲ್ ಚಾ ಕುಡಿದು ಮತ್ತೆ ಹೋಗುವೆನೆಂದು ಹೊರಟು ಬಂದನು.

ಮೆಟ್ಟಲಿಳಿದು ಮುಂದುಗಡೆ ನೋಡಿದಾಗ ಎತ್ತು ಜೊತೆಯಲ್ಲಿ ಒಂದು ಕಾಣೆಯಾಗಿದ್ದಿತು!

ಸೋಮಯ್ಯ ಗಾಬರಿಯಿಂದ ಬೆರಳು ಕಚ್ಚಿ ನಾಲ್ಕು ಕಡೆ ನೋಡಿದ. ಬೆಟ್ಟಿನ ಕಡೆ ಸುತ್ತಿ ಬಂದು ಹುಲ್ಲುಗಾವಲಿನ ಬಳಿ ಓಡಾಡಿದ. ಮತ್ತೆ ಸುಗ್ಗಿ ಗದ್ದೆಯಲ್ಲಿರಬಹುದೆಂದು ಗೋವಿಂದನನ್ನು ಕೂಗಿಕೇಳಿದ. ಆದರೆ ಎಲ್ಲಿಯೂ ಕಂಡುಬರಲಿಲ್ಲ. ಮತ್ತೆ ತುಸು ಗಾಬರಿಗೊಂಡು ಎಲ್ಲಿಯಾದರೂ ಹೆಬ್ಬುಲಿ ಬಂದು—! ಛೇ. ಇರಲಾರದು!

ಸ್ವಲ್ಪ ಹೊತ್ತಿನ ಮೇಲೆ ಹಟ್ಟಿಯ ಕಡೆ ಗಂಟೆಯ ಸದ್ದಾಯಿತು. ಅಲ್ಲಿ ಹಣಕಿ ನೋಡಿದಾಗ ಆ ಎತ್ತು ಹಾಯಾಗಿ ಮಲಗಿ ಮೆಲುಕುಹಾಕುತಿದ್ದಿತು. ಅದು ತಾನೊಂದು ಅರಮನೆಯ ಅಂತಃಪುರದಲ್ಲಿ ಕೈಕಾಲು ನೀಡಿ ಮಲಗಿರುವೆನೆಂದೇ ಭಾವಿಸಿದ್ದಿತೋ ಏನೊ! ಪಾಪ. ಬಹಳ ಬಳಲಿರಬಹುದೆಂದು ಸೋಮಯ್ಯ ಹಟ್ಟಿಗೆ ಹೋಗಿ ಅದರ ಬೆನ್ನು ತಟ್ಟಿ ಹೈ— ಹೈ- ಎಂದನು. ಎತ್ತು ಏಳುವ ಅಂದಾಜಿಯಲ್ಲೇಯಿದ್ದಿಲ್ಲ. ಅದು ತಲೆಯಲ್ಲಾಡಿಸಿ ಒಲ್ಲೆನೆಂದೇ ಸಾರಿತು. ಮತ್ತೆ ಗೋವಿಂದ ಹೋಗಿ ಹತ್ತಿರ ನಿಂತಾಗ

ಮೈಮೂಸಿ ಅವನ ಕಡೆ ನೋಡಿತು. ಅದರ ಕಣ್ಣ ಕೊನೆಯಲ್ಲಿ ನೀರು ಒಸರುತಿದ್ದಿತು!

ಅಯ್ಯೋ ಇದೇನು ಬಂದಿತು ಗ್ರಹಚಾರ!—ಎಂದು ಗೋವಿಂದ ಅದರ ಬಳಿಕುಳಿತು ಮೈಪೂಸ ತೊಡಗಿದನು. ಎತ್ತು ಸಲುಗೆಯಿಂದ ಅವನ ಕೈನೆಕ್ಕ ತೊಡಗಿತು. ಆಗಿಂದಾಗ ಅವನಿಗೊಂದು ಸತ್ಯದ ಅರಿವಾಯಿತು. ಆ ಎತ್ತು ರಾಮು!—ಎರಡು ವರ್ಷಗಳ ಹಿಂದೆ ಇದೇ ಹಟ್ಟಿಯಿಂದ ಹೊರ ಹೊರಟ ಪ್ರಾಣಿ! ಪಾಪ. ಆ ಮೂಕ ಪ್ರಾಣಿಗಾದರೂ ಏನು ಮಮತೆ?–ಅಭಿಲಾಷೆ! ತಾನು ಈ ಹಿಂದೆ ಹುಟ್ಟಿ ಹುಲ್ಲು ತಿಂದು ಬೆಳದ ತಾವು ಬಂದೊಡನೆಯೆ ಅದೆಲ್ಲವನ್ನೂ ಗ್ರಹಿಸಿಕೊಂಡು ನೇರವಾಗಿ ಹಟ್ಟಿಯೊಳಕ್ಕೆ ಬಂದು ತನ್ನ ಮೊದಲಿನ ಸ್ಥಳದಲ್ಲಿ ಸದ್ದಿಲ್ಲದೆ ಮಗುವಿನಂತೆ ಮಲಗಿದ್ದಿತು! ಒಂದಿಗೆ ಅವನ ಕಣ್ಣುಗಳಲ್ಲೂ ಎರಡು ಹನಿ ನೀರು ಕೂಡಿಬಂದು ಅದನ್ನು ಸಾಕಿದ ಕೈಗಳ ಮೇಲೆ ಹೊರಳಿ ಅದರ ತಲೆಯ ಮೇಲ್ಗಡೆ ಬಿದ್ದಿತು!

ಸುಬ್ಬಣ್ಣ ಕೇಳಿದ--ಸೋಮಯ್ಯ! ಈ ಎತ್ತು ನೀನು ಎಲ್ಲಿ ಪಡೆದದ್ದು? ಇದನ್ನು ನಾವು ಇಲ್ಲಿಗೆ ಬಂದ ವೇಳೆ ಧನಿಗಳಿಂದ ಪಡೆದಿದ್ದೆವು. ಅದಕ್ಕೂ ಹಿಂದೆ ಈ ಬೇಸಾಯದವರ ಸಾಗುವಳ್ಳಿಯ ಎತ್ತು. ಇದ್ದು ಇಲ್ಲೇ ಹುಟ್ಟಿ ಬೆಳೆದಿದ್ದಿರಬೇಕು. ಆದರೆ ಅದರ ಜೊತೆ ಕಾಲು ಮುರಿದು ಹೋದ್ದರಿಂದ ಕೊನೆಗೆ ಗುಣವಾದರೂ ಜೋಡು ಸಮಬರಲಾರದೆಂದು ನಾನು ಸೀತಾನದಿ ಜಾತ್ರೆಗೆ ಕೊಂಡುಹೋಗಿ ಬದಲಾಯಿಸಿ ಬೇರೆ ಜೋಡು ತಂದಿದ್ದೆ ನೋಡು. ಇದು ನಿನಗೆ ಹೇಗೆ ಬಂದಿತು?

ನಾನು ಕಳೆದ ವರ್ಷ ಪೈರಿನ ಸ್ವಾಬರಿಂದ ಪಡೆದಿದ್ದೆ. ನನ್ನ ಕೂಡೆ ಬೇರೊಂದು ಎತ್ತು ಇದ್ದುದರಿಂದ ಅದರ ಜೊತೆಗೆ ಇದನ್ನು ಮಾಡಿ ಗಾಡಿಗೆ ಕಟ್ಟುತ್ತ ಬಂದಿದ್ದೇನೆ. ಆದರೆ ಈ ಎತ್ತು ತನ್ನ ಹಿಂದಿನ ನೆನಪು ಇಟ್ಟುಕೊಂಡು ಹಟ್ಟಿ ಹೊಕ್ಕಿ ಕಣ್ಣೀರು ಸುರಿಸಿದ್ದು ಬಹಳ ಚೋದ್ಯ!—ಎಂದನು ಸೋಮಯ್ಯ.

ಜಾನುವಾರುಗಳಾದರೇನು? ಮನುಷ್ಯನಿಗಿಂತಲೂ ಹೆಚ್ಚಿನ ವಿಶ್ವಾಸ ಅವುಗಳಿಗಿದೆ! -- ಎಂದರು ಸೇರೆಗಾರರು.

ಗೋವಿಂದ ಎತ್ತಿನ ಬೆನ್ನು ತಟ್ಟಿ ಎಬ್ಬಿಸಿದ. ನಾಯಿಯ ಮರಿಯ ಹಾಗೆ ಅದು ಅವನ ಕೂಡೆ ಹಿಂದೆ ಮುಂದೆ ತಿರುಗತೊಡಗಿತು. ಆದರೆ ಸೋಮಯ್ಯ ಗಾಡಿಗೆ ನೊಗ ಕೂಡಿಸಲು ಏನು ಯತ್ನಿಸಿದರೂ ಅದು ಒಪ್ಪಲಿಲ್ಲ. ಅವನು ಹತ್ತಿರ ಬಂದೊಡನೆಯೇ ತಲೆತಗ್ಗಿಸಿ ಹಾಯಲು ಹವಣಿಸುವ ಅಥವಾ ಹಟ್ಟಿ ಸೇರುವ ವಿದ್ಯೆಯಿಂದಾಗಿ ಅವನ ಸೊತ್ತು ಅವನ ಕೈಮೀರಿ ಹೋದಂತೆಯೇ ಆಯಿತು. ಕೊನೆಗೆ ಅವನಿಗೂ ಕೊಂಚ ಕೋಪ ಬಂದಿತು. ತಾನು ಈ ತನಕ ಸಾಕಿಸಲಹಿದ ಎತ್ತು ತನ್ನನ್ನೇ ಮರೆತಂತಿದೆಯಲ್ಲ! ಎಂದು ಗರ್ವಗೊಂಡು ಬಾರುಕೋಲಿನಿಂದ ಎರಡು ಏರಿಸಿಬಿಟ್ಟನು! ಆದರೆ ಎತ್ತು ನಾಲ್ಕು ಕಾಲು ಬಿಟ್ಟು ಹಟ್ಟಿಯಲ್ಲಿ ಹೊರಳಾಡಿತೇ ಹೊರತು ಹೊರಹೊರಡಲಿಲ್ಲ! - ಎಂದ ಮೇಲೆ ಆತನೇನು ಮಾಡಬೇಕು ಪಾಪ!

ಅದನ್ನು ಕಂಡು ಗೋವಿಂದನಿಗೆ ತಡೆಯಲಾರದ ದುಃಖ ಬಂದಿತು. ಅವನ ಕಣ್ಣಿನಿಂದ ನೀರೊಡೆಯಿತು. ಮೈ ಬೆವರಿಹೋಯಿತು! ವಿನಯವಾಗಿ ಅಣ್ಣನ ಕೂಡೆ ಹೇಳಿದ ಹೇಗಿದ್ದರೂ ಪಾಪ!—ಅದನ್ನು ಹೊಡೆದು ಹೊರ ಹಾಕಿ ಏನೂ ಉಪಯೋಗವಿಲ್ಲ. ಅದರ ಕಣ್ಣ ನೀರು ಕಂಡರೆ ನಮ್ಮ ಹಟ್ಟಿಗೆ ಲಕ್ಷಣವಾಗಲಾರದು. ಆದುದರಿಂದ!— —ಅದರ ಮೇಲಣ ಮಾತು ಅವನಿಗೂ ತೋಚಲಿಲ್ಲ.

ಸಹಜ. ಆದರೆ ಈ ಒಂಟಿ ಎತ್ತನ್ನು ನಾವು ಪಡಕೊಂಡೆವೆಂದರೆ ಸೋಮಯ್ಯ ಆ ಮತ್ತೊಂದು ಎತ್ತನ್ನು ಏನು ತಾನೇ ಮಾಡಲಾಪ? ಎಂದನು ಸುಬ್ಬಣ್ಣ.

ಯಾರಿಗೂ ಏನು ಮಾಡುವುದೆಂದು ಅರ್ಥವಾಗಲಿಲ್ಲ. ನೇರೆಗಾರರಿಗಂತೂ ಇದೊಂದು ವಿಚಿತ್ರ ವಿಷಯವಾಗಿಯೇ ಕಂಡು ಬಂದಿತು. ಸೋಮಯ್ಯ ಪಾಪ!—ಇಲ್ಲಿಗೆ ಬಂದ ಪ್ರಾಯಶ್ಚಿತ್ತಕ್ಕೆ ಒಮ್ಮೆ ತನ್ನ ಗಾಡಿ ಎತ್ತು ತನ್ನ ಬೆನ್ನು ಹಿಡಿದಿದ್ದರೆ ಸಾಕೆಂದು ಬೊಬ್ಬರ್ಯನಿಗೆ ಕಾಯಿ ಹೇಳಿಕೊಂಡನು!

ಕೊನೆಗೆ ತುಂಗಮ್ಮ ಆ ಎತ್ತಿನ ಕಷ್ಟ ಇವರೆಲ್ಲರ ಅಸಹಾಯ ಪರಿಸ್ಥಿತಿಯನ್ನು ಕಂಡು ಕನಿಕರದಿಂದ ಹೇಳಿದಳು--- ಹೋಗಲಿ ಬಿಡಿ! ಒಂದು ಎತ್ತು ಅಲ್ಲವಾದರೆ ಎರಡನ್ನೂ ಪಡಕೊಳ್ಳುವುದು. ಅಲ್ಲವಾದರೆ ಇವನ್ನೇನು ಇಲ್ಲೇ ಹೊಡೆದು ಕೊಲ್ಲುತ್ತೀರಾ?

ಗೋವಿಂದನೂ ಹೌದೆಂದು ತಲೆದೂಗಿದನು. ಸೋಮಯ್ಯ ಏನೂ ಮುಂಗಾಣದೆ ಕೈಸೋತವನಂತೆ ಚಾವಡಿಯಲ್ಲಿ ಕಾಲು ಚಾಚಿ ಕುಳಿತು--- ನನಗೆ ಎತ್ತೂ ಬೇಡ---ಗಾಡಿಯೂ ಬೇಡ! ಸುಬ್ಬಣ್ಣನೇ ಎಲ್ಲ ತೆಗೆದುಕೊಳ್ಳಲಿ! ಎಂದು ಅಯ್ಯಣ್ಣ ಸೇರೆಗಾರರ ಮುಖ ನೋಡಿದನು.

ಆದರೆ ಕ್ರಯ ಹೊಂದಬೇಕಲ್ಲ? ಎಂದರು ಸೇರೆಗಾರರು.

ಕ್ರಯ ಹೊಂದುವುದೇನು? ಹೇಗೂ ಈ ಒಂದು ಎತ್ತನ್ನು ನಾನಂತೂ ಇಲ್ಲಿಂದ ಕೊಂಡುಹೋಗುವಂತಿಲ್ಲ. ಮತ್ತೊಂದು ಎತ್ತನ್ನು ಹಿಡಿದುಕೊಂಡು ನಾನೇನು ಮಾಡಲು ಬರುವಂತಿದೆ? ಹೇಗಾದರೂ ನಾನು ಸೋತೆ! ಆದುದರಿಂದ ನೀವು ಹೇಳಿದ ಕ್ರಯ--ನಿಮ್ಮದೇ ತಿರ್ಮಾನ!— ಎಂದನು ಸೋಮಯ್ಯ.

ಗೋವಿಂದನ ಮುಖ ಬಟ್ಟಲಿನಷ್ಟು ಅಗಲವಾಯಿತು. ತುಂಗಮ್ಮನ ತಲೆಯಿಂದ ಒಂದು ಕರಕರೆಯ ಹೊರೆ ಕೆಳಗಿಳಿಸಿದಂತಾಯಿತು. ಆದರೆ ಸುಬ್ಬಣ್ಣನ ಮುಖ ಚಿಕ್ಕದಾಯಿತು. ಕಾರಣ—ಈಗಿಂದೀಗ ಹಣತೆರಬೇಕಲ್ಲ?

ಸೇರೆಗಾರರು ಮೆಲ್ಲನೆ ಹೇಳಿದರು---ಆಗಬಹುದು ಸುಬ್ಬಣ್ಣ! ತೆಗೆದುಕೋ. ಗೋವಿಂದನಿಗೆ ಒಂದು ಗಾಡಿಯಾದ ಹಾಗಾಯಿತು. ಅಲ್ಲವಾದರೆ ಅವನಿಗೆ ಬೇರೇನು ಕೆಲಸವಿದೆ? ಕೆಲಸವಿಲ್ಲದೆ ಹುಡುಗರು ಕೂತಿರಬಾರದು. ಹಣದ ಮಟ್ಟಿಗೆ ಏನಾದರೂ ಮಾಡೋಣ—

ನೀವೂ ಹಾಗೆ ಹೇಳಿದರೆ ಆಗಬಹುದು.

ಸೇರೆಗಾರರು ಕೇಳಿದರು---ಕ್ರಯವೇನು ಸೋಮಯ್ಯ?

ನೀವೇಹೇಳಿ—

ಮೂರು ಪಚ್ಚೆನೋಟು.

ಐವತ್ತು ಕೂಡಿಸಿ ಕೊಡಿ.

ಊಹೂಂ. ಹತ್ತು ಜಾಸ್ತಿ.

ಬೇಡ. ಮಧ್ಯ ಪಂಚಾಯಿತಿಕೆ. ಇಪ್ಪತ್ತೈದು.

ಇಲ್ಲ ಇಲ್ಲ. ಮುನ್ನೂರ ಹದಿನೈದು—ಎಂದರು ನಿರ್ಧಾರವಾಗಿ ಸೇರೆಗಾರರು.

ಸೋಮಯ್ಯ ಕೊಂಚ ಯೋಚಿಸಿ ಕೊನೆಗೆ ಸೈ—ಎಂದನು.

ಅಲ್ಲಿಗೆ ಕ್ರಯದ ತೀರ್ಮಾನವಾಯಿತು. ಇನ್ನು ಹಣದ ಪಾವತಿಯ ಕುರಿತು ವಾಯಿದೆ ಬೇಕೆಂದರು ಸೇರೆಗಾರರು.

ಎಷ್ಟು ಸಮಯ?

ಒಂದು ತಿಂಗಳು.

ನನಗೆ ಬೇರೆ ಎತ್ತು ನೋಡಬೇಕಲ್ಲ?

ಹಾ ನೋಡಿಕೊ, ಅಂತೂ ಒಂದು ತಿಂಗಳ ವಾಯಿದೆ ಬೇಕು.

ಆದೀತು. ಈಗ ಸ್ವಲ್ಪ ಕೊಡಿರಿ. ಅರೆವಾಸಿಯಾದರೂ—

ತೆಗೆದುಕೋ ನೂರಹದಿನೈದು—ಎಂದು ಸೇರೆಗಾರರು ಸೊಂಟಕ್ಕೆ ಹಾಕಿದ ಚರ್ಮದ ದಟ್ಟಿಯಿಂದ ಅಷ್ಟು ಹಣ ತೆಗೆದು ಎಣಿಸಿಕೊಟ್ಟು— ಉಳಿದ ಇನ್ನೂರು ಒಂದು ತಿಂಗಳ ನಂತರ—ಎಂದರು.

ಸುಬ್ಬಣ್ಣ ಇವೆಲ್ಲವನ್ನೂ ಕಣ್ಣು ಕಣ್ಣು ಬಿಟ್ಟು ನೋಡಿದ.

ಸೋಮಯ್ಯ ತನ್ನ ಎತ್ತುಗಳ ಮೈ ಪೂಸಿ ಗಾಡಿಗೆ ಸುತ್ತು ಬಂದು ಬಾರುಕೋಲನ್ನು ಕೈಗೆ ತೆಗೆದುಕೊಂಡು ಬೀಸುತ್ತ ಬರುತ್ತೇನೆಂದು ಹೇಳಿ ಸಿಳ್ಳು ಹಾಕುತ್ತ ಹೊರಟು ಹೋದನು. ಅವನು ಹೋದ ಮೇಲೆ ಸುಬ್ಬಣ್ಣನಿಗೆ ನಾಲಗೆಗೆ ತುಸು ಚೈತನ್ಯ ಬಂದಂತಾಯಿತು. ಆದುದರಿಂದ ವಿನಯವಾಗಿ ಕೈಮುಗಿದು—ನನ್ನಿಂದಾಗಿ ತಮಗೆ ಈ ಮುಂಜಾನೆ ಮೊದಲು

ತುಂಬಾ ತೊಂದರೆಯಾಯಿತು. ನಾನು ನಿಮ್ಮನ್ನು ವಿಶ್ವಾಸದಿಂದ ಮನೆಗೆ ಕರೆದುಕೊಂಡು ಬಂದು—

ಸೇರೆಗಾರರು ಮುಂದೆ ಮಾತಾಡಗೊಡಲಿಲ್ಲ. ಸಾಕು ಸುಬ್ಬಣ್ಣ! ನಿನ್ನಗುಣ ನನಗೆ ಗೊತ್ತಿದೆ. ನನ್ನ ವಿಚಾರ ನಿನಗೂ ಗೊತ್ತಿದೆ. ಆದುದ ರಿಂದ ಹೀಗೆ ಮಾತನಾಡಿ ಉಪಯೋಗವಿಲ್ಲ. ನೀನು ಕೈಯಲ್ಲಾದಾಗ ಹಣ ಒದಗಿಸಿ ನನಗೆ ಕೊಡು ಚಿಂತಿಲ್ಲ. ಅಂತೂ ಈ ಮುಂಜಾನೆ ಕೆಲಸ ಸುಖವಾಗಿ ತೀರ್ಮಾನವಾಯಿತಲ್ಲ? ನೋಡು. ಆ ಎತ್ತು ಕಣ್ಣು ನೀರು ತೆಗೆದು ಹೊರಗೆ ಹೋಗಬಾರದು. ಆದುದರಿಂದ ಹೀಗೆ ಮಾಡಿದೆನು. ನಾನಿನ್ನು ಹೋಗುವೆನು—ಎಂದು ಎದ್ದು ನಿಂತರು.

ಆದರೆ ತುಂಗಮ್ಮ ಅಷ್ಟಕ್ಕೆ ಹೋಗಗೊಡುವ ಹೆಣ್ಣು ಮಗಳಲ್ಲ. ಮತ್ತೊಮ್ಮೆ ಹಾಲು—ಹುರಿದು ಬೆಲ್ಲ ಕಾಯಿ ಹಾಕಿದ ಅವಲಕ್ಕಿ ಮುಂದೆ ಬಂದಿತು. ಸೇರೆಗಾರರು ಬೇಡ ಬೇಡವೆಂದರೂ ಕೇಳುವವರು ಯಾರು? ಆದುದರಿಂದ ಅದನ್ನೆಲ್ಲಾ ತೀರಿಸಿಯೇ ಒಂದು ತಾಸು ಗೊರಕೆ ಹೊಡೆದು ನಿದ್ರೆ ಮಾಡಿ ನಂತರ ಮೇಲೆದ್ದು ತಮ್ಮ ಕೆಂಪು ರುಮಾಲು ಸುತ್ತಿಕೊಂಡು ಹೊರಟು ಹೋದರು.

ಅವರು ಹೊರಟು ಹೋದ ಮೇಲೆ ಕ್ಷಣಕಾಲ ಯಾರೂ ಮಾತಾಡ ಲಿಲ್ಲ. ಯಾರಿಗೂ ಏನೆಂದು ಹೇಳಲೂ ಬಾಯೇ ಬಾರದಂತಿದ್ದಿತು. ಕೊನೆಗೆ ತುಂಗಮ್ಮ ಮೆಲ್ಲನೆ—ಎಂತಹ ಮನುಷ್ಯನಪ್ಪ!—ಎಂದಳು.

ಹೌದು. ದೇವತಾ ಮನುಷ್ಯ—ಎಂದು ತಲೆದೂಗಿದನು ಸುಬ್ಬಣ್ಣ.

ಗೋವಿಂದ ಆ ಗಾಡಿ ಎತ್ತುಗಳ ಬೆನ್ನು ತಟ್ಟಿ ಸುಗ್ಗಿ ಗದ್ದೆಯ ತೋಡಿನ ಕಟ್ಟದ ಕಡೆಗೆ ಹೊಡೆದುಕೊಂಡು ಹೋಗಿ ಮೈಯುಜ್ಜಿಯುಜ್ಜಿ ತಿಕ್ಕತೊಡಗಿದನು. ಅವನು ಈ ಭೂಮಿಯಿಂದ ಮೂರುವರೆ ಗೇಣು ನೆಲ ಬಿಟ್ಟು ಮೇಲೆ ನಿಂತಿದ್ದು ನಿಜವಾಗಿಯೂ ಆ ಎತ್ತುಗಳನ್ನು ಸೀದಾ ಸ್ವರ್ಗದ ಕಡೆ ಅಟ್ಟಿಕೊಂಡು ಹೋಗಲಿರುವನೋ ಎಂಬಂತಿದ್ದಿತು ಆ ಸನ್ನಿವೇಶ!

ಹೆಜ್ಜೆ ೫ ಕಾಲಿಗೆ ಬಿದ್ದ ಕೊಡಲಿ

ಮತ್ಸರವು ಮನುಷ್ಯನ ಭವಿಷ್ಯವನ್ನು ಕೊರೆಯುವ ಒಂದು ವಜ್ರ ಕೀಟ! ಮತ್ಸರಿಯು ಇನ್ನೊಬ್ಬರ ಏಳಿಗೆಯಲ್ಲಿ ಮನಸ್ಸಡಗುವ, ಕೆಟ್ಟುದರಲ್ಲಿ ಮೆಚ್ಚುಗೆ ಪಡುವ ಮಾನಸಿಕ ವೇದನೆಯಿಂದಾಗಿ ಸದಾ ಸೊರಗಿ ಸಾಯು ತಿರುವನು. ತನ್ನ ತನ್ನ ಒಳ್ಳಿತು ಕೆಟ್ಟುದರಲ್ಲೇ ಗೆಲವುಗೈಮೆಗೊಳಲು ವ್ಯವಧಾನವಿಲ್ಲದ ಈ ಕ್ಷಣಿಕ ಜೀವಿತದಲ್ಲಿ ಇನ್ನೊಬ್ಬರಿಗಾಗಿ ಕಣ್ಣಿಟ್ಟು ಕಾದು ಕ್ಷಯಿಸುವ ಕಾರ್ಪಣ್ಯವು ಮನುಷ್ಯನನ್ನು ಜೀವಂತ ದಹಿಸುವ ಒಂದು ಕಿಚ್ಚು. ಅದರ ಅಂತರಾಳದಲ್ಲಿ ಅಂತವನು ತನ್ನ ಆತ್ಮವನ್ನೇ ಹವಿಸುತಿರುವನು. ಅಂತೆಯೇ ತುಂಗಮ್ಮನು ಮನೆಯಿಂದ ಹೊರಹೊರಟ ಮೇಲೆ ರಾಮಿಯೇ ತನ್ನ ಅತ್ತೆಯ ಇಳಿವಯಸ್ಸಿನ ದೌರ್ಬಲ್ಯದಿಂದಾಗಿ ಪಟ್ಟವೇರಿದ ಮೇಲೆ ತನಗೆ ಸಹಜವಾಗಿ ಸಿಗಬೇಕಾಗಿದ್ದ ಪಟ್ಟಮಣೆ ಈಗ ಲೀಗ ದೊರೆಯಿತೆಂದು ಅವಳು ಉಬ್ಬಿದಳು. ಆದರೆ ಕೆಲವೇ ದಿನಗಳಲ್ಲಿ ಗೋವಿಂದನೂ ಹೇಳದೆ ಕೇಳದೆ ಮನೆಬಿಟ್ಟುದು ಮಾತ್ರವಲ್ಲ—ತುಂಗಮ್ಮನ ಹೊಸಮನೆ ಸೇರಿದ ಮೇಲೆ ಅವಳ ಪ್ರತಿಷ್ಟೆಗೆ ಕೊಂಚ ಕುಂದು ಬಂದಂತಾ ಯಿತು. ಆ ಮೋಲುಗಡೆ ಹೋಟೆಲಿನ ಸೀನಪ್ಪ—ಅವನ ತಂಗಿ ಗೌರಿ ಇದೇ ಪ್ರಕರಣವನ್ನು ದೊಡ್ಡದು ಮಾಡಿ ಅವಳನ್ನು ಅವಾಚ್ಯವಾಗಿ ಜರೆಯತೊಡ ಗಿದರು. ಕೆಲವು ದಿನಗಳ ತನಕ ರಾಮಿಗೆ ಅವರು ಹೊಕ್ಕಿದ ಕಡೆಯೆಲ್ಲಾ ತಿರುಗಿ ತಿರುಗಿ ಮರು ಉತ್ತರ ಹೇಳುತ್ತಾ ಬರುವುದೊಂದು ದೊಡ್ಡ ಕೆಲಸ ವಾಯಿತು—ಇನ್ನೇನು? ಕೆಲವೇ ದಿನಗಳಲ್ಲಿ, ಅವರೆಲ್ಲಾ ಬೇಸಾಯ ಬಿಟ್ಟು

ದಿಕ್ಕುಪಾಲಾಗಿ ಗತಿಗೆಟ್ಟು ಗಟ್ಟ ಸೇರುವರೆಂದು ತನ್ನ ಮನಸ್ಸಿನ ಕುದಿಯನ್ನು ಕಾರುತ್ತಾ ಬಂದಳು. ಆದರೆ ತುಂಗಮ್ಮನವರು ಗಟ್ಟ ಸೇರಲಿಲ್ಲ. ಹೆತ್ತು ಸುಖವಾಗಿ ಬಾಳಿಬರುವ ವರ್ತಮಾನ ಗೌರಿಯಿಂದಾಗಿ ಪ್ರಚಾರಗೊಂಡಿತು. ಮತ್ತೆ ಸ್ವಲ್ಪ ಸಮಯದ ಮೇಲೆ ಅವರು ಗಾಡಿ ಮಾಡಿ ಗೋವಿಂದ ಗಾಡಿಸಾಹುಕಾರನಾದ ಕತೆ ಸ್ವಾರಸ್ಯವಾಗಿ ಊರೆಲ್ಲಾ ಹಬ್ಬಿತು! ಏನೋ ಆ ಸೇರೆಗಾರರಿಗೆ ತುಂಗಮ್ಮ ಮಂಕುಬೂದಿ ಹಾಕಿ ಗಾಡಿಯನ್ನು ಹೊಡೆದು ಹಾಕಿಕೊಂಡಳು!—ಎಂದು ರಾಮಿ ಬೊಗಳತೊಡಗಿದಳು. ಅದರ ಹಿಂದೆಯೇ ಗೌರಿಯ ಘೋಷಣೆ ಹೊರಟಿತು—ಅಷ್ಟು ಸುಲಭವಾಗಿ ಯಾರಿಂದಾದರೂ ಗಾಡಿ ಹೊಡೆದು ಹಾಕುವುದು ಸಲೀಸಾದರೆ ನಮ್ಮ ರಾಮಿಯೂ ಹಿಂದೆ ಹೋಗುತಿದ್ದ ಗಿರಾಕಿಯಲ್ಲ!—

ಆ ಮೇಲೆ—ಈ ಮರ್ಯಾದೆ ಗೆಟ್ಟವರೆಲ್ಲ ಒಂದೇ ಪಾರ್ಟಿ—ಎಂದು ರಾಮಿ ಸುಮ್ಮನಾಗದೆ ಬೇರೆ ಉಪಾಯವಿಲ್ಲದಾಯಿತು!

ಆದರೆ ಮನಸ್ಸಿನ ಜ್ವಾಲಾಮುಖಿ ಇಷ್ಟರಿಂದಲೇ ತಣಿದು ಹೋಗುವುದಿಲ್ಲ. ಪೆರ್ಡೂರು ಜಾತ್ರೆಯ ದಿನ ತುಂಗಮ್ಮನವರೆಲ್ಲ ಮಗು ಹಿಡಿದುಕೊಂಡು ಗಾಡಿಹತ್ತಿ ಸವಾರಿಬಿಟ್ಟು ಉತ್ಸವಕ್ಕೆ ಬಂದ ಪರಿಯನ್ನು ನೋಡಿದ ಮೇಲೆ ಅವಳ ಆಂತರ್ಯದ ಬೆಂಕಿ ಬಲವತ್ತರವಾಗಿ ಮತ್ತೊಮ್ಮೆ ಮೇಲೆದ್ದಿತು. ಅವರನ್ನು ಕಾಣಲಾರದೆ ರಾಮಿಯು ಜಾತ್ರೆಗೂ ಬಹಿಷ್ಕಾರ ಹಾಕಿ ದುರದುರನೆ ಮನೆಗೆ ಬಂದು ಬಿಟ್ಟಳು. ಹಾಗೆ ಹಿಂದೆ ಬಂದು ತನ್ನಷ್ಟಕ್ಕೆ ಸುಮ್ಮನಿರುತಿದ್ದರೆ ಅದರಿಂದ ಪ್ರಪಂಚಕ್ಕೇನೂ ಹಾನಿಯಿರುತಿದ್ದಿಲ್ಲ. ಆದರೆ ಅವಳ ಸಣ್ಣ ಆತ್ಮದ ಮಷ್ಪ್ರವೃತ್ತಿಯು ತುಂಗಮ್ಮನವರಿಗೆ ಏನಾದರೊಂದು ತೆರದ ಕೇಡು ಬಗೆಯ ಬೇಕೆಂದೇ ಸಾರಿತು. ಆದರೆ ಅಷ್ಟು ದೂರದಲ್ಲಿ ಆ ಹೆಗ್ಗಡೆಯವರ ಆಶ್ರಯದಲ್ಲಿ ಸುಖವಾಗಿರುವ ಅವರ ಗೊಡವೆಗೆ ಹೋಗುವುದು ಕಷ್ಟಸಾಧ್ಯವಾದುದರಿಂದ ಅವರ ಕೂಟದ ಪ್ರಧಾನ ಮಂತ್ರಿಗಳಾದ ಗೌರಿ—ಸೀನಪ್ಪನವರಿಗೆ ಒಂದು ಗುಟುಕು ಕಷಾಯ ಕುಡಿಸಬೇಕೆಂದು ನಿರ್ಧರಿಸಿದಳು!

ಹೆಂಗುಸಿನ ಮನಸ್ಸು ಒಮ್ಮೆ ನೇರಮಾರ್ಗದಿಂದ ತಿರುಗಿ ಅಡ್ಡದಾರಿ ಹಿಡಿಯಿತೆಂದರೆ ಅದರ ಪರಿಣಾಮವು ಪರಿಪೂರ್ಣವಾಗುವನಕವೂ ಅವಳ

ಹೃದಯದ ನರನರಗಳು ಸ್ಪಷ್ಟವಾಗಿರುವುದಿಲ್ಲ. ಅಂತಹ ಆವೇಶದ ಸೆಳೆತ ವನ್ನು ಲಘುಗೊಳಿಸುವುದಕ್ಕಾಗಿ ಆಕೆ ಏನಾದರೊಂದು ಕೀಟಲೆಯ ಕಾರ್ಯದಲ್ಲಿ ಕೈಯಿಕ್ಕಲೇ ಬೇಕಾಗುವುದು. ಅಲ್ಲವಾದರೆ ಅಂತಹ ಆವೇಶ ಹಗಲೂ ರಾತ್ರಿ ಅವಳನ್ನೇ ತಿನ್ನತೊಡಗುವುದು. ಆದರೆ ಇಂತಹ ವಿಚಾರಗಳಲ್ಲಿ ತನ್ನ ಗಂಡ ತಂಕರನ ಮೆದುಳು ಸಾಲದಿರುವುದು ಸತ್ಯ! ಸೀನಪ್ಪನ ಕೂಡೆ ಕೈ ಮಾಡುವುದೆಂದರೆ ಅದು ಎಂದಿಗೂ ಸಾಗದ ಕೆಲಸ. ಊರ ಮಂದಿ ಎಲ್ಲಾ ಅವನ ಕಾಫಿ ಗಂಗರದ ಗುಲಾಮರಾಗಿ ಅವನ ಕಡೆಯೇ ಮಾಲಿನಡೆಯುತಿದ್ದಿತು. ಆದರೆ—

ಗಂಗರ ! —ಹೋ ! ಈಗಲೀಗ ಒಂದು ಯೋಚನೆ ಅವಳ ತಲೆ ಯಿಂದ ಹೊರಹೊಮ್ಮಿತು ! ಗಂಗರ ! ಸರಕಾರದವರು ಕಳಿಗಂಗರ ತಯಾ ರಿಸುವವರಿಗೆ ಅಂತೆಯೇ ಕುಡಿಯುವವರಿಗೂ ಶಿಕ್ಷೆಯನ್ನು ವಿಧಿಸುವರಂತೆ! ಅದಕ್ಕಾಗಿಯೇ ತಿಂಗಳಿಗೊಂದು ಬಾರಿ ಪೋಲೀಸು ಬಂದೋಬಸ್ತಿ ಊರ ಕಡೆ ಬಂದು ಹೋಗುವುದನ್ನು ಅವಳು ಹಲವು ವೇಳೆ ಸೊಪ್ಪು ಕೊಯ್ಯುವ ಸಮಯ ರಸ್ತೆಯ ಬದಿಯಲ್ಲಿ ಕಣ್ಣಾರೆ ಕಂಡಿರುವಳು. ಹಾಗಾದರೆ ಇದೇ ಚೆನ್ನಾದ ಮಾರ್ಗ ! ಸೀನಪ್ಪ ಗಂಗರ—ಶರಾಬು ತಯಾರಿಸುವಾತ. ಈ ವಿಚಾರ ಎಷ್ಟು ಮಾತ್ರಕ್ಕೂ ಸುಳ್ಳಲ್ಲ. ಅವನು ಪ್ರತಿ ಸೋಮವಾರ ಕೆಲಕೆಲವು ಬಾಟ್ಲಿಗಳನ್ನು ಸಂತೆಯ ಸರಕಿನ ಕೂಡೆ ಅಡಗಿಸಿಟ್ಟು ಕೆಲ ಕೆಲವು ಸಜ್ಜನರಿಗೆ ಸಲ್ಲಿಸುತಿದ್ದ ಸಂಗತಿಯೂ ಅಷ್ಟೇ ಸತ್ಯ ! ಹಾಗಾ ದರೆ ಸೋಮವಾರದ ಮುಂಚಿನ ದಿನ ಅವನ ಹೋಟೆಲಿಗೆ ಹೋದರೆ ಅಂತಹ ಬಾಟ್ಲಿಗಳು ಧಾರಾಳವಾಗಿ ಸಿಕ್ಕಲೇ ಬೇಕು ಎಂದ ಮೇಲೆ ಇದರಿಂದಾಗಿ ಅವನ ಶಾಸ್ತಿ ಯಾಗಲೇ ಬೇಕು ! ಭಲೆ ! --ಹೆಂಗಸಿನ ಬುದ್ಧಿ ಎಂದರೆ ಬುದ್ಧಿ !

ಮನಸ್ಸು ಮಾಡಿದರೆ ಹೆಂಗುಸಿನಿಂದ ಸಾಧಿಸಲಾಗದ ಕೆಲಸ ವಾವುದಿದೆ ? ಹೆಂಗುಸಿನಿಂದಲೇ ನಾಶ- ಸರ್ವನಾಶ--ಪ್ರಳಯವೇ ನಡೆದು ಹೋಗುವುದು. ಹಳ್ಳಿಯ ಹೆಂಗುಸಾದರೇನು! ಹೆಂಗುಸು ತಾನೆ? ರಾಮಿಯು ಅದಕ್ಕಾಗಿ ಟೊಂಕಕಟ್ಟಿದಳು—ತುಂಗಮ್ಮನ ಸಲುವಾಗಿ ಸೀನಪ್ಪನ ನಿಪಾ ತಕ್ಕಾಗಿ!

ಆದರೆ ಹೆಂಗುಸು ತಾನಾಗಿ ಮುಂದೊತ್ತಿ ಮಾಡಲಾಗದ ಹಲಕೆಲವು ಕೆಲಸಗಳು ಇದ್ದೇ ಇವೆ. ಅದಕ್ಕಾಗಿ ಗಂಡುಸನ್ನು ಹೊಂದಿಕೊಳ್ಳಲೇ ಬೇಕು. ಆ ದಿನ ಸೊಪ್ಪಿಗೆ ರಾಮಿಯು ತಾನೇ ಹೊರಟು ಗುಡ್ಡದಲ್ಲಿ ಗಂಡನನ್ನು ಕೂಡಿದಳು. ತನ್ನ ದ್ವೇಷದ ಮೂಲಸ್ವರೂಪವನ್ನು ತೋರಿಸಿ ಅದಕ್ಕೆ ಅವನಿಂದಾಗಬೇಕಾದ ಸಹಾಯವನ್ನು ಕೋರಿದಳು.

ಪಾಪ! ಈ ತನಕ ಯಾರೊಡನೆಯೂ ತುಟಿಯೆತ್ತಿ ಮಾತನಾಡದ ಅಥವಾ ಊರುಬಿಟ್ಟು ಯಾರೊಡನೆಯೂ ಬಳಕೆಯಿಟ್ಟುಕೊಳ್ಳದ ತಂಕರ ಏನು ತಾನೇ ಮಾಡಲಾಪ? ಆದರೂ ರಾಮಿಯು ಬಿಡಲೊಲ್ಲಳು! ಬಯಲಾಟದ ದ್ರೌಪದಿ ಭೀಮಣ್ಣನನ್ನು ಜರೆದು ಹುರಿದುಂಬಿಸಿದ ರೀತಿ ವಿನ್ಯಾಸ ವಿನ್ಯಾಸವಾಗಿ ಕಣ್ಣೀರು ತೋಡಿಕೊಂಡು ಅತ್ತಳು. ಮತ್ತೊಮ್ಮೆ ಗುಡುಗಾಡಿದಳು. ಅದು ತನ್ನ ಮಾತ್ರವಲ್ಲ ಅವರ ಮನೆತನದ—ಕುಲದ—ಅಥವಾ ಊರಿನ ಇನ್ನು ಹೆಚ್ಚು ಹೇಳಿದರೆ ದೇಶದ ಕೆಲಸ! ಅಬ್ಬಾ! ನಮ್ಮಂತಹ ದೊಡ್ಡ ಗೌರವದ ಸಾಗುವಳಿದಾರರ ಮುಂದೆ ಆ ಸೀನಪ್ಪ-ಆ ದಿಂಡೆ ಗೌರಿ - ತಮ್ಮ ಚೋಟಗಲದ ಗದ್ದೆಗಳನ್ನು ಹಿಡಿದುಕೊಂಡು ಈಗಲೀಗ ಒಂದು ಕಾಫಿ ಹೋಟೆಲಿನ ಮಹಾತ್ಮೆಯಿಂದಾಗಿ ಮುಖಭಂಗಿಸುವುದೆಂದರೇನು! ಆ ಮಾತುಗಳೋ!—ಬರೀ ಮಾತುಗಳಲ್ಲ! ಎದೆಗೆ ಹಿರಿಯುವ ಶೂಲಗಳು! ಅವುಗಳನ್ನೆಲ್ಲ ಕೇಳಿ ತಿಳಿದು ತಿಳಿದೂ ಈ ಗಂಡ ಕೈಯೆತ್ತುವುದಿಲ್ಲವೆಂದರೆ ಗಂಡಸರ ಕುಲಕ್ಕೆ ಅಪಮಾನ—ಧಿಕ್ಕಾರ!

ತಂಕರ ಮನಸ್ಸಿಲ್ಲದ ಮನಸ್ಸಿನಿಂದ ಕೊನೆಗೆ ತಾನೇನು ಮಾಡಬೇಕೆಂದು ಕೇಳಿದ. ಸೀನಪ್ಪನ ಸೊಂಟ ಮುರಿದು ಹಾಕೋಣವೆ?

ಛೆ! ಅದಾಗದು.

ಅವನ ಅಂಗಡಿಗೆ ಮಧ್ಯರಾತ್ರಿ ಬೆಂಕಿ ಹಾಕೋಣವೆ?

ನಾವೇ ದ್ವೇಷದವರೆಂದು ಜಗಜ್ಜನಿತ. ಹೀಗಿರುವಾಗ ಹಾಗೆ ಮಾಡುವುದು ಬರೀ ಹುಚ್ಚಾಟ!

ಹಾಗಾದರೆ ಏನು ಮಾಡಬೇಕು?

ಆ ಹೆಂಡ ಹಿಡಿಯುವವರಿದ್ದಾರಲ್ಲ—?

ನನಗೆ ಅವರ ಗುರುತು ಇಲ್ಲ.

ಮೀಸೆ ಹೊತ್ತ ಗಂಡಸರಿಗೆ ಮಾತಾಡಲು ಗುರುತುಗಿರುತು ಏಕೆ? ನೀವೇನು ನನ್ನ ಹಾಗೆ ಮೊಲೆ ಹೊತ್ತ ಹೆಂಗಸೆ?

ಆದರೆ ಅವರಿರುವುದೆಲ್ಲಿ?

ಏಕೆ? ಪೆರ್ಡೂರಿಗೆ ಜಾತ್ರೆಯ ಸಂಬಂಧ ಅವರ ಪಾಳ್ಯವೇ ಬಂದಿರ ಬಹುದು. ಅವರ ಕೋರೆ ಟೊಪ್ಪಿ ನೋಡಿದರೆ ಒಂದು ಚಿಕ್ಕ ಮಗುವಿಗೂ ಅರ್ಥ ವಾದೀತು. ಒಟ್ಟಾರೆ ನಿಮಗೆ ಮನಸ್ಸಿಲ್ಲ ಎಂತ ಹೇಳಿ!

ಹೀಗೆ ಹೇಳಿ ಹೇಳಿ ರಾಮಿ ಅವನನ್ನು ಬಿಸಿಯೇರಿಸಿ ಕಾವುಗೊಳಿಸಿ ದಳು. ತಂಕರ ತಲೆ ಬಿಸಿ ಮಾಡಿಕೊಂಡನೆಂದರೆ ಮತ್ತೆ ಹಂದಿಯ ರೀತಿ– ಆತ ಹೋದುದೇ ಮಾರ್ಗ!

ಆ ದಿನದ ಮಟ್ಟಿಗೆ ಅವನ ಅದೃಷ್ಟ ಮಾತ್ರ ಬಹಳ ಚೆನ್ನಾಗಿದ್ದಿತು. ಅಲ್ಲವಾದರೆ ಅವನು ತನ್ನ ಹೆಂಡತಿಯ ಕೈಯಿಂದ ಹೇಗೂ ಪಾರಾಗು ತಿರಲಿಲ್ಲ. ಆ ಕೋರೆ ಟೊಪ್ಪಿಯವರನ್ನು ಪೆರ್ಡೂರಿನ ಜಾತ್ರೆಯ ಸಂದಣಿ ಯಲ್ಲಿ ಹುಡುಕಿ ಮಾತಾಡುವುದೆಂದರೆ ಅದೇನು ಅಷ್ಟು ಸುಲಭದ ಕೆಲಸ ವಾಗಿದ್ದಿಲ್ಲ. ಈಗಿಂದೀಗ ಎಲ್ಲರ ಟೊಪ್ಪಿಗಳೂ ಯಾವ ಬಣ್ಣದವುಗಳೇ ಇರಲಿ ಅಂತೂ ಓರೆ ಕೋರೆಯಾಗಿರುವುದನ್ನು ಅವನು ಕಂಡಿದ್ದ. ಆದು ದರಿಂದ ಈ ಪ್ರಸಂಗದಿಂದ ಹೇಗೆ ಮರ್ಯಾದೆ ಉಳಿಸಿಕೊಂಡು ಗಂಡಸು ಎಂಬುದಾಗಿ ಹೇಳಿಸಿಕೊಳ್ಳುವುದೆಂದು ಗುಣಾಕಾರ ಹಾಕುತಿದ್ದಾಗಲೇ ಅವರ ಮುಂದಿನ ರಸ್ತೆಯಲ್ಲಿ ಇಬ್ಬರು ಅದೇ ಕೋರೆ ಟೊಪ್ಪಿಯವರು ಸೈಕಲು ಹತ್ತಿ ಪಟೇಲರಲ್ಲಿ ಬೀಟಿನ ಪುಸ್ತಕಕ್ಕೆ ದಸ್ಕತು ಹಾಕುವ ಬಗ್ಗೆ ಹೋಗುತಿದ್ದರು. ರಾಮಿ ಹೌಹಾರಿ -ಅದೋ ನೋಡಿ! ಹೆಂಗಸಿನ ಗೋಳು ದೇವರಿಗೆ ಸಹ ಕೇಳಿಸುತ್ತದೆ! ನಾವು ನಮ್ಮ ಸತ್ಯದಲ್ಲಿದ್ದರೆ ದೇವರು ಕೈಬಿಡುವುದಿಲ್ಲ. ಅದಕ್ಕೆ ಇದೇ ದೃಷ್ಟಾಂತ––ಎಂದಳು.

ಹೀಗೆ ಏಟುಲಾಟದ ದ್ರೌಪದಿಯಂತೆ—ಎಂದವ ಈ ಹೊತ್ತಿಗೆ ತಾನು ದ್ರೌಪದಿಯ ಅಪರಾವತಾರವೆಂದೇ ರಾಮಿ ಗ್ರಹಿಸತೊಡಗಿದಳು—

ಅವಳು ಅಭಿನಯವಾಗಿ ಕೈನೀಡುವುದೂ ಆ ಇಬ್ಬರು ಸವಾರರು ಮುಂದೆ ಬರುವುದೂ ಸರಿಯಾಗಿ ಅವರಲ್ಲೇ ಕೆಳಗಿಳಿದು ಏನೋ ವಿಶೇಷವಿರಬಹು ದೆಂದು ಇವರಬಳಿ ಬಂದರು.

ಏನು ನಮ್ಮ ಕಡೆ ಕೈತೋರಿಸುತ್ತಾಯಿದ್ದಿರಿ?

ನಾವೀಗ ನಿಮ್ಮ ವಿಚಾರವೇ ಮಾತಾಡುತ್ತಾಯಿದ್ದುದು—ಎಂದಳು ರಾಮಿ.

ಏಕೆ? ಏನು ವಿಶೇಷ?

ನೀವು ಕಳಿ ಗಂಗರ ಹಿಡಿಯುವವರಲ್ಲವೆ?

ಹೌದು. ಏನಾದರೂ ಇಲ್ಲಿ ಬಾಟ್ಲಿ ಗೀಟ್ಲಿಯಿದೆಯೇ?

ಇನ್ನು ಮುಂದಕ್ಕೆ ತನ್ನ ಗಂಡ ಮಾತು ಮುಂದರಿಸಬೇಕೆಂದು ರಾಮಿ ಅವನ ಕಡೆ ನೋಡಿ ಕಣ್ಣು ಸನ್ನೆ ಮಾಡಿದಳು. ಆದರೆ ಆ ಪುಣ್ಯಾತ್ಮ ಈ ಇಬ್ಬರನ್ನು ಕಂಡಾಗಿನಿಂದ ಕಣ್ಣು ತೆರೆಯದೆಯೇ ಇದ್ದುದರಿಂದ ಅವಳ ಸನ್ನೆ ವಗೈರೆ ಸೊನ್ನೆಯಾಯಿತೇ ಹೊರತು ಅವಗಾಹನೆಗೆ ಬರಲಿಲ್ಲ. ಆದು ದರಿಂದ ಅವಳೇ ಸೆರಗು ಬಿಗಿದು ಹೇಳಿದಳು—ನೋಡಿ ನಮ್ಮಲ್ಲಿ ಬಹಳ ಅನ್ಯಾಯ ನಡೆಯುತ್ತದೆ. ಯಾರೂ ಕೇಳುವುದಿಲ್ಲ!

ಯಾಕೆ? ಪಟೇಲರ ಕೂಡೆ ತಿಳಿಸಿ ರಿಪೋರ್ಟು ಬರೆಯಿಸಬಹುದಲ್ಲ?

ಅದೆಲ್ಲಾ ಗುಟ್ಟು ಬಿಟ್ಟರೆ ಆಗುವಂತ ಕೆಲಸವಲ್ಲ. ನೀವೇ ಸ್ವತಹ ಬಂದು ಮಾಡಬೇಕು.

ಪ್ರೊಹಿಬಿಶನಿನವರು ಮುಖ ಮುಖ ನೋಡಿಕೊಂಡು ಕೊನೆಗೆ—ಏನದು? ಎಂದು ಕೇಳಿದರು.

ಆಗಲೂ ತಂಕರನಿಂದ ಏನೂ ಸಹಾಯ ಮುಂಬಾರದಿರುವುದರಿಂದ ರಾಮಿಯೇ ಮುಂಬರಿಸಿದಳು.

ನೀವು ಈಗ ಬರುವಾಗ ಅಲ್ಲಿ ಆ ಹೋಟೆಲುದಾಟಿ ಬಂದಿರಲ್ಲ?

ಹೌದು.

ಅಲ್ಲೇ ಭಾರೀ ಕಿತಾಪತಿ ನಡೆಯುತ್ತದೆ!

ಹೇಗೆ ಗೊತ್ತು? ನೀವು ಹೋಗಿ ನೋಡಿದ್ದೀರಾ?

ರಾಮಿ ಒಮ್ಮೆ ಹೌದು ಎಂದಳು. ಕೊನೆಗೆ ನಾಲಿಗೆ ಕಚ್ಚಿಕೊಂಡು ಹಾಗಲ್ಲ—ನಾವು ಹೇಗೆ ನೋಡಬೇಕು? ದೇವರಾಣೆ ನಮಗೇನೂ ಕುಡಿಯುವ ಅಭ್ಯಾಸವಿಲ್ಲ. ಹಾಗಿದ್ದರೆ ನಾವೇ ಬಂದು ನಿಮ್ಮ ಕೂಡೆ ಹೇಳುತಿದ್ದೆವೆ?—ಎಂದು ತಿದ್ದುಪಡಿ ಒಪ್ಪಿಸಿದಳು.

ಇಬ್ಬರು ಪೋಲೀಸರು ತಮ್ಮ ತಮ್ಮೊಳಗೆ ಗುಸು ಗುಸು ಹೇಳಿಕೊಂಡರು—ಈ ಪೆಣ್ಣು ಭಲೇ ಹುಷಾರ್!

ಹಾಗಾದರೆ ನಿಮಗೆ ಹೇಗೆ ಗೊತ್ತು?

ಇಡೀ ಊರಿಗೇ ಗೊತ್ತುಂಟು. ರಾತ್ರಿ ಹೊತ್ತು ಅಲ್ಲಿಯ ಗಲಾಟೆ ಕೇಳಿದರೆ ಸಾಕೋ ಸಾಕು!

ಆ ಇಬ್ಬರ ಪೈಕಿ ಒಬ್ಬ ಮಲೆಯಾಳಿ ಕೊಂಚ ನಾಜೂಕಾಗಿ ಹೇಳಿದ. ಹೌದಮ್ಮಣ್ಣಿ. ನೀವು ಹೇಳುವುದು ಶರಿ. ಆದರೆ ನಮಗೆ ಹಿಡಿಯಲಿಕ್ಕೆ ಬರಬೇಕಾದರೆ ಅದರಲ್ಲೂ ನಮ್ಮ ಇನ್ಸಪೆಕ್ಟರರು ಬರಬೇಕಾದರಂತೂ ದಾಖ್ಲೆ ಬೇಕು! ಇಲ್ಲವಾದರೆ ನಾವೆಲ್ಲಾ ಬಂದು ಹೇಸಿಗೆಯಾದೀತು.

ಅದರ ಹೆದರಿಕೆ ನಿಮಗೆ ಬೇಡ. ಏಕೆ? ನಾಡದು ಸೋಮವಾರ ತಾನೆ? ಎಂದರೆ ನಾಳೆ ರಾತ್ರೆಯೇ ಬಂದರೆ ಸಿಕ್ಕುವುದರಲ್ಲಿ ಸಂಶಯವೇ ಯಿಲ್ಲ. ಅದೆಲ್ಲ ಮರುದಿನ ಸಂತೆಗೆ ಸಾಗುತ್ತದೆ.

ಮತ್ತೊಬ್ಬ ಕೇಳಿದ—ಸರಿ. ನಿಮಗೇನಾದರೂ ಅವನ ಮೇಲೆ ದ್ವೇಷವಿದೆಯೇ?

ಛೆ ಛೆ! ಅವ ನಮ್ಮ ಜಾತಿ ಮಗ!

ಜಾತಿಗೆ ಜಾತಿ ಪಗೆ—ನಾಯಿಗೆ ನಾಯಿಪಗೆ!—ಎಂದನು ಮಲೆಯಾಳಿ.

ಆದರೂ ಚಿಂತಿಲ್ಲ. ನಮ್ಮ ಇನ್ಸಪೆಕ್ಟರರು ಈಗ ಪೆರ್ದೂರಲ್ಲೇ ಇದ್ದಾರೆ. ನಾಳೆಯೂ ಇದ್ದಾರೆ. ನೀವೆಲ್ಲ ನಾಳೆ ಇಲ್ಲಿಯ ಸಂಗತಿ ತಿಳಿದು ಸಂಜೆ ನಮಗೆ ವರ್ತಮಾನ ಕಳುಹಿಸಿಕೊಡಿರಿ. ಆ ಮೇಲೆ ನಾವೆಲ್ಲ ಬರುತ್ತೇವೆ. ನೀನೂ ಇರಬೇಕು!—ಎಂದು ಮಲೆಯಾಳಿ ಪೋಲೀಸು ಒತ್ತಿ ಹೇಳಿದನು.

ರಾಮಿ ಒಪ್ಪಿಕೊಂಡಳು. ತನ್ನ ಗಂಡನನ್ನು ನಾಳೆ ಕಳುಹಿಸುವುದಾಗಿ ಹೇಳಿದಳು.

ಯಾರು? ಈ ಆಳು ನಿನ್ನ ಗಂಡ? ಪಾಪ!---ಎಂದನು ಮಲೆಯಾಳಿ ಹುಬ್ಬುಹಾರಿಸುತ್ತ.

ಅಲ್ಲಿಗೆ ಪೀಠಿಗೆ ಮುಗಿದಂತಾಯಿತು. ಕೊಡಲಿಗೆ ಕೈಸೇರಿಸಿ ಚೆನ್ನಾಗಿ ಮಸೆದಂತಾಯಿತು. ಇನ್ನು ಅದನ್ನು ಸರಿಯಾಗಿ ಗುರಿನೋಡಿ ಬೀಸುವುದು ಮಾತ್ರ ಬಾಕಿ. ಮತ್ತೆ ಹಾರಬೇಕು ಸೀನಪ್ಪನ ರುಂಡ!

ಪ್ರೊಹಿಬಿಶನಿನವರು ಹೊರಟುಹೋಗುತ್ತ ಆ ಮಲೆಯಾಳಿ ಮತ್ತೊಮ್ಮೆ ಕಣ್ಣು ಮಿಟುಕಿಸಿ—ಅಮ್ಮಣ್ಣಿ! ನಾಳೆ ಖಂಡಿತಾ ಬರುತ್ತೇನೆ. ನೀನು ಇರಬೇಕು—ಎಂದನು.

ಅವರು ಹೋದಮೇಲೆ ತಂಕರ ಉಸಿರು ತೆಗೆದು ಅಸೂಯೆಯಿಂದ—ಹಾಗೆಂದರೇನು?— ಎಂದನು.

ಹಾಗೆಂದರೆ ಅದೆ! ಇಷ್ಟುಹೊತ್ತು ನಾಲಗೆಯೇ ಅಲ್ಲಾಡಲಿಲ್ಲ. ಈಗ ಜೀವಬಂದಾಗ ಹಾಗೆಂದರೇನು ಎಂತ ಕೇಳಲಿಕ್ಕೆ ಶುರುಮಾಡಿದಿರಿ. ನಾಚಿಕೆ! ಎಂದು ರಾಮಿ ಸಿಡುಕಿನಿಂದ ಮುಖ ತಿರುಗಿಸಿದಳು.

ತಂಕರ ತಣ್ಣಗಾದ. ನಾಳೆ ಸಂಜೆ ಸೀನಪ್ಪನ ಪರಿಸ್ಥಿತಿ ತಿಳಿದು ಪೆರ್ಮ್ಲಿಗೆ ಹೋಗಲೂ ಒಪ್ಪಿಕೊಂಡನು. ಮತ್ತೆ ಇದೆಲ್ಲ ಸಮಗಟ್ಟಾದರೆ ದೇವರಿಗೆ ಸಾವಿರ ಹಣ್ಣಿನ ಹರಕೆಯನ್ನು ರಾಮಿ ಹೇಳಿಕೊಂಡಳು!

ಆ ರಾತ್ರಿ ಅವರಿಬ್ಬರೂ ಏನೋ ಮಹತ್ಕಾರ್ಯವನ್ನು ಸಾಧಿಸಲು ಹೊರಟವರಂತೆ ತೀರಾ ಮೌನವಾಗಿದ್ದರು. ಮರುದಿನ ರಾಮಿ ಸೀನಪ್ಪನ ಹೋಟೆಲಿಗೆ ನಾಲ್ಕು ನಾಲ್ಕು ಸುತ್ತು ಬಂದಳು. ತಂಕರ ಬೆಳಿಗ್ಗೆ ಮುಂಚೆ ಅದರ ಇದಿರುಗಡೆಯ ಒಂದು ದೊಡ್ಡ ಬಂಡೆಯ ಕಿನಾರೆಯ ಮೇಲೆ ಅಡಗಿ ಕಾದು ಕುಳಿತು ನೋಡುತಿದ್ದನು. ಈ ವಿಚಾರವಾವುದನ್ನು ಮನೆಯವರಿಗೆ ತಿಳಿಸಲಿಲ್ಲ. ಆ ಹರಕು ಬಾಯಿಯ ಹಳ್ಳಿಯ ಜನರೊಡನೆ ಹೇಳಲೇ ಬಾರದೆಂದು ರಾಮಿ ಖಡ್ಡಾಯವಾಗಿ ಆಣೆ ಹಾಕಿದ್ದಳು. ಕೆಲಸ ಕೆಟ್ಟತೆಂ

ದರೆ ಸೀನಪ್ಪ ಗೌರಿಯವರೊಡನೆ ಮತ್ತಷ್ಟು ಹಗೆ ಕಟ್ಟಿಕೊಂಡು ಕೆಲಸ ಹೊಲಸಾದೀತು. ಆದುದರಿಂದ ಬೆಕ್ಕಿನಂತೆ ಬಹಳ ಜಾಗ್ರತೆಯಿಂದ ಪ್ರತಿ ಹೆಜ್ಜೆಯನ್ನು ಇಡುತ್ತ ಬಂದರು.

ಆ ದಿನ ಮಧ್ಯಾಹ್ನದ ಮೇಲೆ ಸೀನಪ್ಪ ಹೋಟೆಲಿನಲ್ಲಿ ಹೆಚ್ಚಿಗೆ ಇರಲಿಲ್ಲ. ಅವನ ತಮ್ಮ ಕಾಫಿತಯಾರಿಸುತಿದ್ದ. ಮತ್ತೆ ನಾಲ್ಕು ಗಂಟೆಗೆ ಬಂದವ ಪುನ: ಹೊರಟುಹೋದ. ಈ ಎಲ್ಲಾ ಆವಕ ಜಾವಕಗಳು ಶರಾಬು ತಯಾರಿಕೆಯ ಪೂರ್ವ ಸನ್ನಾಹವೆಂದು ರಾಮಿ ಗಂಡನೊಡನೆ ಹೇಳಿ ಹುರಿದುಂಬಿಸಿದಳು. ಮತ್ತೆ ಆರು ಗಂಟೆ ಸಂಜೆಗೆ ಪುನಃ ಬಂದು ಹೋಟೆಲು ಸೇರಿದನು.

ಮುಸ್ಸಂಜೆಯ ಮಬ್ಬು ಮೆಲ್ಲ ಮೆಲ್ಲನೆ ಮೂಡುದಿಕ್ಕಿನಿಂದ ಮೇಲೆ ಹರಡುತ್ತ ಬಂದಿತು. ಹೋಟೆಲಿಗೆ ಬಂದು ಹೋಗುವವರ ಗುರುತು ಹಿಡಿಯುವುದು ಕಷ್ಟವಾಯಿತು. ಕೆಲಕೆಲ ಜನರು ಹಿಂಗಡೆಯಿಂದ ಬಂದು ಸೇರಿದರು. ನಂತರ ಬಹಳ ಗದ್ದಲ ಕೇಳತೊಡಗಿತು.—ಈಗ ತೊಡಗಿತು. ಗಂಗರದ ಮಹಾತ್ಮೆ! ಎಂದು ರಾಮಿ ಹುರಿಗೊಂಡಳು. ಯಾವನೋ ಒಬ್ಬ ಹಳಬನಿರಬೇಕು—ಬಹಳ ಜೋರಿನಿಂದ ಪಾಡ್ದನ ಹೇಳಿ ಹೇಳಿ ಬೊಬ್ಬೆ ಹೊಡೆಯುತಿದ್ದನು. ಆತ ದೀಪಕ್ಕೆ ಅಡ್ಡವಾಗಿ ಕುಳಿತಿದ್ದುದರಿಂದ ಅವನ ಪರಿಚಯವಾಗುವಂತಿದ್ದಿಲ್ಲ. ಅಥವಾ ಅವರೆಲ್ಲರೂ ಬೇಕೆಂದೇ ಬೆಳಕು ಬೀಳದ ಮೂಲೆಯನ್ನೆ ಆಶ್ರಯಿಸಿದ್ದುದರಿಂದ ಯಾರು ಯಾರೆಂದು ಹೇಳಲು ಸಾಧ್ಯವಿರಲಿಲ್ಲ. ಯಾರಾದರೇನು? ಈ ದಿನವಂತೂ ಸೀನಪ್ಪನ ಮೀಸೆಯ ಕುಡಿ ಕೆಳಗಿಳಿದು ರಾಮಿಯ ಜಯಪತಾಕೆ ಮೇಲೇಳಲೇ ಬೇಕು! ಅದಕ್ಕನುಕೂಲವಾಗಿಯೇ ಎಲ್ಲಾ ಸಂದರ್ಭಗಳೂ ಕೂಡಿ ಬಂದಂತಿದ್ದಿತು.

ರಾಮಿ ಗಂಡನನ್ನು ಪೆಡ್ಡೂರಿಗೆ ಓಡಿಸಿದಳು. ಅರ್ಧ ಗಂಟೆಯೊಳಗೆ ಪೋಲೀಸರನ್ನು ಹೊರಡಿಸಿಕೊಂಡು ಬರಬೇಕೆಂದು ಕಟ್ಟಪ್ಪಣೆ ಕೊಟ್ಟಳು. ಆತನಕ ತಾನೇ ಇದಿರುಗಡೆ ಬಂಡೆಯ ಮೇಲೆ ಕಾವಲು ಕುಳಿತಿರುವೆನೆಂದೂ

ಪೋಲೀಸಿನವರು ಸದ್ದಿಲ್ಲದೆ ಬಂದು ಮುತ್ತಿಗೆ ಹಾಕಬೇಕೆಂದೂ ಸೂಚಿಸಿದಳು.

ತಂಕರ ಅಂಕೆಯಿಲ್ಲದೆ ಲಂಕೆಗೆ ಹಾರಿದ ಕಲಿ ಹನುಮನಂತೆ ಒಂದೇ ನೆಗೆತಕ್ಕೆ ಹೊಳೆಯನ್ನು ಧೀಂಕಿಟ್ಟು ಓಡಿ ಓಡಿಹೋದನು. ಆ ಮಲೆಯಾಳೀ ಪೋಲೀಸು ಇವನ ಬರವನ್ನೇ ಕಾದುಕುಳಿತಿದ್ದನೋ ಏನೊ! ಇವನನ್ನು ಇನ್ಸಪೆಕ್ಟರ ಬಳಿ ಕರೆದುಕೊಂಡು ಹೋದನು. ಇವನಿಂದ ಏನೋ ಒಂದು ವಾಗ್ಮೂಲವಾಯಿತು,ಅದಕ್ಕೆ ಇವನ ಎಡ ಹೆಬ್ಬೆಟ್ಟಿನ ಮುದ್ರೆಬಿದ್ದಿತು.

ಇನ್ಸಪೆಕ್ಟರರು ಕೇಳಿದರು—ಏನು? ಎಲ್ಲಾ ಸರಿಯಾಗಿದೆಯೆ?

ಹೌದು ಸ್ವಾಮಿ! ನಾನೀಗ ನೇರವಾಗಿ ಅಲ್ಲಿಂದ ಓಡಿಯೋಡಿ ಬಂದೆ.

ಇನ್ಸಪೆಕ್ಟರರು ಕೈಗಡಿಯಾರನೋಡಿ ತನ್ನ ಪರಿವಾರದೊಡನೆ ಜೀಪ್ ಗಾಡಿಹತ್ತಿದರು. ತಂಕರನೂ ಇವರೊಡನೆ ಏರಿಕುಳಿತನು.

ಹತ್ತೇ ಹತ್ತು ಮಿನಿಟಿನಲ್ಲಿ ಮೋಟರುಬಂಡಿ ಬುಸುಗುಟ್ಟುತ್ತ ಬಂದು ಸೀನಪ್ಪನ ಹೋಟೆಲಿನಿಂದ ಅರ್ಧ-ಮೈಲು ದೂರದಲ್ಲಿ ನಿಂತಿತು. ದೂರದಿಂದಲೇ ಅದರ ಬೆಳಕಿನ ಹೊಳಪು ಕಂಡು ರಾಮಿ ತನ್ನ ಭಾಗ್ಯೋದಯವಾಯಿತೆಂದು ಉಬ್ಬಿದಳು. ಮತ್ತೆ ಹತ್ತೇ ಮಿನಿಟಿನಲ್ಲಿ ಪೋಲೀಸರ ದಂಡು ಸದ್ದಿಲ್ಲದೆ ಬಂದುಸೇರಿತು.

ತಂಕರನೊಡನೆ ಮಲೆಯಾಳೀ ಪೋಲೀಸು ರಾಮಿಯ ಬಳಿ ಬಂದು—ಎಲ್ಲಾ ಶರಿಯಿದೆಯಲ್ಲ? ಎಂದು ಮೆಲ್ಲನೆ ಕೇಳಿದನು.

ಹೌದು. ಈ ತನಕವೂ ನಾನು ಇಲ್ಲೇ ಕಾದಿದ್ದೆ. ಒಳಗಡೆ ಐದಾರು ಜನರು ಇದ್ದ ಹಾಗೆ ಕಾಣುತ್ತದೆ—ಎಂದಳು ರಾಮಿ.

ನಮುಕು ಗೊತ್ತುಂಡು. ನೀನು ಹುಷಾರ್ ಪೆಣ್ಣು! ಈ ಗಂಡನ ಹಾಗಲ್ಲ!—ಎಂದು ಮಲೆಯಾಳಿ ತಂಕರನ ಕಡೆ ನೋಡಿ ಬಾ—ಇನ್ಸಪೆಕ್ಟರಿಗೆ ಹೇಳೋಣ. ನಮುಕೆಲ್ಲಾ ಇಲ್ಲಿನ ಕಾಡಿನ ಮಾರ್ಗ ತೆರಿಯುಮು—ಎಂದು ಆ ಕಡೆ ಕರೆದುಕೊಂಡು ಹೋದನು.

ಮತ್ತೆ ಐದು ನಿಮಿಷ ಏನೂ ಕೇಳಿ ಬರಲಿಲ್ಲ. ಹುಲಿಯು ಬೇಟೆಯನ್ನು ಸುತ್ತುಗಟ್ಟುವ ರೀತಿ ಎಲ್ಲವೂ ಸದ್ದಿಲ್ಲದೆ ನಡೆಯುತಿರುವಂತೆ ಕಂಡು ಬಂದಿತು. ಆ ಒಂದೊಂದು ನಿಮಿಷವೂ ರಾಮಿಗೆ ಒಂದೊಂದು ಯುಗವಾಗಿ ಕಾಣಿಸತೊಡಗಿತು. ಹೋಟೆಲಿನ ಒಳಗಡೆ ಮಾತ್ರ ಒಬ್ಬ ಹಳಬನ ಪಾಡ್ದನವಂತೂ ತಾರಕ ಸ್ವರದಲ್ಲಿ ನಡೆದೇಯಿದ್ದಿತು!

ರಾಮಿಯ ಹಿಂಗಡೆ ಪರ ಪರ ಸದ್ದಾಯಿತು. ಬೆಚ್ಚರಗೊಂಡು ತಿರುಗಿ ನೋಡಿದಳು. ಕತ್ತಲಲ್ಲಿ ಏನೂ ಕಾಣುತಿರಲಿಲ್ಲ.

ನಿನಕು ಹೆದರಿಕೆಯಾಗುತ್ತದಂತ ನಾನು ಇಲ್ಲಿಗೆ ಬಂದೆ—ಎಂದನು ಮಲೆಯಾಳಿ.

ಆತನು ಹಾಗೆ ಹೇಳಿದ ಮೇಲೆ ಅವಳಿಗೆ ತುಸು ಮೈ ನಡುಕ ಬಂದು ಹೆದರಿಕೆಯಾಯಿತು!

ಯಾಕೆ? ನೀವು ಅಲ್ಲಿಗೆ ಹೋಗುವುದಿಲ್ಲವೆ?

ಅವುಡೆ ಬೇಕಾದಷ್ಟು ಜನ ಉಂಡು. ನಾನು ನಿನ್ನನ್ನು ನೋಡಿಕೊಳ್ಳಲಿಕೆಬಂದೆ—!–ಅವನ ಕಣ್ಣಿನಲ್ಲಿದ್ದ ಕಾಮದ ಕಾವು ಆ ಕತ್ತಲಲ್ಲೂ ಕೆಂಪಾಗಿ ಮಿನುಗುತಿದ್ದಿತು!

ರಾಮಿ ಮಾತನಾಡಲಿಲ್ಲ. ಸ್ವಲ್ಪ ಹೊತ್ತಿನ ನಂತರ ಅವಳ ಎದೆಯ ಚೌಗಟ್ಟಿನ ಮೇಲೆ ಏನೋ ಬಂದು ಕುಳಿತಿತು. ಅದು ಅವನ ಕೈ!

ರಾಮಿಗೆ ಏನು ಮಾಡಬೇಕೆಂದು ಗೋಚರವಾಗಲಿಲ್ಲ. ಕೂಗಿಕೊಳ್ಳಬೇಕೆಂದು ಬಾಯ್ದೆರೆದಳು. ಆದರೆ ಆ ಪಕ್ಕಾ ಮಲೆಯಾಳಿಯು—ಜಾಗ್ರತೆ! ಬೊಬ್ಬೆ ಹೊಡೆದರೆ ನಮ್ಮ ಎಲ್ಲ ಕೆಲಸ ಹಾಳಾದೀತು. ಮತ್ತೆ ಇನ್ಸ್ಪೆಕ್ಟರಿಗೆ ಕೋಪಬಂದರೆ ನಿಮ್ಮ ತಂಕರನನ್ನೇ ಎರೆಸ್ಟು ಮಾಡಿ ಕೊಂಡು ಹೋದಾರು!

ರಾಮಿಯ ಬೊಬ್ಬೆ ಉಸಿರು ಹಿಡಿದಂತೆ ಗಂಟಲಿನಿಂದ ಹೊರಹೊರಡಲಿಲ್ಲ. ಆದರೆ ಆ ಕತ್ತಲಿನಲ್ಲಿ ಮಳೆಯಾಳಿಯ ಪಿಕಲಾಟವೂ ನಿಲ್ಲಲಿಲ್ಲ! ನೀನು ನಲ್ಲೆಪೆಣ್ಣು! ನಮುಕು ನಲ್ಲೆಪೆಣ್ಣು ಇಷ್ಟ!—ಎಂದು ಆತನು ಅವಳನ್ನು ಬಲಾತ್ಕಾರವಾಗಿ ಬಿಗಿಹಿಡಿದು—

ರಾಮಿ ತನ್ನ ಧೃತಿ ನಿರ್ಧಾರಗಳನ್ನೆಲ್ಲ ಒತ್ತಟ್ಟಿಗೆ ಕೂಡಹಾಕಿ—ಅಯ್ಯೋ—ಎಂದು ಕೂಗಿಕೊಂಡಳು. ಅವಳ ಕೂಗಿನ ಅಪಸ್ವರ ಆ ಕಗ್ಗತ್ತಲಲ್ಲಿ ಭಯಂಕರವಾಗಿ ಕೇಳಿಸಿತು!

ಸೀನಪ್ಪನ ಹೋಟಿಲನ್ನು ಸುತ್ತುಗಟ್ಟಿ ಮುನ್ನುಗ್ಗಬೇಕೆಂದು ಇನ್ಸಪೆಕ್ಟರರು ಹವಣಿಸಿದ ವೇಳೆಯೂ ಈ ಕೂಗಿನ ವೇಳೆಯೂ ಒಂದೇ ಬಾರಿಗೆ ಕೂಡಿಬಂದುದರಿಂದ ಹೋಟಲಿನ ಒಳಗಡೆ ಅಡಗಿದ್ದ ಕುಡುಕರೆಲ್ಲಾ ಒಮ್ಮಿಂದೊಮ್ಮೆಗೆ ಚೇತನಗೊಂಡು ಸಿಕ್ಕಕಡೆ ಹಾರಿ ಹಾರಿ ಓಡಿಬಿಟ್ಟರು. ಹಳ್ಳಿಯ ಕಾಡುಕರೆಯಲ್ಲೇ ಹುಟ್ಟಬೆಳೆದ ಅವರಿಗೆ ಕತ್ತಲೇನು ಬೆಳಕೇನು? ಪೋಲೀಸುದಾಳಿ ನಡೆದಹೊತ್ತಿಗೆ ಹೋಟಿಲಿನಲ್ಲಿ ಪಾಡ್ದನ ಹೇಳುತಿದ್ದ ಮುದುಕನೊಬ್ಬನ ಹೊರತು ಮತ್ತೆಲ್ಲರೂ ಪರಾರಿಯಾಗಿದ್ದರು! ಆದರೂ ಒಂದು ಬೇಟೆ ಸಿಕ್ಕಿತಲ್ಲಾ — ಸಾಕು!

ಇನ್ಸಪೆಕ್ಟರರು ಇಷ್ಟುಜಾಗ್ರತೆಯಿಂದ ಕೈಗೂಡಿಸಿಕೊಂಡ ಕೆಲಸ ಹಠಾತ್ತಾಗಿ ಹೀಗೆ ಕೆಟ್ಟುಹೋಯಿತಲ್ಲ — ಎಂಬ ಗರ್ವದಿಂದ ಆ ಮುದುಕನ ಕೈಹಿಡಿದೆಳೆದು ಮುಖಕ್ಕೆ ಲೈಟುಹಾಕಿ ತಂಕರನ ಕಡೆ ತಿರುಗಿ ಕೇಳಿದರು - ಇವನು ಯಾರು?

ತಂಕರ ಮುಖಮುಖನೋಡಿದ. ಈ ತನಕ ಕಾವುಕೊಟ್ಟು ಮಸೆದು ಬೀಸಿದ ಕೈಕೊಡಲಿ ಹದತಪ್ಪಿ ಕಾಲಮೇಲೆಯೇ ಜಾರಿಬಿದ್ದಂತಾಯಿತು!

ಅವನು ಉಸ್ಸೆಂದು ನಿಟ್ಟುಸಿರು ಬಿಟ್ಟ!

ಅದು ಗುರಿಕಾರ ಲಕ್ಕಣ್ಣ!

ತಂಕರನಿಗೆ ಅಲ್ಲಿ ನಿಲ್ಲಬೇಕೋ ಓಡಿಹೋಗಬೇಕೋ ಎಂದು ತಿಳಿಯಲಿಲ್ಲ. ಅಷ್ಟು ಪೋಲೀಸರು ಸುತ್ತುಗಟ್ಟಿ ಇನ್ಸಪೆಕ್ಟರರು ದೈತ್ಯನ ಹಾಗೆ ಇದಿರುಗಡೆ ನಿಂತಿರದಿದ್ದರೆ ಅವನು ನಿಜವಾಗಿಯೂ ನಾಗಾಲೋಟ ಕಿತ್ತು ಬಿಡುತಿದ್ದನು!

ಇನ್ಸಪೆಕ್ಟರರು ಮತ್ತೊಮ್ಮೆ ಗರ್ಜಿಸಿದರು—

ಇವ ಯಾರು?

ತಂಕರ ಮೆಲ್ಲಮೆಲ್ಲನೆ ಹೇಳಿದ—ನನ್ನ ಮಾವ—

ಏನು ನಿನ್ನ ಮಾವ? ಹಾಗಾದರೆ ಅಯ್ಯೋ ಎಂತ ಬೊಬ್ಬೆ ಹಾಕಿದವ ನೀನೇ—ಬದ್‌ಮಾಶ್!—ಅವರ ಕಣ್ಣು ಕಿಡಿಕಿಡಿಯಾಗಿ ಬೆಂಕಿಕಾರುತಿದ್ದಿತು!

ತಂಕರನ ಗಂಟಲು ಆರಿಹೋಯಿತು—ಅಲ್ಲ ಸ್ವಾಮಿ ನಾನಲ್ಲ—ದಮ್ಮಯ್ಯ ನಾನಲ್ಲ!—

ಆಗ ಮಲೆಯಾಳಿ ಪೋಲೀಸು ಮೆಲ್ಲನೆ ಮುಖ ಹಾಕಿ ಬಂದು—ಅಲ್ಲ ಸಾರ್. ಅದು ಈ ಆಳಲ್ಲ. ಅದು ಪೆಣ್ಣು ಸ್ವರ. ಯಾರೋ ಬೇರೆ ಆಳು!—

ಇನ್ಸಪೆಕ್ಟರರಿಗೂ ಈ ಮಾತು ಹೌದೆಂದು ಕಂಡಿತು. ಸಹಜ. ಅದು ಹೆಣ್ಣು ಸ್ವರ. ಆದರೆ ಅಂತಹ ಹೆಣ್ಣು ಪಿಶಾಚಿ ಈ ರಾತ್ರಿ ಇಲ್ಲಿಗೆ ಬಂದು ಇಂತಹ ಸಂದಿಗ್ಧ ಸಂದರ್ಭದಲ್ಲಿ ಹೀಗೇಕೆ ಕೂಗಿಕೊಳ್ಳಬೇಕು? ಎಲ್ಲೋ ಅವರದೇ ಕಾವಲಿನ ಜನ ಇರಬಹುದು—ಎಂದುಕೊಂಡರು.

ಲಕ್ಕಣ್ಣ ಬೆಪ್ಪನಂತೆ ಒಮ್ಮೆ ನೆಲವನ್ನು ಒಮ್ಮೆ ತಂಕರನನ್ನು ಮತ್ತೊಮ್ಮೆ ಇನ್ಸಪೆಕ್ಟರರನ್ನು ಜುಳು ಜುಳು ನೋಡುತ್ತ ನಿಂತು ಮಾಲುತಿದ್ದನು. ಅವನ ಗಂಗರದ ಗುಂಗು ಇನ್ನೂ ಇಳಿದಿಲ್ಲ. ಕೈಯಲ್ಲಿ ಹಿಡಿದ ಬಾಟ್ಲಿ ಕೈಯಲ್ಲೇ ಇದ್ದಿತು.

ಪೋಲೀಸರು ಹೋಟೆಲಿನೊಳಗಿನ ಸೊತ್ತುಗಳನ್ನೆಲ್ಲಾ ನೋಡಿದರು. ಶರಾಬು ತಯಾರಿಸುವ ಹತ್ಯಾರುಗಳೇನೂ ಕಂಡು ಬರಲಿಲ್ಲ. ಅದು ಕುಡಿಯುವ ಗಡಂಗು ಮಾತ್ರ. ಅವಸರದಲ್ಲಿ ಅರ್ಧ ಕುಡಿದು ಚೆಲ್ಲಿಬಿಟ್ಟ ಹಲ ಕೆಲವು ಬಾಟ್ಲಿಗಳು ನೆಲದ ಮೇಲೆ ಹೊರಳಾಡುತಿದ್ದುವು. ಅವುಗಳನ್ನೆಲ್ಲಾ ತೆಗೆದುಕೊಂಡು ಇನ್ನಾರಾದರೂ ಅಡಗಿರುವರೋ ಎಂದು ಅಟ್ಟದ ಕಡೆ ಸುತ್ತ ಮುತ್ತ ಲೈಟು ಹಾಕಿ ನೋಡಿ ಲಕ್ಕಣ್ಣನನ್ನು ಬಿಗಿಹಿಡಿದು ಸೆಳೆದು ಕೊಂಡು ಹೊರಟರು.

ತಂಕರ ಏನೋ ಹೇಳಲು ಹೊರಟು ತಡವರಿಸಿದ. ಆದರೆ ಅವನ ಮಾತನ್ನು ಯಾರು ಕೇಳಬೇಕು? ಇನ್ಸ್‌ಪೆಕ್ಟರರು—ಬದ್‌ಮಾಶ್—ಎಂದು

ಒಂದೇ ಸವನೆ ಗದರಿಸುತ್ತ ತಮ್ಮ ಗರ್ವ ತೀರಿಸುತಿದ್ದರು. ರಾಮಿ ಇದಿರೇ ಬರಲಿಲ್ಲ. ಇದಿರುಬಿದ್ದು ಮತ್ತೊಂದು ಅವಾಂತರಕ್ಕೆ ಬೀಳಲು ಅವಳು ಇಷ್ಟಪಡಲಿಲ್ಲ!

ತಂಕರನನ್ನು ಕರೆದುಕೊಂಡು ಹೋಗಬೇಕೋ ಬೇಡವೋ ಎಂದು ಇನ್ಸ್‌ಪೆಕ್ಟರರು ಒಂದು ಕ್ಷಣ ನಿಂತು ಯೋಚಿಸಿದರು. ಕೊನೆಗೆ—ನೀನು ನಮಗೆ ಸಾಕ್ಷಿಗೆ ಬೇಕು. ನಾಳೆ ಹೇಳಿ ಕಳುಹಿಸುತ್ತೇನೆ, ಬರಬೇಕು—ಎಂದು ಮುಂದೆ ನಡೆದು ಇದಿರು ಬರುತ್ತಿದ್ದ ಜೀಪು ಬಂಡಿಹತ್ತಿ ಬುರ್ರೆಂದು ದೂಳೆಬ್ಬಿಸಿ ಹೋಗಿಬಿಟ್ಟರು!

ಆ ಕತ್ತಲಲ್ಲಿ ಅವರೆಲ್ಲಾ ಹೊರಟು ಹೋದ ಮೇಲೆ ರಾಮಿ ಮತ್ತು ತಂಕರ ಮುಖ ಮುಖ ನೋಡಿಕೊಂಡರು. ಇಬ್ಬರೂ ಮಾತನಾಡಲಿಲ್ಲ. ಇಬ್ಬರ ಮುಖವೂ ಸುಟ್ಟ ಬದನೆ ಕಾಯಿಯ ಹಾಗೆ ಬಾಡಿ ಸುಕ್ಕುಗಟ್ಟಿದ್ದಿತು! ಈ ಸಂದರ್ಭದ ಪರಿಣಾಮವು ಹೀಗಾಗುವುದೆಂದು ಯಾರು ತಾನೇ ಎಣಿಸಿದ್ದರು? ಇಬ್ಬರಿಗೂ ಜ್ಞಾನೋದಯವಾಯಿತು.

ರಾಮಿ ಪಾಪ! ಏಕೋ ಏನೋ ಮೌನವಾಗಿ ಅಳುತ್ತ ಮೆಲ್ಲ ಮೆಲ್ಲನೆ ಮುಂದೆ ನಡೆದು ಮನೆ ಸೇರಿದಳು!

ಹೆಜ್ಜೆ ೬ ಕಾಣದ ಕೈವಾಡ

ಮರುದಿನ ಬೆಳಿಗ್ಗೆ ಮುಂಚೆ ಊರಿಗೆ ಊರೇ ಗಾಬರಿಗೊಂಡು ಕೇಳ ತೊಡಗಿತು.— ಗುರಿಕಾರ ಲಕ್ಕಣ್ಣ ಹೆಂಡಕುಡಿದು ಪೋಲೀಸರ ಕೈಗೆಸಿಕ್ಕಿ ದನಂತಲ್ಲ? ಅದೂ ಸೀನಪ್ಪನ ಹೋಟೆಲಿನಲ್ಲಿ! ಆಶ್ಚರ್ಯ! ಅವನ ಮನೆಯವರಿಗೂ ಸೀನಪ್ಪನಿಗೂ ಹಿತವಿರಲಿಲ್ಲ. ಮತ್ತೆ ಇದು ಹೇಗೆ ನಡೆಯಿತು ?

ಹೇಗೆ ನಡೆಯಿತು? ಹೇಗೆ ನಡೆಯಿತು! ಎಲ್ಲರೂ.ಇದನ್ನೇ ಕೇಳುವ ವರು. ಹೀಗೆ ಕೇಳುವ ಹೊತ್ತಿಗೆ ಲಕ್ಕಣ್ಣನನ್ನಂತೂ ಬ್ರಹ್ಮಾವರ ಸ್ಟೇಶನಿಗೆ ಕೊಂಡೇ ಹೋದರು.

ಸೀನಪ್ಪ ಅಟ್ಟಹಾಸವಾಗಿ ನಗುತ್ತ ಹೇಳತೊಡಗಿದ-ಲಕ್ಕಣ್ಣ ನಮ್ಮ ಹೋಟೆಲಿನ ಬಳಿ ಕುಡಿದು ರಸ್ತೆಯ ಮೇಲೆ ಬಿದ್ದುಕೊಂಡಿರಬೇಕು. ಅವನ ಅಳಿಯನೇ ತನಗೆ ಯಜಮಾನಿಕೆ ಬೇಗ ಬರಬೇಕೆಂದು ಪ್ಲೇನು ಮಾಡಿ ಪೋಲೀಸರನ್ನು ಕರಕೊಂಡು ಬಂದು ಹಿಡಿಸಿ ಬಿಟ್ಟ! ಘಟಿಂಗ!

ಗೌರಿಯ ಹೇಳಿಕೆ ಇನ್ನೊಂದು ವಿಧ—ಅಲ್ಲ. ಆ ದಿಂಡೆ ರಾಮಿದ್ದೇ ಇದೆಲ್ಲಾ ಪಿಟೇಲು! ಅಲ್ಲವಾದರೆ ಆ ತಂಕರ ಪೆದ್ದ ತಂಕರ ಇದಕ್ಕೆಲ್ಲಾ ಕೈ ಹಾಕುತ್ತಿರಲಿಲ್ಲ—ಇನ್ನು ಚಿಂತಿಲ್ಲ. ಯಜಮಾನಿಕೆ ಚೆನ್ನಾಗಿ ನೋಡ ಬಹುದು. ತುಂಗಮ್ಮನ ಹಾಗೆ ತಾನೂ ಒಂದು ಜನ ಆಗಬೇಕೆಂದೇ ಹೀಗೆ ಮಾಡಿದ್ದು—!

ಅವರ ಅಟ್ಟಹಾಸದಲ್ಲಿ ಹಾಗೆಯೇ ಅವರ ಗಿರಾಕಿಗಳ ನಗೆಯಲ್ಲಿ ಇದೇ ವಿಚಾರವು ವಿಸ್ತಾರವಾಗಿ ಹರಡಿ ಊರೆಲ್ಲಾ ದಟ್ಟವಾಗಿ ಹಬ್ಬಿತು.

ಶಂಕರನೇ ಮಾವನನ್ನು ಹಿಡಿಸಿದನಂತೆ!—

ಅಲ್ಲ ರಾಮಿಯಂತೆ! ಆ ಹರಾಮಿ!--

ರಾಮಿ ತಾನು ಹರಾಮಿಯಾದ ಕತೆಗಳನ್ನೆಲ್ಲಾ ಕೇಳಿಕೇಳಿ ಪಾತಾಳದಲ್ಲೇ ಹೂತುಹೋದಳು. ಈ ತನಕ ಅವಳ ಮನಸ್ಸನ್ನು ಬಳಸಿದ್ದ ಉದ್ವೇಗವು ಮುರುಟಿಹೋಗಿ ಆಕೆಯೊಂದು ಅಕ್ಕಿ ಸುರಿದ ಚೀಲದಂತೆ ಜಳ್ಳುಕಟ್ಟಿಹೋದಳು. ಅಂತೆಯೇ ಇನ್ನೇನು ಮಾಡಬೇಕೆಂಬುದು ಯಾರಿಗೂ ತೋಚದೆ ಹೋಯಿತು. ಅಕ್ಕಮ್ಮನಂತೂ ತಲೆತಲೆ ಬಡಿದುಕೊಂಡು ಅಯ್ಯೋ! ಸುಬ್ಬಣ್ಣನಿದ್ದಿದ್ದರೆ ಹೀಗೆಂದೂ ಆಗುತ್ತಿರಲಿಲ್ಲ. ನನ್ನ ದುರ್ದೈವ ಎಂದು ಗೋಳಾಡಿದಳು. ಅವಳ ಗೋಳಾಟಕ್ಕಿಂತಲೂ ಸುಬ್ಬಣ್ಣನ ಹೊಗಳಿಕೆ ರಾಮಿಗೆ ಬಹಳ ಕಹಿಯಾಗಿ ಕಂಡು ಬಂದಿತು. ಆ ಗತಿಗೆಟ್ಟ ಸುಬ್ಬಣ್ಣ ತುಂಗಮ್ಮನವರ ದೈವದ ಕಾಟ ತನ್ನನ್ನು ಎಂದೆಂದಿಗೂ ಬೆನ್ನು ಬಿಡದಿರುವುದಲ್ಲ— ಎಂದು ಬಿಸುಸುಯ್ದಳು. ಈ ಎಲ್ಲಾ ಹಗರಣಗಳಿಂದ ಅವಳ ಹರಣವೇ ಹೇಸಿ ಹತ್ತಿಗೂ ಹಗುರವಾಗಿ ಹೋಯಿತು!

ಆ ಸೋಮವಾರ ಮುಂಜಾನೆ ಗೋವಿಂದನು ಗಾಡಿಯಲ್ಲಿ ಸ್ವಲ್ಪ ಸರಕು- ಎಂದರೆ ಬಾಳೆ ಹಣ್ಣು— ಹಣ್ಣಡಿಕೆ—ಬೀಳಿನ ಹೆಡಿಗೆ—ಬೂದಿಗುಂಬಳ ಇವುಗಳನ್ನೆಲ್ಲ ತುಂಬಿಸಿ ಹಿರಿಯಡ್ಕ ಸಂತೆಗೆ ಹೋಗಿದ್ದನು. ಇಂತಹ ಚಿಕ್ಕ ಚಿಕ್ಕ ವ್ಯಾಪಾರಗಳಿಂದ ಅವನ ಗಾಡಿ ಎತ್ತುಗಳ ಹುರುಳಿ ಕಾಸನ್ನು ಅವನೇ ಸಂಪಾದಿಸುತಿದ್ದನು. ಸಂತೆಯಲ್ಲಿ ಯಾರಿಗೋ ಅಡಿಕೆ ಮಾರುತಿದ್ದ ವೇಳೆ ಊರ ಕಡೆಯಿಂದ ಬಂದವನೊಬ್ಬ ಲಕ್ಕಣ್ಣನ ಸೆರೆಯ ವಿಚಾರವನ್ನು ತಿಳಿಸಿದನು. ಗೋವಿಂದನಿಗೆ ತಲೆ ತಿರುಗಿದಂತಾಯ್ತಿತು. ಇದನ್ನು ಕಂಡು ಆ ಅಡಿಕೆಯನ್ನು ಕೊಳ್ಳುವಾತ ತುಸು ತಡೆದು ಬಂದು ಕೇಳಿದ - ನೀನು ಸುಬ್ಬಣ್ಣನ ಪೈಕಿಯೆ?

ಹೌದು—-ತಮ್ಮ.

ಈ ವಿಚಾರವನ್ನು ನಾನು ತಿಳಿಸಬೇಕೆ?

ಯಾವ ವಿಚಾರ?

ಇದೇ ಈಗ ಮಾತಾಡಿದ ಗಂಗರದ ಕೇಸಿನ ವಿಚಾರ—

ಯಾರಿಗೆ ತಿಳಿಸುವುದು?

ಕಾವೇರಿಗೆ. ತುಂಗಮ್ಮನ ತಾಯಿ—

ಗೋವಿಂದನಿಗೆ ಆಶ್ಚರ್ಯವಾಯಿತು. ಆದರೆ ಕಾವೇರಿ ಬಹಳ ಕಾರ್ಬಾರಿ ಹೆಂಗಸೆಂದು ಅವನು ಕೇಳಿದ್ದ. ಆದುದರಿಂದ ಆಕೆ ಸ್ವಲ್ಪ ಪ್ರಯತ್ನ ಮಾಡಿದರೆ ಲಕ್ಕಣ್ಣನ ಬಿಡುಗಡೆಯಾಗಬಹುದೆಂದು ತೋರಿತು. ಆದರೆ ತಮ್ಮ ತಮ್ಮೊಳಗಿನ ಸಂಪರ್ಕವೇನೂ ಅಷ್ಟು ಹಿತವಾಗಿರುವುದಿಲ್ಲ. ಹೀಗಿರುವಾಗ ಈ ಕುರಿತು ತನ್ನಣ್ಣನ ಭಾವನೆ ಹೇಗಿದೆಯೊ? ಹೇಗಿದ್ದರೂ ಗೋವಿಂದನ ಮನಸ್ಸು ಧಾರಾಳ! ಅವನು ಎಲ್ಲವನ್ನೂ ಸ್ವಲ್ಪ ಎರಿಕೆಯ ದೃಷ್ಟಿಯಿಂದ ನೋಡತಕ್ಕವ. ಅದರಲ್ಲೂ ಇತ್ತೀಚೆಗೆ ಗಾಡಿಯ ಮೂಕಿಯ ಮೇಲೆ ಕುಳಿತು ಕೆಳಗಡೆ ಚಲಿಸುವ ಪ್ರಪಂಚವನ್ನು ನೋಡತೊಡಗಿದಂದಿನಿಂದ ಚಿಕ್ಕ ಚಿಕ್ಕ ವಿಚಾರಗಳ ಕಡೆ ಅವನು ಅಲಕ್ಷ್ಯವಾಗಿರುತಿದ್ದ. ಏನೋ ಎಂದೋ ಕೆಲವು ವರ್ಷಗಳ ಹಿಂದೆ ಯಾವುದೋ ಒಂದು ವಿಷಗಳಿಗೆಯಲ್ಲಿ ನಡೆದು ಹೋದ ಘಟನೆಯೊಂದಕ್ಕೆ ಇಷ್ಟೆಲ್ಲಾ ಗೋಳಾಟ ಹಚ್ಚಿಕೊಂಡು ತಾವೇ ಸಂಭಾವಿತರೆಂದು ಅಹಂಕಾರಗೊಳ್ಳುವುದರಲ್ಲಿ ಏನೂ ಅರ್ಥವಿಲ್ಲವೆಂದು ಅವನ ತಿಳಿವಳಿಕೆ. ಆದುದರಿಂದ ಅಣ್ಣನ ಅಭಿಪ್ರಾಯವೇನಿದ್ದರೂ ಮಾವನ ಬಿಡುಗಡೆಗೆ ತಾವು ಯತ್ನಿಸುವುದು ಮುಖ್ಯವೆಂದೇ ತೀರ್ಮಾನಿಸಿಕೊಂಡು ಕೇಳಿದ— ನೀವು ಯಾರು? ಪರಿಚಯವಾಗಲಿಲ್ಲವಲ್ಲ!

ನಾನು ಐತಣ್ಣ. ಕೌಡೂರು ಐತಣ್ಣ.

ಹಾಗಾದರೆ ನೀವು ಈ ಉಪಕಾರ ಮಾಡಬಹುದು. ಕಾವೇರತ್ತೆಗೆ ತಿಳಿಸಿದರೆ ಒಳ್ಳೆಯದಾಗುತಿದ್ದಿತು. ಅವರೇನಾದರೂ ಯತ್ನಮಾಡಿ—

ಸುಬ್ಬಣ್ಣ ಹಾಗೆ ಹೇಳಿದನೆ?

ಅಣ್ಣನಿಗೆ ಈ ವಿಚಾರ ಇನ್ನೂ ತಿಳಿದಿಲ್ಲ. ಇದು ನಿನ್ನೆರಾತ್ರಿ ನಡೆದ ವಿಷಯ. ಅಣ್ಣ ಕೇಳಿದರೆ ತುಂಬಾ ಬೇಸರಗೊಂಡಾನು.

ಏಕೆ? ನೀವೆಲ್ಲಾ ಅವರ ಹಂಗು ಬಿಟ್ಟು ಬಂದವರಲ್ಲ?

ಹಂಗು ಬಿಟ್ಟರೇನು? ಕೂಡು ಕಟ್ಟು ಬಿಡಲಿಕ್ಕೆ ಮಾನ ಮರ್ಯಾದೆ ಬಿಡಲಿಕ್ಕೆ ಬರುತ್ತದೆಯೆ?

ಸರಿ ಹಾಗಾದರೆ. ನಾನು ತಿಳಿಸಿ ಆದಷ್ಟು ಪ್ರಯತ್ನ ಮಾಡುತ್ತೇನೆ.

ನೆನಪಿರಲಿ. ಮರೆತು ಹೋಗದೆ—

ಛೆ ಛೆ! ಖಂಡಿತಾ—ಈಗಲೇ ಹೊರಟೆ!—ಎಂದು ನಾಲ್ಕು ಹೆಜ್ಜೆ ಮುಂದೆ ಇಟ್ಟು ಮತ್ತೊಮ್ಮೆ ತಿರುಗಿ ಗೋವಿಂದನ ಕೈ ಹಿಡಿದು—ನೀವು ಆದರ ಯೋಚನೆ ಬಿಡಿರಿ. ಎಲ್ಲಾ ನಾನು ನೋಡಿ ಕೊಳ್ಳುತ್ತೇನೆ. ಹೆದರುವುದು ಬೇಡ--ಎಂದು ಕೂಡಲೇ ಹೊರಟು ಹೋದನು.

ಐತಣ್ಣ ಬಹಳ ಉಬ್ಬಾಳು. ಒಂದು ಕೆಲಸವಾಗಬೇಕೆಂದು ಅವನಿಗೆ ಯಾರಾದರೂ ಪಟ್ಟಗಟ್ಟಿದರೆ ಅದನ್ನು ಹೇಗಾದರೂ ತೀರಿಸುವ ಸಾಹಸಿ. ಅದೂ ಅಲ್ಲದೆ ಇತ್ತೀಚೆಗೆ ಕಾವೇರಿ ತನ್ನ ಮಗಳ ಹೆಸರು ಹೇಳಿ ಹೇಳಿ ಕೊರಗುವುದನ್ನೂ ಅದರಿಂದಾಗಿ ತನಗೆ ಬೇಕಾದ ಷೋಡಶೋಪಚಾರಗಳು ದಕ್ಕದಿರುವುದನ್ನೂ ಕಂಡು ಕಂಡು ಈ ವಿಚಾರದಲ್ಲಿ ಕೈ ಹಾಕಿ ಕೆಲಸ ಮಾಡಿದರೆ ಅವಳಿಗೂ ಹಿತವಾಗಬಹುದೆಂದು ಭಾವಿಸಿ ಆ ಕ್ಷಣವೇ ಅಲ್ಲಿಂದ ಬಸ್ಸು ಹತ್ತಿ ಬೈಲೂರಿಗೆ ಧಾವಿಸಿದನು.

ಗೋವಿಂದನು ಬೇಗಬೇಗನೆ ತನ್ನ ಸರಕುಗಳನ್ನೆಲ್ಲಾ ವಿಕ್ರಯಗೊಳಿಸಿ ಸಂಜೆಗೆ ಮುಂಚೆ ಮನೆ ಸೇರಿ ಮೆಲ್ಲನೆ ಅಣ್ಣನ ಕೂಡೆ ತಾನು ಕೇಳಿದ ವಿಚಾರವನ್ನು ತಿಳಿಸಿದನು.

ಸುಬ್ಬಣ್ಣನ ತಲೆ ಮೇಲೆ ಸಿಡಿಲು ಬಿದ್ದಂತಾಯಿತು. ಆದರೂ ಆ ವೇದನೆಯನ್ನು ತೋರಗೊಡಲಿಲ್ಲ. ಮೆಲ್ಲನೆದ್ದು ಧನಿಗಳ ಮನೆಯ ಕಡೆ ಹೊರಟನು. ಅವರ ಮುಖಾಂತರ ಏನಾದರೂ ಯತ್ನಮಾಡಿ ನೋಡಬಹುದೋ—ಎಂಬ ಆಶೆಯಿಂದ. ಆದರೆ ಹೆಗ್ಗಡೆಯರು ಹೆಬ್ರಿಗೆ ತನ್ನ ಸಂಬಂಧಿಕರ ಮನೆಗೆ ಹೋದವರು ಇನ್ನೂ ಎರಡು ದಿನ ಬರುವಂತಿಲ್ಲವೆಂದು

ಅವರ ಹೆಂಡತಿ ಹೇಳಿದರು. ಹೀಗಾಗಿ ಅವನು ತಲೆಯ ಮೇಲೆ ಕೈಯಿಟ್ಟು ಕೊಂಡು ವಾಪಾಸು ಬಂದನು.

ಮನುಷ್ಯನು ನಿರುಪಾಯನಾಗಿ ಅಸಹಾಯಕ ಸ್ಥಿತಿಗೆ ಬಂದು ಮುಟ್ಟಿದಾಗ ಸ್ವಾಭಾವಿಕವಾಗಿ ಒಂದು ತೆರದ ನಿರೀಹ ಭಾವಕ್ಕೆ ಸಂದೇ ಸಲ್ಲುತ್ತಾನೆ. ಏಕೆಂದರೆ ಅದು ಆತ್ಮ ಸಮಾಧಾನಕ್ಕಾಗಿ. ಕೈಯೆಟಕದ ಕಡೆಯಲ್ಲೆಲ್ಲಾ ಅದೃಷ್ಟವನ್ನು ಆರೋಪಿಸಿಕೊಳ್ಳುವಂತೆ ಇಂತಹ ನಿರೀಹ ಭಾವದ ಉದಾಸ ವೃತ್ತಿಯು ಮನುಷ್ಯನನ್ನು ಒಮ್ಮೆಗೆ ಅಂತಹ ಅನಂತ ಯಾತನೆಯಿಂದ ಪಾರು ಮಾಡುವುದು. ಹಾಗೆಯೇ ಸುಬ್ಬಣ್ಣನು ಬರುತ್ತಾ ಬರುತ್ತಾ ತನ್ನ ಹೆಂಡತಿಯ ಪರಿಸ್ಥಿತಿಯನ್ನು ವಿಮರ್ಶಿಸಿ ಕೊಳ್ಳುತ್ತಾ ಬಂದನು. ತವರಿನ ಕುಲ ಗೌರವಗಳನ್ನೆಲ್ಲಾ ಮಾರಿ ಈಕಡೆ ಬಂದ ಹೆಣ್ಣು. ಈ ತನಕ ಒಂದೇ ಒಂದು ದಿನವಾದರೂ ತನಗಾಗಿ ತನ್ನ ಗೌರವಕ್ಕಾಗಿ ತಾಯನೆನಪನ್ನು ತಾರದಿರುವ ಹೆಣ್ಣು ! ಅದೇರೀತಿ ಇಂದು ತನ್ನ ಪರಿಸ್ಥಿತಿಯಾದರೆ ಅದಕ್ಕಾಗಿ ಹೆಚ್ಚು ಯೋಚಿಸಬಾರದು. ತಮ್ಮದು ಸಮಾನ ದುಃಖವೆಂದು ಸುಮ್ಮನಿರಬೇಕು. ತುಂಗಮ್ಮ ಬಾಯಿ ಮುಚ್ಚಿಕೊಂಡು ಈ ತನಕ ಕುಳಿತಿದ್ದರೆ ತಾನೂ ಇನ್ನು ಮುಂದಕ್ಕೆ ಇವು ಗಳನ್ನು ತೋರಗೊಡದೆ ಬಾಳಬೇಕು. ಅವಳ ಸಹನೆ ತನಗೂ ಬರ ಬೇಕು !

ಹೇಗಿದ್ದರೂ ಈ ವಿಚಾರ ಮನೆಗೆ ಬಂದ ವೇಳೆ ತುಂಗಮ್ಮನಿಗೆ ತಿಳಿದಿ ದ್ದಿತು. ಅವಳು ಗಂಡನ ಮುಖವನ್ನು ಕದ್ದು ಕದ್ದು ನೋಡಿ ಕೊನೆಗೆ ಅಂತರ್ಯದ ದುಃಖದ ಮಿಡಿತವನ್ನು ತಿಳಿದುಕೊಂಡು ಸಮಾಧಾನವಾಗಿ ಹೇಳಿದಳು—ನಿಜವಾಗಿಯೂ ಗ್ರಹಚಾರ! ಹೀಗಾಗಬಾರದಿದ್ದಿತು.

ಗೋವಿಂದನ ಎದೆಯಲ್ಲಿ ಸಿಟ್ಟಿನ ಕುದಿಕಾರುತಿದ್ದಿತು. ಅವನು— ರಾಮಿ ಮನೆಮುಂದಿಗೆಲ್ಲಾ ಕೊಡಲಿಯೇಟು ಹಾಕುತ್ತಾ ಬಂದರೆ ಹೀಗಾ ಗದೆ ಮತ್ತೆ ಹೇಗಾಗಬೇಕು?—ಎಂದನು.

ತುಂಗಮ್ಮ ಒಂದು ಕ್ಷಣ ಸುಮ್ಮನಿದ್ದಳು. ಆ ಒಂದು ಕ್ಷಣದಲ್ಲಿ ಅವಳ ಸ್ಮೃತಿಪಟದ ಮೇಲೆ ಆ ಸಂದರ್ಭಗಳೆಲ್ಲಾ ಮಗುಚಿ ಬಿದ್ದುವು.

ಆ ಹಿಂದೆ ತನ್ನ ತಾಯಿ ಕುರಿತಾದ ವರ್ತಮಾನ—ಅಂದಿನಿಂದ ತೊಡಗಿದ ರಾಮಿಯ ಪೀಡೆ-ಅವಳ ದನಕ್ಕಾಗಿ ನಡೆದ ರಂಪಾಟ—ಅವಳಿಗಾಗಿ ತಾನು ತನ್ನ ಗಂಡ ಕೊನೆಗೆ ಗೋವಿಂದ ಸಹ ಮನೆಬಿಟ್ಟು ಹೊರಟ ಸಂಗತಿ ಇವುಗಳೆಲ್ಲಾ ಒಂದೊಂದಾಗಿ ತೋರಿ ತೆರಳಿದುವು. ಆದರೇನು? ದೇವರು ತಮ್ಮ ಕೈ ಬಿಡಲಿಲ್ಲ. ಕಟ್ಟಕಡೆಗೆ ಈ ಹೊಸ ಅವಾಂತರ - ತನ್ನ ತಲೆಯ ಮೇಲೆ ತಾನೇ ಗುಂಡುಕಲ್ಲನ್ನು ಹೊರಳಿಸಿಕೊಂಡ ವಿಧಾನ. ಇದಕ್ಕಾಗಿ ಅವಳದೂ ಪ್ರಾಯದ ರಕ್ತ ತುಸು ಬಿಸಿಯೇರದಿರಲಿಲ್ಲ. ಆದರೆ ಹಿಂದೂಸಮಾಜದ ಉದಾತ್ತ ಸಂಸ್ಕೃತಿಯೊಂದು ಯುಗ ಯುಗಗಳಿಂದಲೂ ಹರಿದು ಬಂದು ಬಡವರು ಬಲ್ಲಿದರೆಂಬ ಭೇದವಿಲ್ಲದೆ ಜನತೆಯ ಹೃದಯದಲ್ಲಿ ಅಮೃತಧಾರೆಯಾಗಿ ತುಂಬಿದಂತಹ ಸಹನೆ—ಅಂತಹ ಸಹನೆಯ ಸೆರಗು ಹಿಡಿದು ಕ್ಷಣಕಾಲ ಸುಮ್ಮನಿದ್ದು ಕೊನೆಗೆ ಗಂಭೀರವಾಗಿ ಹೇಳಿದಳು—ಪಾಪ! ಅವಳಿಗೇನೂ ಬುದ್ಧಿಯಿಲ್ಲ.

ಇನ್ನು ಬುದ್ಧಿ ಬರುವುದು ಒಂದೇ ದಿನ!—ಎಂದು ಗುಡುಗಿದನು. ಗೋವಿಂದ.

ಹೋಗಲಿ ಬಿಡು. ಈಗ ಏನಾದರೂ ಬೇರೆ ಯೋಚನೆ ಮಾಡಬೇಕಲ್ಲ? ನಮ್ಮ ಸೊತ್ತು ನಮಗೆ ಯಾವಾಗಲೂ ಪಾವನವೇ! ಅಲ್ಲವಾದರೆ ಆ ದುರ್ವಾಸನೆ ನಮಗೂ ತಟ್ಟದಿರುವುದಿಲ್ಲ.

ಸುಬ್ಬಣ್ಣ ಅವಾಕ್ಕಾಗಿ ಕುಳಿತಿದ್ದ. ತುಂಗಮ್ಮನಿಂದ ಇಂತಹ ವಿಚಾರವಾಣಿಯನ್ನು ಅವನು ಎಂದಿಗೂ ಎಣಿಸಿದ್ದಿಲ್ಲ. ಕೊನೆಗೆ ಸಿಟುಗೆ ತೆಗೆದು ಹೇಳಿದ—ನಾನು ಧನಿಗಳಲ್ಲಿಗೆ ಈಗ ಹೋಗಿ ಬಂದೆ, ಆದರೆ ಅವರು ಇರಲಿಲ್ಲ.

ಹಾಗಾದರೆ ಮತ್ತೇನು ಮಾಡುವುದು?

ನಮ್ಮಿಂದ ಬೇರೇನು ಮಾಡಲು ಸಾಧ್ಯವಿದೆ? ಆ ಪೋಲೀಸರ ಕೂಡೆ ನಮ್ಮ ಮಾತು ಎಲ್ಲಿ ನಡೆಯಬೇಕು? ಅಥವಾ ನೀರಿನ ಹಾಗೆ ಸುರಿಯಲು ನಮ್ಮ ಕೂಡೆ ಹಣವಾದರೂ ಇದೆಯೇ?

ಹಾಗಾದರೆ ಒಮ್ಮೆ ಅಲ್ಲಿಗೆ ಹೋಗಿ ನೋಡಿಕೊಂಡಾದರೂ ಬರಬಹುದಿದ್ದಿತು.

ಹಾಗೆ ನೋಡಲು ಹೋದರೆ ಏನೋ ನಮ್ಮ ಚಂದ ನೋಡಲು ಬಂದರೆಂದು ಮಾವ ತಿಳಿದುಕೊಂಡಾರು!—ಎಂದನು ಗೋವಿಂದ.

ಅದೂ ಹೌದು. ಅದು ಹಳ್ಳಿಯವರ ಒಂದು ವಿಚಿತ್ರವಾದ ಮನೋಭಾವ! ಆದುದರಿಂದ ಅವರೆಲ್ಲರೂ ಏನು ಮಾಡುವುದೆಂದು ತೋಚದೆ ಬೆಂಕಿಬಿದ್ದ ಬಿಲದೊಳಗೆ ಸಿಕ್ಕಿದ ಇಲಿಯ ಹಾಗೆ ಮಿಸುಕಾಡದೆ ಮೌನವಾಗಿದ್ದರು.

ಕೊನೆಗೆ ಅಂತಹ ಮೃತ್ಯು ಮೌನವನ್ನು ಭೇದಿಸಲೋಸುಗ ಬೇರೆ ಮಾರ್ಗ ತೋರದೆ ಗೋವಿಂದನು ಹೇಳಿದ—ನಾನು ಈ ದಿನ ಸಂತೆಯಲ್ಲಿ ಅಲ್ಲಿಗೆ ಹೇಳಿ ಕಳುಹಿಸಿದೆ.

ಎಲ್ಲಿಗೆ?

ಬೈಲೂರಿಗೆ.

ಎಲ್ಲರೂ ಒಬ್ಬರೊಬ್ಬರ ಮುಖ ನೋಡಿಕೊಂಡರು. ಈ ಮೂರು ವರ್ಷಗಳಲ್ಲಿ ಬೈಲೂರಿನ ಹೆಸರು ಹೇಳಲ್ಪಟ್ಟುದು ಇದೇ ಮೊದಲ ಬಾರಿ. ಆದುದರಿಂದ ದಾಟ ಬಾರದ ಊರಿನ ಗಡಿ ದಾಟಿದವರಂತೆ ಅವರೆಲ್ಲರೂ ಬೆಪ್ಪಾಗಿ ಕುಳಿತು ಮೇಲೆ ಕೆಳಗೆ ನೋಡತೊಡಗಿದರು. ಕಟ್ಟ ಕಡೆಗೆ ಸುಬ್ಬಣ್ಣನು ಮೇಲುಸಿರು ಬಿಟ್ಟು—ಸರಿ. ಚೆನ್ನಾಯಿತು—ಎಂದನು.

ಅಲ್ಲಿಗೆ ಆ ಪ್ರಶ್ನೆಯ ತೀರ್ಮಾನವಾಯಿತು!

ಇಲ್ಲಿ ತೀರ್ಮಾನವಾದ ಪ್ರಶ್ನೆ ಬೈಲೂರಲ್ಲಿ ಕಾವೇರಿಯ ಮನೆಯಲ್ಲಿ ಮೇಲೆದ್ದಿತು! ಐತಣ್ಣ ಅವಸರವಸರವಾಗಿ ಹೋಗಿ ಕಾವೇರಿಯ ಮುಂದೆ ತನ್ನ ವರದಿಯನ್ನು ಒಪ್ಪಿಸಿದನು. ಕಾವೇರಿ ಆ ಕಡೆ ಈ ಕಡೆ ನೋಡಿದಳು, ಕೈ ಕೊಸರಿ ಕೊಂಡಳು. ಕೊನೆಗೆ ಎದ್ದು ನಿಂತು ಮೆಲ್ಲನೆ—ಐತಣ್ಣ! ನೀನು ಬ್ರಹ್ಮಾವರಕ್ಕೆ ಹೋಗಿ ಬರಬೇಕಲ್ಲ—ಎಂದಳು.

ಅಡ್ಡಿಯಿಲ್ಲ. ಆದರೆ ಅಲ್ಲಿಯ ಒಂದು ಗುರುತಿನ ಜನ ಇದ್ದಿದ್ದರೆ ಚೆನ್ನಾಗಿತ್ತು—!

ಕಾವೇರಿ ಏನೋ ಯೋಚಿಸಿ ಕೂಡಲೇ ಅಲ್ಲಿಂದ ಎದ್ದು ಧನಿಗಳ ಮನೆಗೆ ಹೋದಳು. ಪಾಂಡು ಕಮ್ತಿಯರು ಆಗ ತಾನೇ ಎಡೆ ಹೊತ್ತಿನ ಕಾಪಿಕುಡಿಯಲು ಅಂಗಡಿಯಿಂದ ಮನೆಗೆ ಬಂದಿದ್ದರಷ್ಟೆ. ಅವರ ಮುಂದೆ ಹೋಗಿ ತಲೆ ತಗ್ಗಿಸಿ ನಿಂತಳು.

ಪಾಂಡು ಕಮ್ತಿಯರಿಗೆ ಒಮ್ಮೆಗೇ ಆಶ್ಚರ್ಯವಾಯಿತು. ಇಷ್ಟು ದಿನಗಳಲ್ಲೂ ಒಮ್ಮೆಯಾದರೂ ತನ್ನ ಮುಂದೆ ಕಾಣಿಸಿಕೊಳ್ಳದ ಕಾವೇರಿ ಈ ದಿನ ಏಕೆ ಹೀಗೆ ಮುಖ ಬಾಡಿಸಿಕೊಂಡು ನಿಂತಳೆಂದು ಗಾಬರಿಯಾಗಿ ಕೇಳಿದರು—ಏನು ಕಾವೇರಿ? ಏನು ಸಮಾಚಾರ? --

ಧನಿಗಳಿಂದ ಒಂದು ಕೆಲಸವಾಗಬೇಕಾಗಿದೆ—ಎಂದು ಎಲ್ಲಾ ಸಂದರ್ಭಗಳನ್ನು ಚುಟುಕಾಗಿ ತಿಳಿಸಿದಳು.

ಕಮ್ತಿಯರು ಕಾಫಿ ಕುಡಿದು ಲೋಟೆಯನ್ನು ಆ ಕಡೆಯಿಟ್ಟು —ನೋಡು ಅದು ನಮ್ಮ ಕಾರ್ಕಳದ ಸರಹದ್ದಾಗಿದ್ದರೆ ಎಲ್ಲ ನಾನೇ ನೋಡಿಕೊಳ್ಳುತಿದ್ದೆ ಆದರೆ ಬ್ರಹ್ಮಾವರದ ಸರ್ಕಲು ನಮಗೆ ಸ್ವಲ್ಪ ದೂರ ದೂರ—ಎಂದರು.

ಸಹಜ. ಆದರೆ ಧನಿಗಳು ಮನಸ್ಸು ಮಾಡಿದರೆ ಯಾವುದು ಅಸಾಧ್ಯ? ತಮಗೆ ಅಲ್ಲಿ ಬೇಕಾದವರಿಗೆ ಕಾಗದ ಕೊಟ್ಟು ಹೇಳಿ ಕಳುಹಿಸಿದರೆ—

ಹಾಂ ಸರಿ! ನೆನಪಾಯಿತು, ಅದಾಗಬಹುದು. ಅಲ್ಲಿ ನಮ್ಮ ಸ್ನೇಹಿತರು ವೆಂಕಟ್ರಾಯರು ಇದ್ದಾರೆ. ಅವರಿಗೆ ಕಾಗದ ಕೊಡುತ್ತೇನೆ. ಕೆಲಸ ಸಸೂತ್ರವಾಗಬಹುದು. ಆಗದಿದ್ದರೂ ಚಿಂತಿಲ್ಲ. ಜಾಮೀನಿನ ಮೇಲೆ ಬಿಡಿಸಿಕೊಂಡು ಬರಬಹುದು. ಮತ್ತೆ ಕೋರ್ಟು ಇದೆ—ಕಾನೂನುಯಿದೆ! ಎಂದರು.

ಅದೇ ಸಂಜೆಯೇ ಐತಣ್ಣ ಕಮ್ತಿಯರ ಕಾಗದ ಪಡೆದು, ಕಾವೇರಿಯು ಹಣಕೊಡುವ ವೇಳೆ---ಛೇ ಬೇಡ ಬೇಡ! ನನಗೇನು ಅಷ್ಟು ಬಡತನ ಬಂದದೆ ಎಂತ ಎಣಿಸಿದ್ದೀಯಾ?–ಎಂದು ಬೂಟಾಟಿಕೆಯಿಂದ ತನ್ನ ಹಣದ ಚೀಲವನ್ನು ಎತ್ತಿತೋರಿಸಿ ಉಡುಪಿಗೆ ಬಸ್ಸು ಹಿಡಿದು ಆ ರಾತ್ರಿಯೇ ಬ್ರಹ್ಮಾವರಕ್ಕೆ ನೇರವಾಗಿ ಪಯಣ ಬಿಟ್ಟನು!

ಬ್ರಹ್ಮಾವರದಲ್ಲಿ ಮರುದಿನ ಬೆಳಿಗ್ಗೆ ಕಮ್ತಿಯರ ಕಾಗದ ತೋರಿಸಿ ಕಾಣಬೇಕಾದವರನ್ನು ಕಂಡಾಯಿತು. ಕೊನೆಗೆ ಈ ಕೇಸನ್ನು ಇನ್ಸಪೆಕ್ಟರೇ ಹಿಡಿದು ಬುಕ್ಕುಮಾಡಿಯಾಗಿದೆ. ಆದುದರಿಂದ ಇನ್ನು ಬಿಡುವುದು ಕಷ್ಟ. ಬಿಟ್ಟರೆ ತೊಂದರೆ ಬಂದೀತು. ಜಾಮೀನಿನ ಮೇಲಾದರೆ ಬಿಡಬಹುದು--

ಜಾಮೀನಿನ ಮೇಲೆ ಲಕ್ಕಣ್ಣನನ್ನು ಬಿಡಿಸಿಯಾಯಿತು. ಕೊನೆಗೆ ವೆಂಕಟ್ರಾಯರು ಹೇಳಿದರು—ನೀನು ಈಗ ಇವನನ್ನು ಕರೆದುಕೊಂಡು ಹೋಗು. ಈ ಕೇಸು ಕೋರ್ಟಿಗೇ ಹೋಗಲಿ. ಆಗ ತೊಂದರೆ ಆಗದ ಹಾಗೆ ನಾನು ನೋಡಿಕೊಳ್ಳುತ್ತೇನೆ—ಎಂದರು. ಆ ಭರವಸೆಯ ಮೇರೆಗೆ ಐತಣ್ಣ ಗುರಿಕಾರ ಲಕ್ಕಣ್ಣನನ್ನು ಕರೆದುಕೊಂಡು ಬೈಲೂರಿಗೆ ಹೊರಟನು.

ಕಾವೇರಿಯ ಮುಖನೋಡಿ ಲಕ್ಕಣ್ಣನ ಮೈ ಬೆವರಿ ಹೋಯಿತು. ಚಿಕ್ಕ ಮಕ್ಕಳಂತೆ ಅವಳ ಮುಂದೆ ಅಳತೊಡಗಿದನು.

ಕಾವೇರಿಯು ಸಮಾಧಾನವಾಗಿ— ಇಲ್ಲ ನೋಡಿ, ನೀವು ಬೇಸರ ಮಾಡಬಾರದು. ಇಂತಹ ಗ್ರಹಚಾರಗಳು ಬೇಡವೆಂದರೂ ಎಷ್ಟೋಬಾರಿ ನಮ್ಮ ಮೇಲೆ ಬಂದೇ ಬರುತ್ತವೆ. ಏನು ಮಾಡಲು ಬಂದೀತು? ಇದನ್ನು ಮನಸ್ಸಿಗೆ ತೆಗೆದುಕೊಳ್ಳಬಾರದು.

ಅಯ್ಯೋ ! ನಾನೇನು ಮನಸ್ಸಿಗೆ ತೆಗೆದು ಕೊಳ್ಳುವುದು. ನೀನು ಪುಣ್ಯ ತಾಯಿ ಮನಸ್ಸಿಗೆ ತೆಗೆದುಕೊಳ್ಳದೆ ನನ್ನ ಬಗ್ಗೆ ಇಷ್ಟೆಲ್ಲಾ ದಣಿದು ಸಹಾಯಮಾಡಿದಿಯಲ್ಲ ! ನನ್ನವರೇ ನನ್ನ ಕಾಲ ಮೇಲೆ ಕೊಡಲಿ ಹಾಕಿದ್ದಾರೆ. ಹೀಗಿರುವಾಗ ನಿನ್ನನ್ನು ಹೀನೈಸಿ ನಿನ್ನ ಮಗಳನ್ನು ಹೊರಗೆ ಹಾಕಿ ನಾನು ಯಾವ ಮುಖದಲ್ಲಿ ಈಗ ನಿನ್ನನ್ನು ನೋಡಲಿ? ಮುದುಕನ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯತೊಡಗಿತು.

ಐತಣ್ಣ ಮುದುಕನ ಕೈಹಿಡಿದು ಹೇಳತೊಡಗಿದನು—ಇಲ್ಲ ಗುರಿಕಾರರೆ ! ನಮ್ಮ ಕಾವೇರಿಗೆ ಅದೆಲ್ಲ ಮನಸ್ಸಿನಲ್ಲಿಲ್ಲ. ನೀವು ಸಹ ಎಲ್ಲಾ ಮರೆತು ಬಿಡಬೇಕು. ಇಷ್ಟು ವರ್ಷಗಳ ಮೇಲೆ ಇದೊಂದು ಹೊಸ ಸಂಬಂಧವಾಯಿತೆಂದೇ ಗ್ರಹಿಸೋಣ— ಎಂದರೆ ಎಲ್ಲಾ ಸರಿಹೋಗುವುದು.

ಆದರೆ ಈ ವರ್ತಮಾನ ನಿಮಗೆಲ್ಲಾ ಕೂಡಲೇ ಹೇಗೆ ತಿಳಿಯಿತು?

ಗೋವಿಂದ ಹೇಳಿದ.

ಸುಬ್ಬಣ್ಣ ಅವನ ಹತ್ತಿರ ಹೇಳಿಕಳುಹಿಸಿದನೆ ?

ಹಾಗೂ ಇರಬಹುದು —ಎಂದಳು ಕಾವೇರಿ.

ಲಕ್ಕಣ್ಣ ಒಮ್ಮೆ ಉಸಿರು ಬಿಟ್ಟು ತಲೆಯ ಮೇಲೆ ಕೈಯಿಟ್ಟು ಸುಮ್ಮನೆ ಕುಳಿತನು. ಯಾವುದೋ ಒಂದು ಕಾಣದ ಕೈ ತನ್ನವರನ್ನೆಲ್ಲಾ ಅಂದು ದೂರ ದೂರ ತಳ್ಳಿದಂತೆಯೇ ಇಂದು ಅವರನ್ನೆಲ್ಲಾ ತನ್ನ ಪಕ್ಕಕ್ಕೆ ಸೆಳೆ ಸೆಳೆದು ಕೂಡಿಸುತ್ತಿದೆಯೆಂದು ತಿಳಿದುಕೊಂಡನು! ಹಾಗೆ ತಿಳಿದು ಕೊಂಡುದರಿಂದ ಆ ಮುದುಕನ ಆತ್ಮಕ್ಕೊಂದು ನೆಮ್ಮದಿ ಬಂದಂತಾಯಿತು. ಆದುದರಿಂದಲೇ ಮಧ್ಯಾಹ್ನ ಅಲ್ಲೇ ಊಟ ಮಾಡಿ ಎಲ್ಲವನ್ನು ಮರೆತು ಬಿಟ್ಟು ಸ್ವಸ್ಥವಾಗಿ ಗೊರಕೆ ಹೊಡೆದು ನಿದ್ದೆ ಮಾಡಿದನು. ಪಾಪ! ಆ ಮುದುಕ ಇದರಿಂದೇನು ಹೆಚ್ಚು ಮಾಡಲಾಪನು?

ಎಚ್ಚರವಾದ ಮೇಲೆ ಮುದುಕನು ಮೆಲ್ಲನೆ ಕಾವೇರಿಯೊಡನೆ ಹೇಳಿದನು—ನಿಮ್ಮ ಉಪಕಾರವನ್ನು ನಾನು ಎಂದಿಗೂ ಮರೆಯಲಾರೆ. ನಾನೀಗ ಮನೆಗೆ ಹೋಗಲೆ?

ಅದೇನು ಅಷ್ಟು ಅವಸರ?

ಛೆ! ಇದೆಲ್ಲಾ ತೀರ್ಮಾನವಾಗದೆ ನೀವು ಹೇಗೆ ಹೋಗುವುದು. ಈ ಕೇಸು ಉಡ್ಡಿ ಕೋರ್ಟಿಗೆ ಹೋಗಿ ಮತ್ತೆ ಎಲ್ಲಾ ಮುಗಿಯ ಬೇಕಷ್ಟೆ! ಅಷ್ಟರ ತನಕ ನೀವು ಇಲ್ಲಿರುವುದೇ ಉತ್ತಮ. ನಾನು ಬೇಕಾದರೆ ಮನೆಗೆ ವರ್ತಮಾನ ಕಳುಹಿಸುತ್ತೇನೆ—ಎಂದನು ಐತಣ್ಣ.

ಅವರ ಒತ್ತಾಯದ ಎಲ್ಲೆಯನ್ನು ಮೀರಲಾರದೆ ಮುದುಕನು ಉಪಾಯ ಗಾಣದೆ ಅಲ್ಲೇ ಕುಳಿತು ಬಿಟ್ಟನು. ಯಾವ ಕರಕರೆಯೂ ಇಲ್ಲದೆ ಕಾವೇರಿಯ ತಿಂಡಿ ತೀರ್ಥ—ಊಟಗಳನ್ನೆಲ್ಲಾ ಹೊಡೆದು ಸುಖವಾಗಿ ನಿದ್ದೆ ತೆಗೆದು ಬಾಳುವುದೂ ಒಂದೂ ತೆರದ ವರಪ್ರಾಪ್ತಿಯಾಗಿಯೇ ಕಂಡು ಬಂದಿತು.

ಪ್ರೊಹಿಬಿಶನ್ ಕೇಸು ಉಡ್ಡಿ ಕೋರ್ಟಿನಲ್ಲಿ ದಾಖಲಾಗಿ ನೋಟೀಸು ಬಂದಿತು. ಐತಣ್ಣ ಹೇಳಿದ ಹಾಗೆ, ಕೈಯಲ್ಲಿ ಕಾಸಿದ್ದರೆ ಕೇಸೇನು

ಮಹಾ ! ಅದರಲ್ಲೂ ಈ ಕೇಸಿನ ತೀರ್ಮಾನ ಬಹಳ ಚೋದ್ಯವಾಗಿ ನಡೆದು ಹೋಯಿತು. ಲಕ್ಕಣ್ಣ ಗಂಗರ ಕುಡಿದುದನ್ನು ಕಂಡವರಿಲ್ಲ. ಅವನು ಕುಡಿಯುವ ಸ್ವಭಾವದವನೂ ಅಲ್ಲ. ಆದರೆ ಅವನಿಗೆ ಮಹಾ ಉದರ ರೋಗ ! ಅದಕ್ಕಾಗಿ ಪಂಡಿತರೊಬ್ಬರ ಕಷಾಯ ದಿನ ನಿತ್ಯವೂ ಬೇಕು. ಆದಿನ ಆತ ಕುಡಿದುದೂ ಅದೇ—ಅವನ ಕೈಯಲ್ಲಿದ್ದ ಬಾಟ್ಲಿಯೂ ಅದೇ ! ಅದಕ್ಕಾಗಿ ಆ ಪಂಡಿತರ ಪಟ್ಟ ಕೋರ್ಟಿನಲ್ಲಿ ಹಾಜರಾಯಿತು!

ಆದುದರಿಂದ ಕೇಸು ಡಿಸ್ ಮಿಸ್ !

ಐತಣ್ಣ ಇದೆಲ್ಲಾ ಆ ವೆಂಕಟ್ರಾಯರ ಮಹಾತ್ಮೆ—ಎಂದು ತಲೆ ದೂಗಿದನು. ಇಂತಹ ಬುದ್ಧಿವಂತರ ಮುಂದೆ ನಮ್ಮ ಬಡ ಸರಕಾರ ಏನು ತಾನೇ ಮಾಡೀತು ? ಪ್ರೊಹಿಬಿಶನಿನ ಜೀವಂತ ಸಮಾಧಿಯಲ್ಲದೆ ಮತ್ತೇನು ತಾನೇ ನಡೆದೀತು ?

ಪ್ರಿಯರಾದ ಪಾಂಡುರಂಗ ಕಮ್ತಿಯರಿಗೆ —ವೆಂಕಟ್ರಾಯನ ನಮಸ್ಕಾರಂಗಳು. ಕ್ಷೇಮ ತರುವಾಯ—ತಮ್ಮ ಪತ್ರದಂತೆ ಎಲ್ಲಾ ನಡಿಸಿ ಕೊಟ್ಟಿದ್ದೇನೆ. ನಮಗೆ ಜಯವಾಗಿದೆ. ಬಾಕಿ ವಿಚಾರಕ್ಕೆ ಬರೆಯುವುದು. ಪ್ರೀತಿಯಿರಲಿ— ಇತಿ ನಿಮ್ಮವನಾದ

ವೆಂಕಟ್ರಾವ್.

ಈ ಮರು ಕಾಗದದೊಡನೆ ಐತಣ್ಣ ಲಕ್ಕಣ್ಣನನ್ನು ಮುಂದೆ ಬಿಟ್ಟು ಕೊಂಡು ಜಂಬದ ಕೋಳಿಯಂತೆ ತಲೆದೂಗುತ್ತ ಬೈಲೂರಿಗೆ ಮರಳಿ ಬಂದನು.

ಆ ಮರುದಿನ ಗುರಿಕಾರ ಲಕ್ಕಣ್ಣನು ಪಾಂಡು ಕಮ್ತಿಯರ ಭೇಟಿ ಮಾಡಿ, ಕಾವೇರಿಯಲ್ಲಿ ಗಡದ್ದಿನ ಊಟ ಹೊಡೆದು—ಈ ನಿಮ್ಮ ಉಪಕಾರದ ಋಣವನ್ನು ನಾನು ಹೇಗೆ ತೀರಿಸಲಿ?—ಎಂದು ಹಲವು ಹನ್ನೆರಡು ತಡವೆ ಹೇಳುತ್ತಾ ಹೇಳುತ್ತಾ ಕೊನೆಗೆ—ನನ್ನ ಮನೆಗೆ ನಿಮ್ಮನ್ನೆಲ್ಲಾ ಕರೆದುಕೊಂಡು ಹೋಗಬೇಕು. ಆದರೆ ಈಗಲ್ಲ. ನನ್ನ ಗ್ರಹಚಾರ ಇನ್ನೂ ತೀರಲಿಲ್ಲ. ನಂತರ ನಾನೇ ಬಂದು ಕರೆದುಕೊಂಡು ಹೋಗುತ್ತೇನೆ — ಎಂದು ಅಂಗಲಾಚಿ ಹೇಳಿಕೊಂಡು ಅಲ್ಲಿಂದ ಹೊರಟು ಮನೆ ಸೇರಿದನು.

ಹೆಜ್ಜೆ ೬ ಕೊನೆಯ ಕಣ್ಣೀರು

ಆ ತಡವೆ ಮನೆ ಸೇರಿದ ಮೇಲೆ ಗುರಿಕಾರ ಲಕ್ಕಣ್ಣನ ಮರ್ಜಿಯೇ ಬೇರೆ ರೀತಿಯಾಗಿದ್ದಿತು. ಪ್ರಪಂಚವನ್ನೇ ಅವಜ್ಞೆಯಿಂದ ಕಾಣುವ ಒಂದು ತರದ ಭಾವನೆ ಅವನಲ್ಲಿ ಮೂಡಿಬಂದು ಎಲ್ಲವನ್ನು ಹುಸಿನಗೆ ಯಿಂದಲೇ ತೇಲಿಸಿ ಬಿಡುತಿದ್ದನು. ಅವನು ಬಂದ ಮೇಲೆ ಇನ್ನು ಏನೆಲ್ಲ ಬಿರುಗಾಳಿ ಬೀಸಲಿದೆಯೋ ಎಂದು ಅಂಜಿಕೊಂಡಿದ್ದ ತಂಕರ ಮತ್ತು ರಾಮಿ ಅವನ ಅಂತಹ ವರ್ತನೆಯಿಂದಾಗಿ ಸುಸ್ತಾಗಿ ಹೋದರು. ಅವನೇ ನಾದರೂ ಗದ್ದಲ ಮಾಡಿದರೆ ಅದನ್ನೇ ಕಾರಣವಾಗಿ ಕಲ್ಪಿಸಿಕೊಂಡು ಮನೆ ಬಿಟ್ಟು ಹೊರ ನಡೆಯಬೇಕೆಂದು ಎಣಿಸಿಕೊಂಡಿದ್ದ ರಾಮಿ ಗುರಿಕಾರನ ಸ್ಥೈರಣೆಯಿಂದಾಗಿ ಸೋತೇಹೋದಳು. ಆದರೆ ಅವನ ಹುಸಿನಗೆಯ ವಕ್ರದೃಷ್ಟಿಯು ಬಿದ್ದಾಗಲೆಲ್ಲಾ ಅವರಿಬ್ಬರ ಎದೆಯಲ್ಲಿ ಒಂದೊಂದು ಕಣೆಯು ಸೇರಿ ನಾಟುತಿದ್ದಿತು. ಆದುದರಿಂದ ದಿನದ ಹೆಚ್ಚಿನ ಸಮಯ ಅವನ ಕಣ್ಣು ತಪ್ಪಿಸುವುದರಲ್ಲೇ ಅವರು ಸಫಲಯತ್ನರಾಗುತಿದ್ದರು!

ಇದಕ್ಕೂ ಹೆಚ್ಚಿನದಾಗಿ ಬಂದ ಕೆಲವೇ ದಿನಗಳಲ್ಲಿ ಲಕ್ಕಣ್ಣನು ಸೀನಪ್ಪನ ಹೋಟೆಲಿಗೆ ಹೊಕ್ಕು ಒಂದು ಲೋಟ ಚಾ ಕುಡಿದು ಹೊರಬಂದುದರಿಂದ ಅವರ ಅಹಂಕಾರಕ್ಕೆ ಮಹದಾಘಾತವಾಯಿತು! ಇದರಿಂದ ಮತ್ತೇನಿಲ್ಲವಾದರೂ ಗೌರಿಯ ನಾಲಗೆಯು ಮತ್ತಷ್ಟು ಹರಿತವಾಗಿ—ರಾಮಿ ಮಾವನನ್ನು ಜೈಲಿಗೆ ಕಳುಹಿಸಿದರೇನಾಯಿತು. ತುಂಗಮ್ಮ ಹೇಗಾದರೂ

ಬಿಡಿಸಿಕೊಂಡು ಬಂದಳಲ್ಲ? ರಾಮಿ ಯಜಮಾನಿಕೆಯ ಕನಸುಕಂಡದ್ದೇ ಬಂತಷ್ಟೆ!—ಎಂಬ ಬಾಣ ಪರಂಪರೆಗಳ ಪ್ರಯೋಗ ಧಾರಾಳವಾಗಿ ನಡೆದು ಮತ್ತೆ ರಾಮಿ ಆ ರಸ್ತೆಯಲ್ಲಿ ತಿರುಗುವುದನ್ನೇ ಬಿಡಬೇಕಾಯಿತು!

ಹೀಗೆ ಇಡೀ ಪ್ರಪಂಚವೇ ತನ್ನ ಪಾವನವಾದ ಹೆಸರು ರಾಮಿಯನ್ನು ಹರಾಮಿಯಾಗಿ ತಿದ್ದುಪಡಿ ಮಾಡಿಕೊಂಡ ಮೇಲೆ ಅಕಸ್ಮಾತ್ತಾಗಿ ಅವಳಿಗೆ ಒಂದು ಉದರಶೂಲೆ ರೋಗ ತೊಡಗಿದಂತಾಯಿತು! ಸುಬ್ಬಣ್ಣ–ತುಂಗಮ್ಮ ಗೋವಿಂದ ಈ ಹೆಸರುಗಳ ಪುನಶ್ಚರಣೆಯೇ ಅವಳ ಹೊಟ್ಟೆಯೊಳಗೆ ಹಳಸಿ ವಿಷವಾಗಿ ಪರಿಣಮಿಸಿದಂತೆ ಹೊದಿಕೆ ಹೊದೆದು ದಿನವೆಲ್ಲ ಅಯ್ಯೋ ಮುಯ್ಯೋ—ಎಂದು ಗೋಳಾಡುವ ರೋಗ ಪ್ರಬಲವಾಯಿತು. ಆದರೆ ಇದಕ್ಕೂ ಗುರಿಕಾರ ಮಾತನಾಡದೆ ಹುಸಿನಗೆಯಲ್ಲೇ ತೇಲಿಸಿಬಿಡು ತಿದ್ದನು–ಎಂದ ಮೇಲೆ ಇದರಲ್ಲೂ ಅವಳೇ ಸೋತುಹೋದಳು!

ಕೊನೆಗೆ ಒಂದು ದಿನ ತನ್ನ ಹೊದಿಕೆಯನ್ನು ದೂರ ಬಿಸುಟು— ನಾನು ಯಾರಿಗೂ ಬೇಡವಾದ ಮೇಲೆ ಮತ್ತೆ ಯಾರಿಗಾಗಿ ಈ ಹಾಳು ಮನೆಯಲ್ಲಿ ಸಾಯಬೇಕು? ಎಂದಳು.

ಬೇಡ ಎಂದವರು ಯಾರು?—ಅದು ಅತ್ತೆಯ ಮಾತು.

ಬೇಕಾಗಿದ್ದರೆ ಒಂದು ದಿನವಾದರೂ ಯಾರಾದರೂ ನನ್ನ ಹತ್ತಿರ ಬಂದು ನೋಡುತ್ತಿರಲಿಲ್ಲವೆ?

ನೀನೇ ಸುಖವಾಗಿ ಮಲಗಿದ ಮೇಲೆ ನಾವು ಬೇರೆ ನೋಡುವುದೇನು?

ಸುಖವಾಗಿ? ಈ ಸುಖ ನಿಮಗೇಯಿರಲಿ. ನನಗೆ ಬೇಡ. ನಾನು ಈಗಲೇ ಹೊರಟೆ!

ಯಾರು ಬೇಡವೆಂದರು?

ಹೋ ಹಾಗೋ! ಆ ಗತಿಯಿಲ್ಲದ ತುಂಗಮ್ಮನನ್ನು ಮನೆಯಿಂದ ಹೊರಗೆ ಹಾಕಿದ ಹಾಗಲ್ಲ. ಹಾಗೆಲ್ಲಾ ನಾನು ಹೊರಡುವವಳಲ್ಲ!— ಎಂದು ಪುನಃ ಗಟ್ಟಿಯಾಗಿ ಹೊದಿಕೆ ಹೊದೆದು ಮಲಗಿ ಬಿಟ್ಟಳು.

ಹೀಗೆಯೇ ಎಷ್ಟು ದಿನ ಮಲಗಬಹುದು? ಇಂತಹ ಹೊಟ್ಟೆ ನೋವಿನ ಸುದ್ದಿ ಕೇಳಿ ಗೌರಿಯು—ನಮ್ಮ ರಾಮಿಗೆ ಹೊಟ್ಟೆ ನೋವಂತೆ! ಬಹಳ ಸಮಯದ ಮೇಲೆ ಬಂದ ಹೊಟ್ಟೆ ನೋವು. ದೇವರು ಒಳ್ಳೇದು ಮಾಡಿ ಬೇಗನೆ ಒಂದು ಕರು ಹಾಕಿದರೆ——!

ಈ ವರ್ತಮಾನ ರಾಮಿಯ ಕಿವಿಗೆ ಶಲಾಕೆಯಂತೆ ಬಂದುಮುಟ್ಟಿತು. ಇಂತಹ ಕುಚೋದ್ಯ ಅವಳ ನೈತಿಕ ಮಟ್ಟವನ್ನೇ ಪ್ರಶ್ನಿಸುವಂತಿದೆ! ಆ ಹಾಳು ಮಲೆಯಾಳಿಯ ಅವಾಂತರ ಊರಿಗೆ ತಿಳಿದಿರಬಹುದೆ? —ಅವಳ ಎದೆ ಹಾರತೊಡಗಿತು.

ಇದೂ ಸಾಲದೆ ಒಂದು ದಿನ ತಂಕರ ಒಂದು ಹೊಸ ಪ್ರಕರಣವನ್ನೇ ಮನೆಗೆ ತಂದು ಬಿಕ್ಕಿದ. ಆದಿನ ಸೊಪ್ಪಿಗೆ ಹೋದವನು ಒಂದು ಕೋರಿ ಟೊಪ್ಪಿಯನ್ನು ತಲೆಯ ಮೇಲಿರಿಸಿಕೊಂಡು ಮೆರವಣಿಗೆ ಬಂದಂತೆ ಬಂದ. ಬಂದು ತನ್ನ ಹೆಂಡತಿಯ ಮುಂದೆ ನಿಂತು-- ನೋಡು! ಈ ಕೋರಿಟೊಪ್ಪಿ ಎಷ್ಟು ಚೆನ್ನಾಗಿದೆ—

ನಿಮಗೆಲ್ಲಿ ಸಿಕ್ಕಿತು ಇದು ?

ಇದು ನೋಡು ನೀನು ಆದಿನ ಆ ಬಂಡೆಯ ಮೇಲೆ ರಾತ್ರಿ ಕುಳಿತಿದ್ದಿಯಲ್ಲ. ಅಲ್ಲೇ ಪಕ್ಕದಲ್ಲಿ ಪೊದೆಯ ಮಧ್ಯ ಬಿದ್ದಿದ್ದಿತು. ಅದು ಆ ಮಲೆಯಾಳಿ ಪೋಲೀಸಿದ್ದಿರಬೇಕು. ಅಲ್ಲಿಗೆ ಹೇಗೆ ಬಂತು ಹೇಳು ? ಎಂದು ಏನೂ ಬುದ್ಧಿಯಿಲ್ಲದೆ ಕೇಳಿಯೇ ಬಿಟ್ಟನು.

ಮತ್ತೆ ಅವಳಿಂದ ಮಲಗಿರಲು ಸಾಧ್ಯವಾಗಲಿಲ್ಲ. ಮೇಲೆದ್ದು ಹಾರಿ ಅವನ ತಲೆಯಿಂದ ಅದನ್ನು ಕಿತ್ತು ಬೆಂಕಿಗೆ ಹಾಕಿ ಸುಟ್ಟುಬಿಟ್ಟಳು !

ಮರುದಿನ ಮಸುಕು ಮುಂಜಾವದಲ್ಲಿ ಅವಳು ತನ್ನ ಸರಕನ್ನು ತಲೆಯ ಮೇಲೇರಿಸಿಕೊಂಡು ತವರುಮನೆಗೆ ಹೊರಟುಬಿಟ್ಟಳು. ತಂಕರನೂ ಅವಳ ಎರಡು ಕಡಸುಗಳನ್ನು ಹಿಡಿದುಕೊಂಡು ಬೆನ್ನು ಹತ್ತಿದನು. ಆದರೆ ಆ ಬೆಳಗ್ಗೆ ಮುಂಚೆ ಶೀನಪ್ಪ ಶನಿಯಂತೆ ಅವರನ್ನು ಕಾಣಬೇಕೆ? ಅವನ ಅಟ್ಟಹಾಸ ಅವರಿಬ್ಬರನ್ನೂ ಹೊಳೆಯದಿಬ್ಬದ ವರೆಗೆ ಬೆನ್ನಟ್ಟಿ ದಬ್ಬಿಬಿಟ್ಟಿತು. ಅಷ್ಟಾ ಇದು ಅವರ [illegible]! ಅಂತೂ

ತವರುಮನೆ ಸೇರುವನಕವೂ ಆ ನಗೆ ಅದರೊಂದಿಗೆ ಅವನು ಉಪಚಾರವಾಗಿ ಹೇಳಿದ—ಕಾಫಿ ಬೇಕೇ ಬಿಸಿಕಾಫಿ—ಅಥವಾ ಒಂದು ಬಾಟ್ಲಿ ಗರಂ ಗಂಗರ—ಹೊಟ್ಟೆನೋವಿಗೆ ದಿವ್ಯೌಷಧ!—ಎಂಬ ಮಾತು ಸಹ ಅವರ ಕಿವಿಯಲ್ಲಿ ಗುಂಗುಂ ಸುಳಿದಾಡುತ್ತಲೆಯಿದ್ದಿತು!

ಗಂಗರದ ಮಾತು ಬಂದಾಗ ಏನೋ ಯೋಚಿಸಿಕೊಂಡವನಂತೆ ತಂಕರ ತಲೆ ತುರಿಸಿಕೊಂಡು ಕೇಳಿದ—ಅದೆಲ್ಲ ಸಮ. ಆ ದಿನ ರಾತ್ರಿ ನೀನು ಕೂಗಿದ್ದು ಏಕೆ?

ರಾಮಿಗೆ ಇದರಿಂದಾಗಿ ಸಿಡಿಲುಬಡಿದಂತಾಯಿತು. ಆದರೂ ತೋರಿಸಿಕೊಳ್ಳದೆ ತಲೆಹೊರೆಯನ್ನು ಕೆಳಗಿಳಿಸಿ ದುರದುರನೆ ಅವನನ್ನು ನೋಡುತ್ತ ಹೇಳಿದಳು—

ನಿಮಗೆ ಮುಖದಲ್ಲಿ ಕಣ್ಣಿಲ್ಲದೆ ಹೋದರೂ ನನಗೆ ಕಣ್ಣಿದೆ. ಮಾವನವರನ್ನು ಕಂಡೇ ನಾನು ಕೂಗಿಕೊಂಡೆ!—

ತಂಕರ ಮತ್ತೊಮ್ಮೆ ಯೋಚಿಸಿ ತಲೆ ತುರಿಸುತ್ತಾ ಹಾಗಾದರೆ ಆ ಕೋರೆ ಟೊಪ್ಪಿ ಅಲ್ಲಿ ಏಕೆ ಬಿದ್ದಿರಬೇಕಿತ್ತು? ಅದನ್ನು ನೀನು ಸುಟ್ಟು ಹಾಕಿದ್ದು ಏತಕ್ಕೆ?

ಸುಟ್ಟು ಹಾಕದೆ ನಿಮ್ಮ ತಲೆಯ ಮೇಲಿಟ್ಟು ಮೆರವಣಿಗೆ ತೆಗೆಯಬೇಕಿತ್ತೆ? ಎಂದವಳೇ ಸೊಂಟ ಬಿಗಿದು ನಿಂತು ಮತ್ತೆ ಕೇಳಿದಳು—ನಿಮಗೆ ಇಷ್ಟವಿದ್ದರೆ— ನನ್ನ ಮೇಲೆ ವಿಶ್ವಾಸವಿದ್ದರೆ ನನ್ನ ಕೂಡೆ ಬರಬಹುದು. ಅಲ್ಲವಾದರೆ ಈಗಲೇ ಹಿಂದೆ ಹೋಗಬಹುದು. ನನ್ನ ಹಾದಿ ನಾನು ಹಿಡಿಯುತ್ತೇನೆ! ಒತ್ತಾಯವಿಲ್ಲ!—

ತಂಕರ ಪೆಟ್ಟುತಿಂದ ನಾಯಿಯಂತೆ ಬಾಲ ಮುದುಡಿಸಿ ಅವಳ ಬೆನ್ನು ಹಿಡಿದು ಮೌನವಾಗಿ ನಡೆದನು! ಹಾಗೆಲ್ಲ ಹೆಂಗುಸು ಸೋಲುವಂತಿದ್ದರೆ ಪ್ರಪಂಚವೇ ನಡೆಯುತಿದ್ದಿಲ್ಲ! ಇಂತಹ ಮಾಯೆಯ ಸುಳಿಗುಂಡಿ ಸುತ್ತುವುದರಿಂದಲೇ ಸಂಸಾರವು ಅವ್ಯಾಹತವಾಗಿ ಸಾಗುತಿದೆ!

ಮರುದಿನ ಅಕ್ಕಮ್ಮ ಮನೆಯ ಕೋಣೆ ಕೋಣೆ ಸುಳಿಯುತ್ತಾ ಬಂದಳು. ಚಾವಡಿಯಲ್ಲಿ ಕ್ಷಣಕಾಲ ನಿಂತಳು. ಆ ಅಂಗಳ—ಹಟ್ಟಿ

ಅವುಗಳನ್ನೆಲ್ಲಾ ಕಣ್ಣಿಟ್ಟು ನೋಡಿದಳು. ಅಂತಹ ದೊಡ್ಡ ಮನೆಯಲ್ಲಿ ಇನ್ನು ಇರುವವರು ಯಾರು? ಅರ್ಧ ಮೈಲಿನಷ್ಟು ದೂರದಲ್ಲಿರುವ ಬಾಕಿ ಮೂರು ಬೈಲುಗದ್ದೆಗೆ ಹಟ್ಟಿಯ ಗೊಬ್ಬರ ಹೊತ್ತುಹಾಕುವವರು ಯಾರು? ನಾಲ್ಕು ಜೋಡು ಹೂಡುವ ಗದ್ದೆಗಳೆಲ್ಲ ಕಾಲಕ್ಕೆ ಸರಿಯಾಗಿ ಹದಗೊಳ್ಳುವ ಬಗೆ ಹೇಗೆ? ಇವುಗಳನ್ನೆಲ್ಲಾ ಮನಸ್ಸಿನಲ್ಲೇ ಅನುಭವಿಸಿ ಗುರಿಕಾರ ನೊಡನೆ ಮೆಲ್ಲನೆ ಕೇಳಿದಳು—

ಇಷ್ಟು ದೊಡ್ಡಮನೆ ಇನ್ನು ಯಾರಿಗೆ?

ಈ ಮನೆಯಲ್ಲಿ ಜೀವ ಹಿಡಿದು ಬದುಕಿಕೊಂಡಿರುವವರಿಗೆ—!

ಈ ಮನೆ ಇನ್ನು ನಮ್ಮನ್ನು ಬದುಕಲು ಬಿಡುವಂತಿಲ್ಲ. ನಮ್ಮನ್ನೇ ತಿಂದು ಬಿಟ್ಟೀತು!

ಹೋದವರೆಲ್ಲಾ ಹಿಂದೆ ಬಾರದಿದ್ದರೆ ಏನು ಮಾಡಲು ಬಂದೀತು?

ನಾವೇ ಕೇಳಿ ನೋಡಬೇಕು.

ಇದನ್ನು ಈ ಮೊದಲೇ ಕೇಳಬೇಕಿದ್ದಿತು. ಈಗ ಅಲ್ಲ!

ಅಕ್ಕಮ್ಮನಿಗೆ ತನ್ನ ತಪ್ಪಿನ ಅರಿವಾಯಿತು. ಆ ದೊಡ್ಡ ಮನೆಯ ಯಜಮಾನಿತಿಯಾಗಿ ತಾನು ಈ ಮೊದಲೇ ಸುಬ್ಬಣ್ಣ ಮನೆ ಬಿಡುವ ವೇಳೆ ಯಲ್ಲೇ ಅದನ್ನು ತಡೆದು ನಿಲ್ಲಿಸಬೇಕಿದ್ದಿತು. ಒಮ್ಮೆ ಅಂತಹ ದುರಾ ಗ್ರಹದ ಧೈರ್ಯ ಮನೆಸುಂದಿಯಲ್ಲಿ ಮೂಡಿತೆಂದರೆ ಮತ್ತೆ ಅದೇ ಜಾಡ್ಯವು ಮೇಲಿನ ಜನಾಂಗದಲ್ಲಿಯೂ ಹಬ್ಬುವುದು. ಆಗ ತಾನು ಮಾಡಿದುದೇನು? ಕಾವೇರಿಯನ್ನು ತಪ್ಪಾಗಿ ತಿಳಿದುಕೊಂಡು ತುಂಗಮ್ಮನನ್ನು ಸದರು ಮಾಡಿ ಸುಬ್ಬಣ್ಣನ ಮನಸ್ಸು ನೋಯಿಸಿದುದರಿಂದ ಈ ಅವಾಂತರಗಳ ಮೊಳಕೆಮೂಡಿತು. ಈಗ ಅಂತಹ ತಪ್ಪುಗಳನ್ನೆಲ್ಲ ಅವಳೇ ತಿದ್ದುತ್ತ ಹೋಗಬೇಕಲ್ಲದೆ ಗುರಿಕಾರನಲ್ಲ!

ಕೊನೆಗೆ—ಆಗಲಿ. ನಾನೇ ನೋಡುತ್ತೇನೆ—ಎಂದಳವಳು.

ಹಾ ನೀನೇ ನೋಡಬೇಕು. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಹಾಕಿದುದರಿಂದ ಮನೆಮುರಿದು ಹೋಯಿತು! ಪಾಪ!—

ಅಂದು ರಾಮಿಯ ಮನಸ್ಸಂತೋಷಕ್ಕಾಗಿ ತುಂಗಮ್ಮನಿಗೆ ಒಲೆಯ ಕಟ್ಟಿಗೆಯಿಂದ ಹೊಡೆಸಿ—ಅಯ್ಯೋ!---ಬಹಳ ಅನ್ಯಾಯವಾಯಿತು! ಈಗ ಮನೆಯ ಮರ್ಯಾದೆಯುಳಿಯಬೇಕಾದರೆ ಅವಳ ಕನಿಕರದ ಭಿಕ್ಷೆಯೇ ಬೇಕಾಯಿತಲ್ಲ?

ಲಕ್ಕಣ್ಣ ನಿರ್ಧಾರವಾಗಿ ಹೇಳಿದ—ನೋಡು ಅಕ್ಕಮ್ಮ! ನಿನ್ನ ಮಕ್ಕಳು ನಿನ್ನ ಮರಿಗಳು--ನಿನ್ನ ಮನೆ ಬಾಗಿಲು ಎಲ್ಲಾ ನೀನೇ ಸುಧಾರಿಸಿಕೊಂಡು ಹೋಗಬೇಕು. ನಾನೇನೂ ಮನೆ ಹಾಳುಮಾಡಲಿಲ್ಲ. ಈ ತನಕವೂ ಉಳಿಸುತ್ತಾಬಂದಿದ್ದೇನೆ. ಇದರಲ್ಲೇ ನನ್ನ ರಕ್ತ ನೀರಾಗಿ ಹೋಗಿದೆ. ನಿನಗೇ ಗೊತ್ತಿದೆ--ನನ್ನ ಹೆಂಡತಿ ಮಕ್ಕಳಿಗೇನಾದರೂ ನಾನು ದೋಚಿಕೊಟ್ಟು ಕುಟುಂಬಕ್ಕೆ ಎರಡೆಣಿಸಲಿಲ್ಲ! ನನ್ನ ತಂಗಿ—ತಂಗಿಯ ಮಕ್ಕಳೇ ನನ್ನ ಕುಟುಂಬ!

ಈ ಮಾತನ್ನು ಅಲ್ಲಗಳೆಯುವವರಾರು? ಆ ವಠಾರದಲ್ಲಿ—ಆ ನೆರೆಕರೆಯಲ್ಲಿ—ಆ ಊರಲ್ಲಿ ಯಾರೊಡನೆ ಕೇಳಿದರೂ ಎಲ್ಲರೂ ಇದನ್ನು ಒಪ್ಪಲೇ ಬೇಕಿದ್ದಿತು—ಗುರಿಕಾರ ಲಕ್ಕಣ್ಣ ಕುಟುಂಬ ದ್ರೋಹಿಯಲ್ಲ!

ತನ್ನ ತಲೆಯ ಮೇಲೆಯೇ ಈ ಎಲ್ಲಾ ಭಾರ ಹೇರಿಸಲ್ಪಟ್ಟಾಗ ಅಕ್ಕಮ್ಮನಿಗೆ ತಲೆ ಸಿಡಿತ ತೊಡಗಿತು. ಆ ತುಂಗಮ್ಮನ ದೀನ ಮುಖವು ಅವಳಿಗೆ ಸ್ವಪ್ನಪೀಡೆಯಾಗಿ ಕಾಣತೊಡಗಿತು. ಅವಳ ಆತ್ಮದೊಡನೆಯೇ ಅವಳು ಪ್ರಶ್ನಿಸಿಕೊಂಡಳು. ಆ ಕಾವೇರಿಯ ಕತೆ ಒತ್ತಟ್ಟಗಿರಲಿ. ಆ ಮಗು ಸುಬ್ಬಣ್ಣನ ಮಗು---ಆ ಚೊಚ್ಚಲ ಮಗುವನ್ನು ತಾನು ಕಾಣಲು ಹೋಗಿರುವೆನೆ? ಹೇಗಿದ್ದರೂ ತನ್ನ ಮನೆತನದ ಗೌರವ ಕಾಯಲೆಂದು ತವರನ್ನೂ ದೂರಬಿಟ್ಟು ಕುಳಿತ ಆ ಹೆಣ್ಣು ಮಗಳನ್ನು ಹೆತ್ತ ಸಮಯವಾದರೂ ಒಂದೇ ಒಂದು ಬಾರಿಯಾದರೂ ಕಂಡಿರುವೆನೆ? ತನ್ನ ಮಗ—ಸೊಸೆ ಮೊಮ್ಮಗಳು ಇವರೇ ತನ್ನ ಈ ಕೊರಡಿಗೆ ಬೇಡವಾದ ಮೇಲೆ ಅವರ ಕಣ್ಣೀರಿನಲ್ಲಿ ತನ್ನ ಒಂದೇ ಒಂದು ಕನಿಕರದ ಸುಯ್ಲು ಕೂಡಿ ಹೋಗದ ಮೇಲೆ ಜಗತ್ತಿನಲ್ಲಿ ಹೆತ್ತಬ್ಬೆಯಾಗಿ ತಾನು ಹುಟ್ಟಿ ಬೆಳೆದು ಏನು ಫಲಬಂದಂತಾಯಿತು? ಇಷ್ಟು ವಿವೇಕ ತನಗೆ ಈ ಮೊದಲೇ ತಿಳಿಯ

ಬೇಡಿದ್ದಿತೆ? ಆಗಲಾದರೆ ಎಲ್ಲವನ್ನೂ ಮರೆತು ಕ್ಷಮಿಸಿ ಕರೆಯುವ ದೊಡ್ಡ ತನದಿಂದ ತಾನು ಅವರ ಮನೆಬಾಗಿಲಿಗೆ ಹೋಗಬಹುದಿದ್ದಿತು. ಈಗಲಾದರೆ ಅವರ ಕಾಣದ ಹಂಗಿಗೆ ಬಿದ್ದು ಉಪಕಾರಕ್ಕೆ ಕೈಮುಗಿದು ಕೃತಜ್ಞತೆಯ ಕರ್ತವ್ಯವಾಗಿ ಹೋಗಬೇಕಾದ ಪರಿಸ್ಥಿತಿ. ಆದರೂ ಚಿಂತಿಲ್ಲ. ತಾಯಿಯಾದವಳು ಕೊನೆಗಾದರೂ ತನ್ನ ತಪ್ಪನ್ನು ತಿದ್ದಿಕೊಳ್ಳುವುದರಲ್ಲಿ ಗೌರವವಿದೆ !— ಹೀಗೆಂದು ಅವಳ ಆತ್ಮವು ದೇಹವನ್ನು ಆಕಡೆ ಮೆಲ್ಲ ಮೆಲ್ಲನೆ ತಳ್ಳತೊಡಗಿತು !

ಒಂದು ಬೆಳಿಗ್ಗೆ ಆ ಕೊರಡು ತಳ್ಳಲ್ಪಟ್ಟು ತುಂಗಮ್ಮನ ಮನೆಯ ಬಾಗಿಲ ಮುಂದೆ ಬಂದು ನಿಂತಿತು!

ಸುಬ್ಬಣ್ಣನವರೆಲ್ಲ ಆಶ್ಚರ್ಯದಿಂದ ಮುಖ ಮುಖ ನೋಡಿಕೊಂಡರು. ಗೋವಿಂದ ಒಂದು ಕೊಡ ನೀರು ತಂಬಿಗೆ ತಂದು ಕಾಲು ತೊಳೆಯಲು ಮುಂದಿಟ್ಟನು.

ಅಯ್ಯೋ ಅತ್ತೆ! ಒಂದು ಮಾತು ಹೇಳಿ ಕಳುಹಿಸಬಾರದಿದ್ದಿತೆ ? ಗೋವಿಂದ ಗಾಡಿ ತರುತಿದ್ದನಲ್ಲ ?— ಎಂದಳು ತುಂಗಮ್ಮ.

ಅಕ್ಕಮ್ಮ ಮಾತನಾಡದೆ ಕಾಲು ತೊಳೆದು ಅಂಗಳ ಸುತ್ತಾಡಿ ಹಟ್ಟಿಯ ಕಡೆ ಇಣಿಕಿ ಬಂದು ಮತ್ತೊಮ್ಮೆ ಕಾಲು ತೊಳೆದು ಚಾವಡಿಯಲ್ಲಿ ಕುಳಿತು ಸುತ್ತಲೂ ನೋಡಿದಳು. ಕೊಂಚ ತಡೆದು ಅಡುಗೆಮನೆ ನಡುಮನೆ ಪಕ್ಕದ ಕೋಣೆಗೆ ಹೊಕ್ಕಿ ಹೊರಟಳು. ನಂತರ ಒಂದು ವಿಧದ ಸಮಾಧಾನದಿಂದ ಉಸಿರುಬಿಟ್ಟಳು. ಸಹಜ. ಆ ಮನೆಯಲ್ಲಿ ಹೊಸತಾಗಿ ಗೃಹಕೃತ್ಯ ತೊಡಗಿದವರ ಅರ್ಥಮರ್ಥ ಪ್ರವೃತ್ತಿಯಾಗಲಿ ಆಲಸ್ಯದ ಛಾಯೆಯಾಗಲಿ ಕಂಡು ಬರಲಿಲ್ಲ. ಅಡುಗೆ ಮನೆ ಚೊಕ್ಕಟವಾಗಿದ್ದುದು ತುಂಗಮ್ಮನಿಗೆ ಗೌರವ. ಅಕ್ಕಿಯ ಕೋಣೆ ತುಂಬಿದ್ದುದು ಸುಬ್ಬನ ಗೌರವ. ಹಟ್ಟಿಕೊಟ್ಟಿಗೆ ಚೆನ್ನಾಗಿದ್ದುದು ಗೋವಿಂದನ ಗೌರವ. ಈ ಎಲ್ಲಾ ಗೌರವಗಳು ಕುಂದಿರದೆ ಕಳೆತುಂಬಿ ಪರಿಪೂರ್ಣವಾಗಿದ್ದುವು ! ಆದುದರಿಂದ ತಾಯಾದವಳು ಮಕ್ಕಳ ಸಾಧನ ಸಂಪತ್ತಿಗೆ ಸಮಾಧಾನಗೊಳ್ಳದೆ ಮತ್ತೇನು ಮಾಡಬೇಕು ? ಇಷ್ಟನ್ನೆಲ್ಲಾ ಕಂಡುಕೊಂಡ

ಮೇಲೆ ಹೊಟ್ಟೆ ತುಂಬಿ ಬರುವ ತೇಗಿನ ರೀತಿ ಒಂದು ನಗೆ ಅವಳ ಮುಖದ ಮೇಲೆ ಮೂಡಿ ಬಂದಿತು. ನಂತರ ಒಳಗೆ ಹೋಗಿ ತೊಟ್ಟಿಲಲ್ಲಿ ಮಲಗಿ ಕಣ್ಣು ಕಣ್ಣು ಬಿಡುತಿದ್ದ ಮುದ್ದು ಮಗುವನ್ನು ಕೈಗೆ ತೆಗೆದುಕೊಂಡು —ಬಾ ತುಂಗೂ ! ಜಾವಡಿಗೆ ಬಾ— ಎಂದು ಹೇಳಿ ಅಲ್ಲೇ ಕಾಲುಚಾಚಿ ಕುಳಿತುಕೊಂಡಳು.

ಯಾರಿಗೂ ಏನು ಮಾತಾಡಬೇಕೆಂದು ತೋರಲಿಲ್ಲ. ಈ ಕೆಲ ವರ್ಷಗಳಿಂದ ಅವರೊಳಗಿನ ಬಳಕೆಯ ಬೆಸುಗೆಯು ಬಿಟ್ಟು ಹೋಗಿರುವುದರಿಂದ ಒಂದು ಚಿಕ್ಕ ಕಣಿವೆ ಅವರಿವರ ಮಧ್ಯೆ ಬಿದ್ದಿರುವಂತೆ ಭಾಸವಾಗುತಿದ್ದಿತು!

ಕೊನೆಗೆ ತುಂಗಮ್ಮನೇ ಉಪಚಾರವಾಗಿ ಹೇಳಿದಳು— ಅತ್ತೆಯಮ್ಮ ಈಕಡೆ ಈತನಕವೂ ಬರಲೇಯಿಲ್ಲ! --

ಬರಲಿಕ್ಕೆ ನೀನೇನು ಹೇಳಿ ಕಳುಹಿಸಿದ್ದೀಯ?

ನಿಮ್ಮ ಮನೆಗೆ ನಾನೇನು ಹೇಳಿ ಕಳುಹಿಸುವುದು?

ಹಾಗಾದರೆ ನನ್ನ ಮನೆಗೆ ನಾನು ಯಾವಾಗ ಬಂದರೇನು?

ನಮ್ಮನ್ನೆಲ್ಲಾ ವಿಚಾರಿಸಿ ನೋಡಿಕೊಳ್ಳುವುದು ಬೇಡವೆ?

ಅಕ್ಕಮ್ಮ ಅವಳನ್ನು ಚೆನ್ನಾಗಿ ನೋಡಿಕೊಂಡಳು. ತುಂಗಮ್ಮ ಈಗಲೀಗ ಹೆತ್ತು ಮೈತುಂಬಿ ಬಹಳ ಸೊಗಸಾಗಿ ಕಾಣುತಿದ್ದಳು. ತುಂಬುಗಲ್ಲದ ಬಟ್ಟಲು ಮುಖ ಲಕ್ಷಣವಾಗಿ ತೋರುತಿದ್ದಿತು. ಅದಕ್ಕನುಗುಣವಾಗಿ ಮನಬಿಚ್ಚಿ ಮಧುರವಾಗಿ ಮಾತನಾಡಬಲ್ಲ ಯೋಗ್ಯತೆ ಅವಳ ರೂಪಕ್ಕೊಂದು ಒಪ್ಪವಿಟ್ಟಂತಿದ್ದಿತು. ಆದುದರಿಂದ ಚೆನ್ನಾಗಿ ನೋಡಿ ಅವಳ ಬೆನ್ನು ತಡವಿ ಸಂತೋಷದಿಂದ ಹೇಳಿದಳು-ಅದಕ್ಕಾಗಿಯೇ ಈಗ ಬಂದಿದ್ದೇನೆ ಅಣ್ಣನೂ ಬರಬೇಕೆಂದಿದ್ದ. ಆದರೆ ನಾನು ಮನೆ ಹೊರಟದ್ದರಿಂದ ಅವನು ಹೊರಡುವಂತಿಲ್ಲ. ನಮ್ಮ ಮನೆ ಈಗ ಬಹಳ ಚಿಕ್ಕದಾಗಿ ಹೋಗಿದೆ ನೋಡು!—

ಆ ಮಾತಿನ ಅರ್ಥ—ವೇದನೆಗಳನ್ನು ತಿಳಿದು ಎಲ್ಲರೂ ಮುಖ ತಗ್ಗಿಸಿದರು. ಅಂದಿನ ದುರ್ಘಟನೆಯ ಮೇಲೆ ಮಾತು ಮುಂದರಿಸಲು ಯಾರೂ ಸಿದ್ಧರಿದ್ದಿಲ್ಲ.

ಮನೆ ಚಿಕ್ಕದಾದ ಮೇಲೆ ಮನೆಯೇ ನಮ್ಮನ್ನು ಹಸಿಹಸಿ ತಿನ್ನ ತೊಡಗುತ್ತದೆ. ಆದರೆ ಎಷ್ಟೋ ವರ್ಷಗಳಿಂದ ಹಾಲನ್ನ ತಿಂದ ಮನೆ. ಅದನ್ನು ಹಾಳುಮಾಡಲು ಇಷ್ಟವಿಲ್ಲ. ನೀವೆಲ್ಲಾ ಆ ಕಡೆ ಯಾವಾಗ ಬರುತ್ತೀರಿ? ಎಂದಳು ಅಕ್ಕಮ್ಮ.

ಆ ನೇರವಾದ ಪ್ರಶ್ನೆಗೆ ಉತ್ತರಗೊಡಲಾರದೆ ಎಲ್ಲರೂ ಸುಮ್ಮನಿದ್ದರು. ತುಂಗಮ್ಮ ಗಂಡನ ಮುಖವನ್ನೂ ಸುಬ್ಬಣ್ಣ ಗೋವಿಂದನ ಮುಖವನ್ನೂ ಗೋವಿಂದ ಇದಿರುಗಡೆಯ ಗೋಡೆಯನ್ನು ನೋಡತೊಡಗಿದನು!

ಹೀಗೆಲ್ಲಾ ಹಚ್ಚಿಕೊಂಡರೆ ಸಂಸಾರ ನಡೆಯಲಾರದು. ನಾವೆಲ್ಲಾ ಮುದುಕರಾಗಿ ಇನ್ನು ಹೆಚ್ಚುಕಾಲ ಆ ಜಾಗಿನ ನೀರು ಕುಡಿಯುವಂತಿಲ್ಲ. ಮತ್ತೆ ನಮ್ಮ ದೈವ ಭೂತಗಳಿಗೆಲ್ಲಾ ನೀವೇ ನೀರು ತೋರಿಸುವವರು. ಮೇಲಿನ ಒಳ್ಳೇದು ಕೆಟ್ಟದ್ದೆಲ್ಲಾ ನಿಮ್ಮನ್ನೇ ಹೊಂದಿಕೊಂಡಿದೆ. ನಿಮಗೆ ಬೇಕಾದರೆ ಮನೆ ಬೇಕು—ಇಲ್ಲವಾದರೆ ಮತ್ತೆ ಯಾರಿಗೆ? ಎಂದು ಹೇಳಿ ತುಂಗಮ್ಮನ ಕಡೆ ನೋಡುತ್ತಾ ಅಕ್ಕಮ್ಮ ಮುಂದುವರಿಸಿದಳು.

ಹಿಂದಿನ ಚಿಕ್ಕ ಚಿಕ್ಕ ವಿಚಾರಗಳನ್ನೆಲ್ಲಾ ಒತ್ತಟ್ಟಿಗೆ ಬಿಡುತ್ತಾ ಬರಬೇಕು. ಆ ಹರಕು ಸಂತೆಗಳನ್ನೆಲ್ಲಾ ಹೊರುತ್ತಾ ಹೋದರೆ ನಮ್ಮ ಆಯುಷ್ಯ ಸಾಲಲಾರದು. ಒಮ್ಮೆ ಕೆಟ್ಟಮಾತು ಬಂದರೆ ಅದನ್ನೆ ಮತ್ತೊಮ್ಮೆ ಸಮಾಧಾನವಾಗಿ ತೆಗೆದುಕೊಳ್ಳಬೇಕು. ಬಿಟ್ಟು ಬಿಡು ಮಗೂ! ಅದನ್ನೆಲ್ಲಾ ಹಚ್ಚಿಕೊಳ್ಳಬೇಡ. ಏನೋ ಅದೊಂದು ಕೆಟ್ಟಗಳಿಗೆ—

ಇಲ್ಲ ಅತ್ತೆಮ್ಮ! ನನಗೇನೂ ಬೇಸರವಿಲ್ಲ—

ಸಹಜ. ನನಗೆ ಗೊತ್ತಿದೆ. ನಿನ್ನ ಉಪಕಾರವನ್ನು ನಾವು ಹೇಗೆ ಮರೆಯಬೇಕು? ನಿಮ್ಮೆಲ್ಲರ ಮನಸ್ಸು ದೊಡ್ಡದು ಎಂತ ನನಗಂದೇ ತಿಳಿದಿದೆ. ಹೋಗಲಿ ಬಿಡು ಆ ಮಾತು. ಈಗ ಅದಕ್ಕಾಗಿ ತಲೆಸುತ್ತಿ ಉಪಯೋಗವಿಲ್ಲ. ಹೇಳು. ನಿನ್ನ ತಾಯಿಗೂ ಹೇಳಿಕಳುಹಿಸಿದ್ದೇನೆ. ಬೇಕಾದರೆ ಅವಳನ್ನೇ ಇಲ್ಲಿಗೆ ಕಳುಹಿಸುತ್ತೇನೆ.

ಅದು ಯಾಕಮ್ಮ? ನೀನು ಹೇಳಿದರೆ ಸಾಲದೆ? ಆದರೆ ನಮ್ಮ ಈ ಬೇಸಾಯ ಇದನ್ನೆಲ್ಲಾ ಬಿಟ್ಟು ಬರುವುದೆಂದರೆ ತುಂಬಾ ನಷ್ಟ. ಆದುದರಿಂದ ನಮ್ಮ ಧನಿಗಳ ಕೂಡ ಕೇಳಬೇಕು. ನಂತರ—ಎಂದು ಸುಬ್ಬಣ್ಣನು ತಡವರಿಸಿದನು.

ಅಂತೂ ಯೋಚಿಸಿನೋಡಿ. ಯಾವ ಬೇಸಾಯಕ್ಕಿಂತಲೂ ಹಿರಿಯರ ಮನೆ ಬೇಸಾಯ ದೊಡ್ಡದು. ನಷ್ಟಕಷ್ಟಗಳನ್ನು ದೇವರು ತುಂಬಿಸಿ ಕೊಡುತ್ತಾನೆ—ಎಂದು ಅಕ್ಕಮ್ಮ ಆ ಮಧ್ಯಾಹ್ನ ಅಲ್ಲೇ ಊಟ ಉಪಚಾರ ತೀರಿಸಿ ಚಿಕ್ಕ ಮಗುವಿಗೆ ತಾನು ತಂದ ಹೊಸ ಅಂಗಿಯನ್ನು ತೊಡಿಸಿ ಮುದ್ದಿಟ್ಟು ತೊಟ್ಟಿಲಲ್ಲಿ ಮಲಗಿಸಿ ಆ ಸಂಜೆ ಅಲ್ಲಿಂದ ಮನೆಗೆ ಹೊರಟಳು.

ಆಕೆ ಹೊರಟು ಹೋದ ಮೇಲೆ ಅವರೆಲ್ಲ ಆ ವಿಚಾರವಾಗಿ ವಿಮರ್ಶಿಸಿಕೊಂಡರು. ಅವರಾರಿಗೂ ಈ ಹೊಸ ಬೇಸಾಯದಲ್ಲಿ ಬೇಸರ ಬಂದದ್ದಿಲ್ಲ. ಈ ತನಕವೂ ಕೈಗೂಡುತ್ತ ಬಂದಿದೆ. ಆದರೆ ಮನೆಬಾಗಿಲನ್ನು ಬಿಟ್ಟು ದೈವದ್ರೋಹಕ್ಕೆ ಗುರಿಯಾಗಿ ಅಪವಾದಕ್ಕೆ ಬೀಳಲು ಯಾರೂ ತಯಾರಿದ್ದಿಲ್ಲ. ಹೀಗಾಗಿ ಅವರೆಲ್ಲರ ಮನಸ್ಸು ತೊಟ್ಟಿಲಿನಂತೆ ಹಿಂದೆ ಮುಂದೆ ತೂಗುತಿದ್ದಿತು.

ಮರುದಿನ ಗುರಿಕಾರ ಲಕ್ಕಣ್ಣ ಬೈಲೂರಿಗೆ ಹೊರಟು ಹೋದನು.

ಅದರ ಮರುದಿನ ಕಾವೇರಿಯು ತನ್ನ ಮಗಳಲ್ಲಿಗೆ ಮೊದಲಬಾರಿಯಾಗಿ ಬಂದಳು!

ಕಾವೇರಿಯನ್ನು ಕಂಡು ಎಲ್ಲರೂ ಕಕ್ಕಾಬಿಕ್ಕಿಯಾದರು. ಗೋವಿಂದನಂತೂ ಈ ಬರುವ ಜನರೆಲ್ಲಾ ಮುಂಚಿತವಾಗಿ ತಿಳಿಸಿದ್ದರೆ ನಾನು ಗಾಡಿಯಾದರೂ ಕೊಂಡು ಹೋಗಿ ಕರೆದುಕೊಂಡು ಬರುತಿದ್ದೆನಲ್ಲ? ಎಂದು ಗುಣುಗುಟ್ಟಿದನು.

ತಾಯಿ ಮಗಳು ಒಬ್ಬರನ್ನೊಬ್ಬರು ನೋಡಿಕೊಳ್ಳದೆ ಇಂದಿಗೆ ಮೂರು ವರ್ಷಗಳು ಕಳೆದುಹೋಗಿರುವುವು. ಈ ವ್ಯವಧಾನದಲ್ಲಿ ಎಷ್ಟು ಕಷ್ಟ ನಿಷ್ಠುರಗಳು ಅವರವರ ಬಾಳುವೆಯಲ್ಲಿ ಬೇನೆಯಾಗಿ ಬೆರಕೆಗೊಂಡಿಲ್ಲ? ಆದರೆ ಅವುಗಳನ್ನೆಲ್ಲ ಅವರವರು ಮಾತಿಲ್ಲದೆ ಮೌನವಾಗಿಯೇ ಅನುಭವಿ

ಸುತ್ತ ಬಂದಿರುವರಲ್ಲದೆ ತಮ್ಮ ನಡುವಣ ಬಳಕೆಗಾಗಿ ಸೌಹಾರ್ದದ ಸೇತು ಬಿಗಿಯಬೇಕೆಂಬ ಸಂಕಲ್ಪಕ್ಕೆ ಅಥವಾ ಧೈರ್ಯಕ್ಕೆ ಯಾರೂ ಮುಂದೆ ಬಂದು ದಿಲ್ಲ. ಈಗ ಮೂರು ವರ್ಷಗಳ ಮೇಲೆ ಅವರು ಕೂಡಿ ಒಬ್ಬರನ್ನೊಬ್ಬರು ಕಂಡುಕೊಂಡಾಗ ಕಾಣಲೀಸದಂತೆ ಕಣ್ಣಿನಲ್ಲಿ ನೀರ ಹನಿ ತುಂಬಿ ತುಳುಕ ತೊಡಗಿತು. ಆ ನೀರಿನೊಂದಿಗೆ ಹಿಂದಿನ ಮನಸ್ಸಿನ ಕೊಳೆಯೆಲ್ಲ ಕೊಚ್ಚಿ ಹೋಗಿ ಭವಿಷ್ಯವನ್ನು ಹೊಸ ದೃಷ್ಟಿಯಿಂದ ನೋಡುವ ಕಲ್ಯಾಣ ಗುಣವು ತುಂಬಿ ಬಂದು ಬಾಳು ಪ್ರಶಾಂತವಾಗಿ ಹರಿಯತೊಡಗಿತು!

ಕಾವೇರಿ ಬಹಳ ಹೊತ್ತಿನ ತನಕ ಯಾರೊಡನೆಯೂ ಮಾತಾಡಲಿಲ್ಲ. ಆ ಚಿಕ್ಕ ಕೂಸನ್ನು ಕೈಗೆತ್ತಿಕೊಂಡು ಅದನ್ನು ಲಲ್ಲೆ ಮಾಡುವುದರಲ್ಲೇ ಇದ್ದಳು. ಮಾತನಾಡದೇನೇ ಅವರಿಬ್ಬರ ಹೃದಯವೀಣೆ ಮಿಡುಕುತಿದ್ದಿತು. ಅದರ ನಾದ ಎಷ್ಟು ಮಧುರ!

ತುಂಗಮ್ಮ ಅಡುಗೆ ಕೋಣೆಯಲ್ಲೆ ಕುಳಿತಿದ್ದಳು. ಅದೇನೂ ತಾಯ ಮೇಲಣ ಕೋಪವಲ್ಲ ತಾಪವಲ್ಲ—ತಾತ್ಸಾರವಲ್ಲ. ಆದರೆ ತಾಯೇ ಅಲ್ಲಿಗೆ ಬರಬೇಕೆಂಬ ಲವಲವಿಕೆಯ ಆತ್ಮೀಯತೆ! ಕಾವೇರಿಯೂ ಅಲ್ಲಿಯೇ ಒಳ ಸೇರಿದಳು. ಮತ್ತೆ ಅರ್ಧತಾಸಿನ ತನಕ ಇಬ್ಬರೂ ಹೊರಹೊರಡಲಿಲ್ಲ. ಸುಬ್ಬಣ್ಣ ನೋಡಿ ನೋಡಿ ತಾನೂ ಒಳ ಹೊಕ್ಕನು. ಮತ್ತೆ ಸ್ವಲ್ಪ ಹೊತ್ತಿನ ಮೇಲೆ ಗೋವಿಂದ ತಾನೊಬ್ಬನೇ ಹೊರಗೆ ಕುಳಿತಿರುವುದರಲ್ಲಿ ಅರ್ಥವಿಲ್ಲವೆಂದು ಬಗೆದು ಆಚೆ ಕಡೆಯ ಬಾಗಿಲ ಹೊಸ್ತಿಲ ಮೇಲೆ ಹೋಗಿ ಕುಂಡಿಸಿದನು. ಅಲ್ಲಿಗೆ ಅವರ ಮಹಾಸಭೆ ಪರಿಷ್ಕಾರವಾಗಿ ಕೂಡಿದಂತಾಯಿತು!

ಆ ಅಡುಗೆ ಮನೆಯ ಮೆತ್ತಗಿನ ಮಾತುಕತೆ—ಅದೆಷ್ಟು ಸವಿ! ಹೊರ ಚಾವಡಿಯ ಬಟ್ಟ ಬಯಲಲ್ಲಿ ಕುಳಿತು ತಾಸು ಗಟ್ಟಲೆ ಕಾಲು ನೀಡಿ ಹರಟೆ ಹೊಡೆಯಬಹುದು. ಆದರೆ ಅಡುಗೆ ಮನೆಸೇರಿ ಆತ್ಮೀಯವಾಗಿ ಮಾತನಾಡುವ ಒಂದೇ ಒಂದು ನಿಮಿಷವೆಂದರೆ ಅದೇ ರಸ ನಿಮಿಷ! ತನಗೆ ಬೇಕಾದವರ ಅಂತರ್ಯವನ್ನು ತಿಳಿದು ಅಂತರಾತ್ಮನೊಡನೆ ಮಾತಾಡುವಂತೆ ಅಡುಗೆ ಮನೆಯ ಮಾತಿನ ಸ್ವಾರಸ್ಯವು ತಾನೇತಾನಾಗಿ ಕನ್ನಡಿಯಲ್ಲಿ ನೋಡುತಿ

ರುವ ಪ್ರತಿಬಿಂಬದಂತೆ ಆಡಂಬರದ ಹೊರಹೊದಿಕೆಯನ್ನು ತೆರೆದು ಸ್ವರೂಪ ವನ್ನು ತೋರಿಸುವಂತಿದೆ! ಅದರಲ್ಲಿ ಸುಖದುಃಖದ ಮೆಚ್ಚು ಮರುಕದ ಚೇಷ್ಟೆಗಳೆಲ್ಲ ಮಿಶ್ರಣಗೊಂಡು ಆ ಬೆಂಕಿಯ ಬುಡದ ಕಾವಿನಲ್ಲಿ ಬಿಸಿಯೇರಿ ಎಲ್ಲವೂ ಹಿತ ಮಿತವಾಗಿರುತ್ತದೆ. ಆದರೆ ಈ ಮಹಾಭಾಗ್ಯ ಎಲ್ಲರಿಗೂ ಸಮನಾಗಿ ದೊರೆಯಬೇಕಷ್ಟೆ! ಜೀವನದಲ್ಲಿ ಸದಾಗುಣುಗಾಡುತಿರುವ ಅಸಂತುಷ್ಟ ಜೀವಿ ತಾನೆಂದೂ ಅಡುಗೆ ಮನೆಯ ಮಾತಿಗೆ ಕಾಲಿಡಲಾರ. ಅಂತೆಯೇ ಅವನ ಬಾಳು ಎಂದಿಗೂ ಸರಸವಾಗಲಾರದು !

ಎರಡು ಗಂಟೆಗಳ ಕಾಲ ಯಾರೂ ಅಡುಗೆಮನೆಯಿಂದ ಹೊರಬರ ಲಿಲ್ಲ. ಅಲ್ಲೇ ಕಾಫಿಯಾಯಿತು—ಹುರಿದ ಹಪ್ಪಳವಾಯಿತು—ಎಲ್ಲವೂ ಅಲ್ಲಿಯೇ ಮಾತಿನೊಡನೆ ಮೆಲುಕಾಟವಾಗಿ ನಡೆಯಿತು! ಮತ್ತೆ ಹೊರಗೆ ಬಂದ ವೇಳೆ ಎಲ್ಲರ ಮುಖದಲ್ಲಿ ಗೆಲವಿನ ತೇಜಸ್ಸು ತುಂಬಿದ್ದಿತು. ಏನೋ ಒಂದು ಭವಿಷ್ಯ ನಿರ್ಮಾಣದ ನಿರ್ಣಯದಲ್ಲಿ ಜಯಶೀಲರಾಗಿ ಮೇಲೆದ್ದು ಬಂದವರಂತೆ ಅವರ ಮನಸ್ಸು ಕುಣಿಯುತಿದ್ದಿತು!

ಕಾವೇರಿ ಬಂದು ನಾಲ್ಕೈದು ದಿನಗಳು ಮಾತಿನಲ್ಲೇ ಕಳೆದು ಹೋದುವು. ತಮ್ಮ ಅಂತರ್ಯದ ಎಷ್ಟು ಪದರುಗಳನ್ನು ಅವರು ಹರಡಿ ಕೊಂಡರೋ ಏನೋ—ಆದರೆ ಮರುದಿನವೇ ಆಕೆ ಗೌರಿಯ ಮನೆಗೆ ಹೋಗಿ ಅವಳನ್ನು ಕಾಣದಿರಲಿಲ್ಲ. ತನ್ನ ಮಗಳಿಗೆ ಬದಲುಕೊಟ್ಟ ತಾಯಾಗಿ—ಒಡನಾಡಿದ ಅಕ್ಕನಾಗಿ—ಸರ್ವತ್ರ ರಕ್ಷಾಕವಚವಾಗಿನಿಂತ ಆ ಹೆಣ್ಣು ಮಗಳು ಗೌರಿ- ! ಅವಳನ್ನು ಕಂಡು ಕಂಡು ಕೊಂಡಾಡಿ ದಣಿಯದಿದ್ದಳು ಕಾವೇರಿ!

ಆ ಸಂಜೆ ಗೌರಿಯು ಕೋಪಗೊಂಡು ಕೇಳಿದಳು–ಏನು ಕಾವೇರತ್ತೆ! ನಮ್ಮ ತುಂಗನನ್ನು ಏನು ಇಲ್ಲಿಂದ ಸೆಳೆದುಕೊಂಡು ಹೋಗಲು ಬಂದಿದ್ದೀರಾ ? ಅವರೇನೋ ಆ ಕಡೆಗೆ ಹೋಗಿ ನಿಲ್ಲುತ್ತಾರಂತಲ್ಲ?--

ಅಲ್ಲವೇ ಮಗು ! ಅದೇ ಹಿತ ತಾನೇ?

ಏಕೆ ? ಈ ತನಕ ಇಲ್ಲಿ ಸುಖವಾಗಿದ್ದವಳು ಇನ್ನು ಏಕೆ ಅವರ ಕೈ ಕಾದು ಮಾತು ಹೊಂದಿಸಿ ಕುಳಿತಿರಬೇಕು ?

ಹಾಗಲ್ಲ ಗೌರಿ ! ಎಷ್ಟೆಂದರೂ ಹಿರಿಯರ ಮನಸ್ಸಿಗೆ ಖೇದ ಮಾಡಬಾರದು. ಹೀಗಾಗಿ ಅವರಾಗಿ ಕರೆಯುವಾಗ ನಾವು ಹೋಗಿ ಸೇರದಿರುವುದು ಚೆಂದವಲ್ಲ.

ಹಾಗಿದ್ದರೆ ಅವರು ಈ ಮೊದಲೇ ಕರೆಯಬೇಕಿದ್ದಿತು. ಈಗ ಆ ರಾಮಿಯು ಹೊರಟು ಹೋಗಿ ಮನೆಯಲ್ಲಿ ಗೇಯಲು ಜನವಿಲ್ಲವೆಂದಾಗ ತುಂಗಮ್ಮನ ನೆನಪಾಗಬೇಕೆ? ಅಂದೇಕೆ ತಿನ್ನಲು ಗುಡಾಣದಷ್ಟು ತುಂಬಿದ್ದಾಗ ಬೇರೆ ನೆನಪಾಗಲಿಲ್ಲ? ಏನೇ ಹೇಳಿ—ಈ ಪ್ಲೇನು ನನಗಂತೂ ಸಮ್ಮತವಲ್ಲ!

ನೀನೇನೋ ಅವಳ ಮೇಲೆ ವಿಶ್ವಾಸದಿಂದ ಅವಳ ಸುಖಕ್ಕಾಗಿ ಹೇಳುವ ಮಾತು ಸರಿ. ಆದರೆ ನಾವೆಲ್ಲಾ ದೊಡ್ಡ ದೊಡ್ಡ ಕುಟುಂಬದಿಂದಲೇ ಬಂದವರು. ಅದರಿಂದಾಗಿ ನಮಗೇನಾದರೂ ಹಾನಿಯಾದರೂ ಅದನ್ನು ಸಹಿಸಿಕೊಂಡು ನಡೆಯಬೇಕಾದುದು ನಮ್ಮ ಧರ್ಮ !

ಸರಿಯಾಯಿತು. ಇನ್ನು ನಾಳೆ ತಂಕರ ಮನೆಗೆ ಬಂದು ಪುನಃ ರಾಮಿಯ ದುರ್ಗಾವತಾರ ತೊಡಗಿತೆಂದರೆ ಮತ್ತೇನು ಮಾಡಬೇಕು?

ಇಲ್ಲ ಮಗು. ಹಾಗಾಗಲಾರದು. ನಾವೆಲ್ಲಾ ಮುಂದಿನ ಒಳ್ಳೆಯದನ್ನೇ ಎಣಿಸುತ್ತಾ ಹೋಗಬೇಕು.

ಹೇಗೊ—ನಿಮ್ಮ ಮರ್ಜಿ. ಈ ಬೇಸಾಯವನ್ನೆಲ್ಲಾ ಬಿಟ್ಟುಕೊಟ್ಟು—

ಅದನ್ನು ನಿಮ್ಮ ತಾಬೆಗೆ ಕೊಡುವುದೆಂತ ಸುಬ್ಬಣ್ಣ ಯೋಚಿಸಿದ್ದಾನೆ—

ಹಾ! ಬಹಳ ಚೆನ್ನಾಯಿತು ! ನಮಗೆ ಬೇಕಾದುದು ಅವನ ಬೇಸಾಯವಲ್ಲ—ತುಂಗಮ್ಮ !

ಎಷ್ಟು ಪರಿಷ್ಕಾರವಾದ ಉತ್ತರ ! ಗೌರಿಗೆ ತುಂಗಮ್ಮನ ಮೇಲಿರುವ ಅನನ್ಯ ಮಮತೆಯನ್ನು ನೋಡಿ ಕಾವೇರಿ ಉಬ್ಬಿಹೋದಳು. ಇಂತಹ ಜೀವದ ಗೆಳತಿ ಹತ್ತಿರ ಇರುವಳೆಂದ ಮೇಲೆ ತನ್ನ ಮಗಳಿಗೆ ಈ ಮೂರು

ವರ್ಷಗಳಲ್ಲೂ ತಾಯಿ ಕೊರತೆ ಕಾಣದಿದ್ದುದೊಂದು ಆಶ್ಚರ್ಯದ ಮಾತಲ್ಲ !

ಸುಬ್ಬಣ್ಣ ಒಂದು ವಾರದತನಕವೂ ಆಕಡೆ ಈಕಡೆ ಓಡಾಡುತಿದ್ದನು. ಧನಿಗಳಲ್ಲಿಂದ ಗೌರಿಯ ಮನೆಗೆ ಅಲ್ಲಿಂದ ತನ್ನಲ್ಲಿಗೆ ತಿರುಗಿ ತಿರುಗಿ ಕೊನೆಗೆ ತನ್ನ ಬೇಸಾಯವನ್ನು ಧನಿಗಳ ಅನುಮತಿಯಿಂದ ಹಿಂದಿನ ಬಾಕಿವುಳಿದ ಸಾಲದ ಕಂತಿನೊಡನೆ ಬೀಜ ಅಗೆಗೊಬ್ಬರಗಳ ಸಮೇತ ಗೌರಿಗೇ ವಹಿಸಿ ಕೊಟ್ಟಾಯಿತು. ಅದೇ ದಿನವೇ ಇವನಿಂದ ಸೋಡುಚೀಟು—ರಶೀದಿ. ಅವರಿಂದ ಗೇಣಿಚೀಟು ನಡೆದುಹೋಯಿತು. ಆದರೆ ಧನಿಗಳು—ನೋಡು ಸುಬ್ಬ!—ನೀನು ನನ್ನ ಬೇಸಾಯ ಬಿಡುವುದು ನನಗೇನೂ ಹಿತವಿಲ್ಲ. ಆದರೆ ಮಾಡುವುದೇನು? ಸ್ವಂತ ಮನೆಗೇ ಹೋಗುವವರನ್ನು ತಡೆಯ ಬಾರದು. ಆದುದರಿಂದ ಸುಮ್ಮನಿರಬೇಕಾಯಿತು ಎಂದರು.

ಧನಿಗಳ ಮನೆಯಲ್ಲಿ ಹೆಗ್ಗಡಿತಿಯರು ನೆರೆಕರೆಯವರು ಎಲ್ಲರೂ ತುಂಗಮ್ಮನಿಗಾಗಿ ಕರೆಕರೆಮಾಡಿಕೊಂಡರು. ಆದರೆ ಎಲ್ಲರ ಮಾತೂ ಕೊನೆಗೆ ಇಷ್ಟಕ್ಕೇ ಬಂದು ನಿಂತಿತು—ಗೂಡು ಸೇರುವ ಮರಿಗಳನ್ನೂ ಮನೆ ಸೇರುವ ಮಕ್ಕಳನ್ನೂ ತಡೆಯಬಾರದು!—

ಕೆಲವೇ ದಿನಗಳಲ್ಲಿ ಧನಿಗಳ ಅಪ್ಪಣೆ ಪಡೆದು ಮನೆಗೆ ಮೂರುಸುತ್ತು ಬಂದು ಆ ಪುಟ್ಟ ಸಂಸಾರ ಗಾಡಿಯೇರಿ ತಮ್ಮ ಊರಕಡೆಗೆ ಹೊರಟಿತು. ಅವರನ್ನು ಈ ಕಡೆ ಕಳುಹಿಸಿಕೊಡಲು ಗಾಡಿಯ ಹಿಂದೆ ಸೇರಿದ್ದ ಜನ ಆ ಕಡೆ ಊರಬಳಿ ಗಾಡಿಯ ಮುಂದೆ ಅವರನ್ನು ಕಾಣಲು ಕೂಡಿದ ಜನ ಇವೆರಡರ ದುಃಖ ಸಂತೋಷಗಳ ಮಧ್ಯದಲ್ಲಿ ಅವರು ಮೌನವಾಗಿ ಮನೆಸೇರಿದರು. ಎಲ್ಲರಿಗಿಂತಲೂ ಮುಂಚಿತವಾಗಿ ಗೌರಿಯು ಗಾಡಿಯಿಂದ ಕೆಳಗೆ ಹಾರಿ ಅಕ್ಕಮ್ಮನೊಡನೆ—ಹೇಗೆ? ನಾನು ಈ ಮೊದಲೇ ಹೇಳಿಲ್ಲವೆ? ತುಂಗಮ್ಮ ನಿಮ್ಮ ಭಾಗ್ಯ! ಅವಳನ್ನು ನೀವೇ ಒಂದು ದಿನ ಕರೆದು ತರುತ್ತೀರಿ ಎಂತ? ಎಂದು ಹೇಳಿದಳು.

ಹೊಸತಾಗಿ ಮನೆಸೇರುವ ಮಗುವಿಗೆ ಓಕುಳಿ ನೀರು ಸುಳಿದುಹಾಕಿ ಅಕ್ಕಮ್ಮ ಕೈಗೆ ತೆಗೆದುಕೊಂಡಳು. ಮತ್ತೆ ಎಲ್ಲರೂ ಮನೆ ಸೇರಿದರು.

ತುಂಗಮ್ಮ ಮನೆ ಸೇರಿದ ವಿಚಾರ ಒಂದು ಕ್ಷಣದೊಳಗೆ ಊರೆಲ್ಲಾ ಸಂಪಿಗೆಯ ಪರಿಮಳದಂತೆ ಹಬ್ಬಿಹೋಯಿತು. ಸೀನಪ್ಪ ತನ್ನ ಪಾಳಯ ಕಟ್ಟಿಕೊಂಡು ಬಂದು ಸುಬ್ಬಣ್ಣನನ್ನು ಕಂಡು ಕೈಕುಲುಕಿದನು! ಅದು ಈಗಿನ ರೀತಿ ಎಲ್ಲರೂ ಹಾಗೆಯೇ ಮಾಡಬೇಕು—ಎಂಬುದು ಅವನ ವಾದ ವಾಗಿದ್ದಿತು. ಆ ಮೇಲೆ ತನ್ನ ತಂಗಿಯ ಕಡೆನೋಡಿ—ಇನ್ನು ಮೇಲೆ ಇವ ರೆಲ್ಲ ನನ್ನ ಊರಿನವರು. ಪುನಃ ನೀನು ಅವರನ್ನು ಎತ್ತಿಹಾಕುವುದು ಬೇಡ !—ಎಂದನು

ಆಗಬಹುದು. ಆದರೆ ನನ್ನದೂ ಇದೇ ಊರು ತಾನೆ? ನಾನೇನು ಪರ ಊರಿನವಳೆ?—

ಕಾವೇರಿ ಬಂದುದು ಲಕ್ಕಣ್ಣನಿಗೊಂದು ಭಾಗ್ಯ ಬಂದಂತಾಯಿತು! ಅವನು ಗಡಿಬಿಡಿಯಿಂದ ಆ ಕಡೆ ಈ ಕಡೆ ಓಡಾಡುತ್ತಾ—ನಮ್ಮ ಮನೆ ವಾರ್ತೆ ನೋಡಿ ನೀವು ನಗಾಡಬಾರದು. ನಾವೆಲ್ಲಾ ಶುದ್ಧ ಹಳ್ಳಿಯ ವರು. ನಿಮ್ಮ ಹಾಗೆ ಉಪಚಾರಮಾಡಲು ನಮ್ಮಿಂದ ಎಂದಿಗೂ ಸಾಧ್ಯ ಬರಲಾರದು!

ಮಾತು ಮುಂದರಿದು ಮುಂದರಿದು ಎಲ್ಲಿಂದೆಲ್ಲಿಗೋ ಹಾರಿ ಹಿಂದಿನ ಸುಖ ದುಃಖಗಳು—ಗಂಗರದ ಗಂಡಾಂತರಗಳು— ಕಾವೇರಿಯ ಕೃಪೆಯಿಂ ದಾಗಿ ಪಾರಾಗಿಬಂದ ಕತೆಗಳು ಇವುಗಳೆಲ್ಲ ಸೀನಪ್ಪನ ಉಪ್ಪು ಹುಳಿ ಕಾರ ಗಳ ಸಮತೂಕದಿಂದ ಸ್ವಾರಸ್ಯವಾಗಿ ಸಾಗುತಿದ್ದಿತು. ಆಗ ಲಕ್ಕಣ್ಣನು ನನ್ನ ಗ್ರಹಚಾರ ಇನ್ನೂ ತೀರಲಿಲ್ಲ. ಅದು ತೀರಿದ ಮೇಲೆ ನಿಮ್ಮನ್ನು ಕರೆದುಕೊಂಡು ಹೋಗಲು ನಾನೇ ಬರುತ್ತೇನೆ—ಎಂದುದನ್ನು ಜ್ಞಾಪಿಸಿ ಕೊಟ್ಟನು.

ಮಾತಿನ ಭರದಲ್ಲಿ ಹೊತ್ತು ಕಳೆದುದೇ ತಿಳಿಯಲಿಲ್ಲ. ಮಧ್ಯಾಹ್ನದ ಮೇಲೆ ಅಕ್ಕಮ್ಮ ಯಾರನ್ನೂ ಮನೆಗೆ ಹೋಗಲು ಬಿಡಲಿಲ್ಲ. ನೋಡಲು ಬಂದ ಜಾತಿಯವರೆಲ್ಲ ಅಲ್ಲೇ ಊಟಕ್ಕೆ ನಿಂತರು. ಕೊನೆಗೆ ಸೀನಪ್ಪ ಎದ್ದು ನಿಂತು ಕೈಮುಗಿದು ಹಾಸ್ಯವಾಗಿ—ಇದೆಲ್ಲಾ ಆಯಿತಷ್ಟೆ ಬಹಳ ಪಸಂದವಾಯಿತು! ಇನ್ನು ಸಾಯಂಕಾಲ ಹೊತ್ತಿಗೆ ನೀವೆಲ್ಲ ತಿರುಗಾಡುತ್ತಾ ನನ್ನ ಅಂಗಡಿಯ ಕಡೆ ಬರಬೇಕು!—

ಏನು ವಿಶೇಷವೊ?

ಮತ್ತೇನಿಲ್ಲ. ನಮ್ಮಲ್ಲೊಂದು ಟೀಪಾರ್ಟಿ.

ಆ ಹೆಸರು ಕೇಳಿ ಎಲ್ಲರೂ ನಗತೊಡಗಿದರು. ಸೀನಪ್ಪ–ನೀವು ಹಾಗೆಲ್ಲ ನಗುವುದು ಬೇಡ. ನನಗೆಲ್ಲಾ ಗೊತ್ತಿದೆ. ಯಾವ ಮಂತ್ರಿಗಳಿಗಾದರೂ ಟೀಪಾರ್ಟಿ ನಡೆದೇ ನಡೆಯುತ್ತದೆ. ಹಾಗೆಯೇ ಈ ಸಂಜೆ ಸುಬ್ಬಣ್ಣ ನಿಗೂ ಟೀಪಾರ್ಟಿ! ಏನು? ಎಲ್ಲರೂ ಬರಬೇಕು! ಯಾರೂ ಮೋಸ ಮಾಡ ಬಾರದು ಎಂದನು.

ಆದೀತಪ್ಪ ನಾನೇ ಕರೆದುಕೊಂಡು ಬರುತ್ತೇನೆ–ಎಂದಳು ತುಂಗಮ್ಮ.

ಅಲ್ಲವಾದರೆ ನಿನ್ನ ಕಿವಿ ಹಿಂಡಲು ಗೌರಿಯೇ ಬಂದಾಳು!

ಗೌರಿ ಈಗ ಹೋದರಲ್ಲವೆ ಮತ್ತೆ ಬರುವುದು? ಎಂದಳು ಅಕ್ಕಮ್ಮ.

ಮೂರು ದಿನಗಳ ಮೇಲೆ ನಸುಕಿನ ವೇಳೆ ಸೀನಪ್ಪ ತನ್ನ ಹೋಟ ಲಿನ ಬಾಗಿಲಿನ ಪರದೆಯ ಸ್ಥಾನದ ಗೋಣಿಯನ್ನು ಸರಿಸಿ ಹೊರಹಣಕಿದಾಗ ಮುಂಗಡೆಯ ಬಂಡೆಯ ಮೇಲೆ ಯಾರೋ ಕುಳಿತಿದ್ದಂತೆ ಕಂಡು ಬಂದಿತು. ಆವನೊಮ್ಮೆ ಕಣ್ಮುಚ್ಚಿ ನೋಡಿಕೊಂಡನು. ಮತ್ತೆ ಯಾರೋ ಪೋಲೀಸರು ತನ್ನ ಮೇಲೆ ಗುಮಾನಿಯಿಂದ ಹೊಂಚಿ ಕುಳಿತಿರಬಹುದೆಂದು ಅಂಜಿಯಂಜಿ ಪರದೆ ಸರಿಸಿ ಹಿಂಗಡೆಯೇ ನಿಂತು ನೋಡತೊಡಗಿದನು. ಇನ್ನೂ ಸ್ವಲ್ಪ ಬೆಳಕು ಮೇಲೆದ್ದು ಬಂದು ಭೂಮಿಯ ಕಪ್ಪಿನ ಹೊದಿಕೆ ಹಿಂದೆ ಹಿಂದೆ ಸುರುಳಿ ಕಟ್ಟಿ ಸರಿದಂತೆ ಆ ಬಂಡೆಯ ಮೇಲೆ ಯಾವನೋ ಒಬ್ಬ ಬರೇ ಬನಿಯನ್ ಲಂಗೋಟಿ ಹಾಕಿಕೊಂಡು ಆ ಕಡೆ ಈ ಕಡೆ ಸುತ್ತಾಡುತಿ ದ್ದಂತೆ ಭಾಸವಾಯಿತು. ಮತ್ತೆಅದು ಯಾರೆಂದು ತಿಳಿಯ ಬೇಕಾದರೆ ಸೀನಪ್ಪುವಿನ ಗೃಧ್ರ ದೃಷ್ಟಿಗೂ ಕೊಂಚ ವಿಳಂಬವಾಯಿತು.

ತಂಕರ ಆ ಬಂಡೆಯ ಮೇಲೆ ಕುಳಿತು ಎದ್ದು ಅದಕ್ಕೆ ಮೂರು ಮೂರು ಪ್ರದಕ್ಷಿಣೆ ಬರುತಿದ್ದನು. ತಂಕರನೇನೋ ಹೆಡ್ಡನಿರಬಹುದು. ಆದರೆ ಹೆಡ್ಡರ ತಲೆಯೊಳಕ್ಕೆ ನುಸುಳಿದ ಸಂಶಯವು ತರ್ಕದ ಮುಂದೆ ಸರಿ ದಂತೆ ಕಂಡರೂ ಅದರ ಬೇರು ಹಾಗೆಲ್ಲಾ ಕಳೆದು ಹೋಗುವುದಿಲ್ಲ. ಅವರದೇ ಆದ ವಿಚಾರ ಕೋನದಿಂದ ಅಳತೆನೋಡಿ ಸಂದರ್ಭಗಳನ್ನು ಹೊಂದಿಸಿಕೊಳ್ಳುವ ಚಾತುರ್ಯ ಅವರದೇನೂ ಕಡಿಮೆಯಾದುದಲ್ಲ.

ಆದಿನ ರಾಮಿ ಆ ಕೋರೆ ಟೊಪ್ಪಿಯನ್ನು ಸುಟ್ಟು ಹಾಕಿ ಸೊಂಟಬಿಗಿದು ಅವನನ್ನು ಬಾಯಿ ಮುಚ್ಚಿಸಿದ್ದರೂ ಅದರ ಅವಶೇಷ ಅವನ ಮಿದುಳಿನಿಂದ ಹೊರ ಸರಿದಿದ್ದಿಲ್ಲ. ನಂತರ ಅವಳ ತವರು ಸೇರಿ ಕೆಲಕಾಲ ಕಳೆದಿದ್ದರೂ ಅಂತಹ ಕಟ್ಟುನಿಟ್ಟಿನ ಅನ್ನ ಅವನ ನೆಮ್ಮದಿಯ ಬಾಳಿಗೆ ಕೂಡಿ ಬರಲಿಲ್ಲ. ಹಾಗೆಂದು ಕೊಂಚ ಯೋಚನೆಗೆ ಎರವಾದಾಗಲೆಲ್ಲ ರಾಮಿಯ ಗಡದ್ದು ಗಾರಿಕೆಯ ಧಿಮಾಕಿನ ಮಾತು ಅವನನ್ನು ಪರಾಸ್ತಗೊಳಿಸುತಿದ್ದಿತು. ಅಂತೆಯೇ ಒಂದು ದಿನ ಅವಳು—ಏನು ಇಲ್ಲಿ ರಾಯರ ಹಾಗೆ ಕೂತು ತಿನ್ನುವುದು ಮೈಗೇನೂ ಹಿಡಿಯದಿದ್ದರೆ ನಿಮ್ಮ ಮನೆಯ ಸೌಖ್ಯದ ಅನ್ನಕ್ಕೆ ನೀವೇ ಹೋಗಿ ಬೀಳಬಹುದು !—ಎಂದಳು.

ಅತ್ತೆಯ ಮನೆಯ ಕೂತು ತಿನ್ನುವ ಅನ್ನದ ರುಚಿಯನ್ನು ಆತ ಈಗ ಕೆಲವು ತಿಂಗಳುಗಳಿಂದ ಕಂಡಿದ್ದನು. ಅವನು ಬಂದು ಮನೆಸೇರಿದ ಮುಹೂರ್ತದಲ್ಲೇ ಅವರ ಕೂಲಿಯಾಳು ಹೊರ ನಡೆದಿದ್ದನು. ಆದುದರಿಂದ ಅಂತಹ ಕೂಲಿಯಾಳಿನ ಸ್ಥಾನ ಗೌರವವನ್ನು ಇವನು ಆಕ್ರಮಿಸಿದನೆಂದು ಹೇಳುವುದು ಕೊಂಚ ಅವಹೇಳನವಾದರೂ ವಸ್ತುಸ್ಥಿತಿಯು ಅದಕ್ಕೆ ಬಹಳ ವಿರುದ್ಧವಾಗಿದ್ದಿಲ್ಲ. ಅಂತಹ ಗೌರವದ ಹೊರೆಹೊತ್ತು ಹೆಂಡತಿಯ ಬೆನ್ನು ಹಿಡಿದಿರುವಾಗ ಬೆಳೆದು ಬಂದ ಮಣ್ಣಿನ ಪರಿಮಳ ಕುಡಿದ ನೀರಿನ ರುಚಿ ಅವನ ಆತ್ಮವನ್ನು ಆಕಡೆ ಜಗ್ಗುತ್ತಲೇಯಿದ್ದಿತು. ಇಂತಹ ಅಸಂಬದ್ಧ ಪರಿಸ್ಥಿತಿಯಲ್ಲಿ ಕೊನೆದಾಡುತಿದ್ದಾಗಲೇ ಅಂದಿನ ಕೋರೆ ಟೊಪ್ಪಿಯ ಪೋಲೀಸು ಇವನಿಗೆ ಮುಖಾ ಮುಖಿ ಬೇಟಿಯಾಯಿತು !

—ಸಿಂಗಳೆ ಆ ನಲ್ಲೆ ಪೆಣ್ಣ್ ಅವಡೆ ಇದೆಯಾ—ಇವುಡೆಯಾ?—

ಈ ಪ್ರಶ್ನೆಯ ನಂತರ ಆ ಪೋಲೀಸು ಗ್ರಾಮಕ್ಕೆ ಬರುವ ಸರದಿ ಹೆಚ್ಚಿದಂತೆ ಕಂಡು ಬಂದಿತು. ಇಂತಹ ಬರುವಿಕೆಯಿಂದ ಮತ್ತೇನೂ ಬ್ರಹ್ಮಾಂಡ ಸಾಧಿಸದಂತಿದ್ದರೂ ಈತನ ವಿಕಲ್ಪ ಚೇತನದ ಸಂಶಯ ಪಿಶಾಚಿ ಕೈ ಕಾಲು ಬಿಡುವುದರಲ್ಲಿ ಏನೂ ಅಭ್ಯಂತರ ಬರಲಿಲ್ಲ. ಹೀಗಾಗಿ ಒಂದು ದಿನ ಮಧ್ಯ ರಾತ್ರಿ ತನ್ನ ಕಂಬಳಿ ಬಗಲಿಗೆ ಸೇರಿಸಿ ಆತನು ತನ್ನ ಊರಿಗೆ ಹೊರಟು ಬಿಟ್ಟನು.

ಹೊರಟ ನಂತರ ತನ್ನ ಮನೆಯನ್ನು ಹೇಗೆ ಸೇರಬೇಕೆಂಬುದು ಅವನಿ ಗೊಂದು ಸಮಸ್ಯೆಯಾಗಿ ಕಂಡು ಬಂದಿತು. ಅದರ ಪರಿಹಾರಕ್ಕಾಗಿ ಯೋಚಿಸುತ್ತಾ ಸೀನಪ್ಪುವಿನ ಹೋಟೆಲಿನ ಇದಿರು ಪುನಃ ಅದೇ ಬಂಡೆಯ ಮೇಲೆ ಈ ಹಿಂದೆ ತನಗೆ ದೊರೆತ ಕೋರೆ ಟೊಪ್ಪಿಯ ಠಾವಿನಲ್ಲಿ ಸುಮ್ಮನೆ ಕುಳಿತು ಬಿಟ್ಟನು.

ತಂಕರನ ಗುರುತು ಹತ್ತಿದ ಮೇಲೆ ಸೀನಪ್ಪುವಿಗೆ ತುಸು ಧೈರ್ಯ ಬಂದಿತು. ಆದುದರಿಂದಲೆ—

ಏನಯ್ಯ ತಂಕರ! ಬೇಸಗೆಯಲ್ಲಿ ಮಳೆ ಬಂದ ಹಾಗೆ ಒಂದೇ ಸವನೆ ಕೇಳದೆ ಬಂದು ಬಿಟ್ಟದ್ದಿಯಲ್ಲ? ಒಬ್ಬನೆ!—ಎಂದನು.

ತಂಕರ ಉದಾಸೀನನಾಗಿ—ಹೂँ ಒಬ್ಬನೆ. ಬಂದದ್ದೂ ಒಬ್ಬನೆ— ಹೋಗೋದೂ ಒಬ್ಬನೆ!

ಅದು ಹೇಗೆ? ಹೋದಾಗ ನೀವಿಬ್ಬರಿದ್ದಿರಿ?

ಆ ಕತೆ ಬಿಡು. ಈಗ ಏಕೆ? ಈಗಂತೂ ಒಬ್ಬನೆ!

ಸರಿ ಹೋಗಲಿ. ಇಲ್ಲಿಗೆ ಬಾ—ಎಂದು ಸೀನಪ್ಪು ಅವನನ್ನು ಹೋಟೆಲಿಗೆ ಕರೆದನು.

ತಂಕರ ಬಂದು ಕುಳಿತನು. ಅವನ ಹರಣ ಸೀನಪ್ಪುವನ್ನು ಕಂಡಾಗಲೆಲ್ಲಾ ಚಿಕ್ಕ ಚಿಕ್ಕದಾಗಿ ಆವೆಯಂತೆ ಮುದುಡುತಿದ್ದಿತು. ಅಂದು ತಾನು ಅವನಿಗೆ ಹೂಡಿದ ಅಪಚಾರದ ಕೃತಿಗಾಗಿ ತಾನೇ ನಾಚುತಿದ್ದನು.

ಸೀನಪ್ಪು ಒಂದು ಲೋಟಿ ಬೆಳಗಿನ ಬಿಸಿ ಕಾಫಿ ಮುಂದಿಟ್ಟು ಅವನ ಆ ಧರ್ಮ ಪೀಡೆಯನ್ನು ಪರಿಹರಿಸಿದನು.

ತಂಕರ ತನ್ನ ಮನೆ ಸೇರಲೆಂದೇ ಬಂದಾತ. ಆದರೆ ಈಗ ಸುಬ್ಬಣ್ಣನವರು ಬಂದು ಸೇರಿದ್ದ ವಿಚಾರ ತಿಳಿದು ಅವನು ತುಸು ವಿಹ್ವಲನಾದನು. ಅವರ ಮುಂದೆ ತನ್ನ ಅಲ್ಪತನದ ಮುಖವನ್ನು ಹೇಗೆ ತೋರಿಸುವುದೆಂದು ತರ್ಕಿಸಿ ಕೊನೆಗೆ—ನೋಡು ಸೀನಪ್ಪು! ನಾನು ಗಟ್ಟಕ್ಕೆ ಹೋಗಬೇಕೆಂದು ಈ ಕಡೆ ಬಂದೆ—ಎಂದನು.

ಏಕೆ? ನಿನ್ನ ಹೆಂಡತಿ ಮನೆ ಏನಾಯಿತು?

ನನ್ನ ಪಾಡು ನನಗೆ. ನನ್ನ ಕೈಕಾಲು ಗಟ್ಟಿಯಿರುವಾಗ ನನ್ನ ಅನ್ನ ನಾನೇ ನೋಡಿಕೊಳ್ಳುತ್ತೇನೆ.

ಓಹೋ ಸಹಜ—ಸಹಜ!—ಎಂದು ಸೀನಪ್ಪ ಸೈಗುಟ್ಟಿ ತಾನೇ ತರ್ಕಿಸಿಕೊಂಡ–ತಂಕರ ಗಟ್ಟಕ್ಕೆ ಹೋಗುವುದಾಗಿದ್ದರೆ ಪೆರ್ಡೂರಿನಿಂದಲೇ ಮುಂದೆ ಹೋಗುತಿದ್ದ—ಈತ ಮನೆ ಸೇರಲೆಂದೇ ಬಂದಾತ. ಆದರೆ ಈಗ ಸುಬ್ಬಣ್ಣನವರ ಬರುವಿಕೆಯನ್ನು ತಿಳಿದು ಹಿಮ್ಮೆಟ್ಟುತಿದ್ದಾನೆ. ನಾನೇ ಇವನನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ಎಂದರೆ ಎಲ್ಲಾ ಸಮವಾಗುವುದು.

ಸ್ವಲ್ಪ ಹೊತ್ತಿನ ಮೇಲೆ ತಂಕರನನ್ನು ಕರೆದುಕೊಂಡು ಸೀನಪ್ಪ ಲಕ್ಕಣ್ಣನ ಮನೆಗೆ ಬಂದನು. ಅವನ ಬರವನ್ನು ತಲೆಬಾಗಿಲಲ್ಲೇ ಕಂಡು ತುಂಗಮ್ಮ ಒಲೆಯ ಬುಡ ಸೇರಿದಳು. ಅಕ್ಕಮ್ಮ—ಇದರ ಪರಿಣಾಮ ಹೇಗಾಗುವುದೋ ಎಂದು ಅಂಜಿ ಅಂಜಿ ಮಾತಾಡದಾದಳು. ಆದರೆ ಸುಬ್ಬಣ್ಣ ತಾನೇ ಮುಂದೆ ಬಂದು ಅಣ್ಣನನ್ನು ಒಳಗೆ ಕರೆತಂದು ಕಾಲು ತೊಳೆಯಲು ನೀರುಕೊಟ್ಟನು.

ತಂಕರ ಕಾಲು ತೊಳೆದು ಚಾವಡಿ ಹತ್ತಿದೊಡನೆಯೇ ಅವನಿಗೊಂದು ಲೋಟಿ ಚಾ ತಂದು ಮುಂದಿಟ್ಟಳು ತುಂಗಮ್ಮ.

ಸೀನಪ್ಪ ತುಂಗಮ್ಮನ ಮುಖ ನೋಡಿದ!

ಲಕ್ಕಣ್ಣ ಉಸಿರು ಬಿಟ್ಟ!

ಅಕ್ಕಮ್ಮನ ಎದೆಯ ಸೆಳೆತ ನಿಂತಿತು!

ತುಂಗಮ್ಮ ವಿನಯವಾಗಿ—ಏನು ಭಾವಯ್ಯ! ಹೇಗಿದ್ದೀರಿ? ಅತ್ತಿಗೆಯಮ್ಮನವರು ಚೆನ್ನಾಗಿದ್ದಾರಾ? ಏನು ನೀವೊಬ್ಬರೇ ಬಂದಿರಿ—ಅವರೆಲ್ಲಿ?

ಇಂತಹ ಸರಳ ಪ್ರಶ್ನೆಯ ಮುಂದೆ ತಂಕರನ ಎದೆ ಬಿಗಿದುಬಂದಿತು. ಕಣ್ಣುಗಳಲ್ಲಿ ನೀರೊಸರಿತು.

ಅಕ್ಕಮ್ಮ ಅವನ ಆತ್ಮಸಮಾಧಾನಕ್ಕಾಗಿ ತನ್ನ ಕೈಯಲ್ಲಿದ್ದ ತುಂಗಮ್ಮನ ಮಗುವನ್ನು ಅವನ ಕೈಗೆ ಕೊಟ್ಟಳು. ತಂಕರ ಅವನ್ನು ತೆಗೆದು

ಕೊಂಡು ಮೂರು ಸುತ್ತು ಬಂದು ಅದನ್ನು ಲಲ್ಲೆ ಮಾಡುತ್ತ ಒಂದು ಕ್ಷಣ
ಎಲ್ಲವನ್ನೂ ಮರೆತುಬಿಟ್ಟನು. ಅವನ ತುಮುಲು ಹೃದಯ ಆ ಮಗುವಿನ
ಎದೆ ಬಡಿತದೊಂದಿಗೆ ಕೂಡಿ ಹಗುರವಾಯಿತು.

ದಿನಗಳು ಹಗುರ ಹೆಜ್ಜೆಯಿಂದ ದಾಟಿಹೋದುವು. ವೃಥಾಡಂಬರ
ದಿಂದ ತಾವೇ ಬಿಗಿಸಿಕೊಂಡ ಅಂದಿನ ಬಿಗುಮಾನವೆಲ್ಲಿ? ಈಗ ಮನಸು
ಬಿಚ್ಚಿ ಮಾತನಾಡುತ್ತ ತಮ್ಮ ತಮ್ಮ ಗುಣದೋಷಗಳನ್ನು ತಾವೇ
ಒಪ್ಪಿಕೊಂಡು ಪರಸ್ಪರ ಸಲಿಸುತಿರುವ ಸೌಹಾರ್ದ ಸೇಚನೆಯ ಸಾಹ
ಚರ್ಯವೆಲ್ಲಿ?

ಗುಣಕ್ಕೂ ಅವಗುಣಕ್ಕೂ ಇರುವ ಅಭ್ಯಂತರವಿಷ್ಟೆ !—ಪ್ರಪಂಚವೇ
ಚಿಕ್ಕದು. ತಾನು ದೊಡ್ಡವನೆಂದು ತಿಳಿದಿರುವನಕ ಬದುಕು ಬಂಗಾರ
ವಾಗಲಾರದು. ಪ್ರಪಂಚದ ದೊಡ್ಡಸ್ತಿಕೆಯಲ್ಲಿ ತನ್ನ ಚಿಕ್ಕತನವನ್ನು ಆವೆ
ಯಂತೆ ಅಡಗಿಸಿಕೊಂಡವನು ಎಂದಿಗೂ ಬದುಕಿ ಬಂದಾನು! ಯಾವ
ದೋಷವಾದರೇನು ? ಅದು ಈ ವಿಶಾಲ ವಿಶ್ವದಲ್ಲಿ ಒಂದು ಕಾಣದ
ಕೂದಲೆಳೆ ! ಅದನ್ನು ಹಿಡಿದು ಜಿಗೀಷೆಯಿಂದ ಜಗ್ಗಾಟವಾಡುವ ಮೂರ್ಖ
ರಿಗಾಗಿ ಸಮಾಜದ ನಿರ್ಮಾಣವಾದುದಲ್ಲ. ಆದರೆ ಆತ್ಮ ಸೌಜನ್ಯದ
ಆಂತರಿಕ ಸಹನೆಯಿಂದ ಎಲ್ಲವನ್ನೂ ಸಮವಾಗಿ ಕಂಡು ಸಮರಸವಾಗಿ
ಬೆರೆಯಲಿರುವುದೇ ಸಮಾಜಧರ್ಮ !

ಮುಂದಿರುವ ಮಳಲಿನಲಿ ಮುತ್ತು ಹೆಕ್ಕುವ ರೀತಿ
ಮಾನುಷತ್ವದ ಮಹಿಮೆಯರಿಯಬೇಕು!
ನಂಜನೇ ಕುಡಿಕುಡಿದು ಗುಟುಕಿನಮೃತವ ಕೊಳುವ
ಸಹನೆಯಲಿ ಸದ್ಗತಿಯ ಸೇರಬೇಕು!—

ಕಟ್ಟಕಡೆಗೆ ತುಂಗಮ್ಮ ತನ್ನ—ಇಂತಹ ಅನುಭವದ ಒಳನೋಟ
ದಿಂದ ತವರುಮನೆಯನ್ನು ಕಂಡಳು. ಕಂಡು ಅದರೊಡನೆ ಸಮುದ್ರದ
ಮೇಲಣ ಚಿಕ್ಕ ಲಹರಿಯಂತೆ ಅದರ ಸುಖದುಃಖಗಳ ಏರು ತಗ್ಗುಗಳಲ್ಲಿ
ಒಂದಾಗಿ ಓಲಾಡತೊಡಗಿದಳು!

ಅಂಬುಜಾಕ್ಷಿಯ ಕುರಿತು—

The author who is a poet of repute writing his first novel must be congratulated for his righteous indignation and enthusiasm without committing excesses of realism which seem to be the latest fashion in novels dealing with prostitution as a problem.

– **'The Sunday Standard,'**

ರಾಯಭಾರಿ—

ಕವಿಸಹಜವಾದ ಮಾರ್ದವತೆಯಲ್ಲಿ ಭಾವಪೂರ್ಣ ನಿಸರ್ಗ ಸಂಪತ್ತಿನಲ್ಲಿ ಮೋಹಕದ ರಸಝರಿಯಲ್ಲಿ ಕಾದಂಬರಿಯಿದನ್ನು—ಕಾವ್ಯಧಾರೆಯಲ್ಲಿ ತಂದಿಳಿಸಿದ್ದಾರೆ.

ನವಭಾರತ—

ಶ್ರೀ ಎಸ್. ವೆಂಕಟರಾಜರ ಈ ಪ್ರಥಮ ಸಾಮಾಜಿಕ ಕಾದಂಬರಿಯಲ್ಲಿ ಒಂದು ನವದೃಷ್ಟಿಕೋನವಿದೆ. ವೇಶ್ಯೆ ಮತ್ತು ಕುಲವಂತರೆನಿಸಿಕೊಳ್ಳುವವರ ಎರಡು ಭಿನ್ನ ಮುಖಗಳನ್ನಿಲ್ಲಿ ಉತ್ತಮವಾಗಿ ಚಿತ್ರಿಸಿದ್ದಾರೆ.

ಪ್ರಜಾವಾಣಿ—

ಉತ್ತಮಭಾಷೆ ಒಪ್ಪುವ ಘಟನೆಗಳಿಂದ ಸಹಜತೆಯಿಂದ ಕೂಡಿರುವ ಕತೆ, ಇವುಗಳು ಕಾದಂಬರಿ ಸ್ವಾಗತಾರ್ಹವಾಗುವಂತೆ ಮಾಡಿದೆ. ವ್ಯಕ್ತಿ ಚಿತ್ರಣವೂ ಉತ್ತಮವಾಗಿದೆ.

ರಾಷ್ಟ್ರಬಂಧು –

ಅಂಬುಜಾಕ್ಷಿಯಲ್ಲಿ ನಮ್ಮನ್ನು ಸೆಳೆಯುವುದು ಲೇಖಕರಪ್ರೌಢ ಹಾಗೂ ಭಾವನಾಪೂರ್ಣವಾದ ಶೈಲಿ.

ಯುಗ ಪುರುಷ—

ಇದೊಂದು ಸುಂದರವಾದ ಕಥಾವಸ್ತು. ಅದನ್ನು ಕಥಿಸಿರುವ ರೀತಿಯೂ ಸೊಗಸಾಗಿದೆ. ಮನೋಹರವಾದ ಭಾಷೆಗೆ ಇದರಿಂದ ಹತ್ತಾರು ಎಡೆಯ ಉದ್ಧರಣಗಳನ್ನು ದೃಷ್ಟಾಂತವಾಗಿ ಎತ್ತಿ ತೋರಿಸಬಹುದಾಗಿದೆ. ಪುಸ್ತಕವು ತುದಿಯಿಂದ ಕೊನೆಯುವರೆಗೆ ಓದಿಸಿಕೊಂಡು ಹೋಗುತ್ತದೆ.

ಕರ್ಮವೀರ—

ಈ ಕಿರು ಕಾದಂಬರಿಯು ಈಗ ಸ್ವಲ್ಪ ಚರ್ವಿತ ಚರ್ವಣವಾದ ವೇಶ್ಯಾ ಸಮಸ್ಯೆಗೆ ಸಂಬಂಧಿಸಿದ್ದು. ಆದರೆ ಅದನ್ನು ನೋಡುವ ಈ ಲೇಖಕರ ದೃಷ್ಟಿಯು ಇಂಥ ಸಾಮಾನ್ಯ ಕಾದಂಬರಿಗಳಲ್ಲಿ ಕಾಣಬರುವುದಕ್ಕಿಂತ ಭಿನ್ನ ವಾಗಿದೆ. ಶ್ರೀ ವೆಂಕಟ ರಾಜರು ಕಥೆಯನ್ನು ಮನಸ್ಸಿಗೆ ನಾಟುವಂತೆ ಹೇಳಿದ್ದಾರೆ.

ಪ್ರಕಾಶಿನೀ—

ಶ್ರೀ ವೆಂಕಟರಾಜರು ಕನ್ನಡ ನುಡಿಯಲ್ಲಿ ಪ್ರತಿಭಾವಂತ ಕವಿ. ಕಾವ್ಯರಸ ಸೃಷ್ಟಿಯಲ್ಲಿ ಸಿದ್ಧಹಸ್ತರಾದಂತೆಯೇ ಒಳ್ಳೆಯ ಕತೆ ಕಾದಂಬರಿ ಗಳನ್ನು ರಚಿಸಿದ್ದಾರೆ. ಈ ಕಾದಂಬರಿಯಲ್ಲಿ ಪ್ರತಿಯೊಂದು ಸನ್ನಿವೇಶದ ಲ್ಲಿಯೂ ಸಾರ್ಥಕವಾದ ಶಬ್ದ ಸಂಪತ್ತಿನಿಂದ ಅಲ್ಲಲ್ಲಿ ಅದರ ವಿಶ್ಲೇಷಣ ಮಾಡಿ ತೋರಿಸಿರುತ್ತಾರೆ.

ನವಯುಗ —

ಇಲ್ಲಿರುವುದು ಉದಾತ್ತ ಸಂಸ್ಕಾರವುಳ್ಳ ಸ್ತ್ರೀಯ ಚರಿತ್ರ ಚಿತ್ರಣ. ಕಾವ್ಯಮಯವಾದ ಶೈಲಿ. ಸಹಾನುಭೂತಿಯಿಂದ ತುಂಬಿದ ದೃಷ್ಟಿಕೋನ. ಶ್ರೀ ವೆಂಕಟರಾಜರ ಲೇಖನಿ ಹೃದಯ ಸ್ಪರ್ಶಿಯಾಗುವಂತೆ ಈ ಕಾದಂಬರಿ ಯನ್ನು ಬರೆದಿದೆ.

ಸುದರ್ಶನ—

ಕಾದಂಬರಿಯುದ್ದಕ್ಕೂ ಹರಿಯುತ್ತಿರುವ ನಿರ್ಮಲವಾದ ಹಾಗೂ ರಸಮುಗ್ಧವಾದ ಮಾತುಗಾರಿಕೆ ಮನಸ್ಸನ್ನು ಪೂರ್ಣಸೆರೆಗೊಳ್ಳುವುದು.

Majestic Press, Udipi.